ಮೇ 2019

₹ 15/-

# ಯುಗರಶ್ಮಿ

## ತ್ರೈಮಾಸಿಕ



- ಲೋಕದಲ್ಲಿ ಶಾಂತಿ ಸ್ಥಾಪನೆಗಿರುವ ಮಾರ್ಗಗಳು
- ಶಾಂತಿಪ್ರಿಯ ಮಹಾನುಭಾವ
- ಮಹಿಳೆಯರ ಹಕ್ಕುಗಳು ಮತ್ತು ಸಮಾನತೆ
- ಧರ್ಮ ಸ್ಥಾಪಕರನ್ನು ಗೌರವಿಸುವುದು ಜಾಗತಿಕ ಶಾಂತಿಗೆ ಬುನಾದಿ
- ತನ್ನ ಮರಣದ ಬಗ್ಗೆ ಹಝ್ರತ್ ಈಸಾ ಮಸೀಹರ(ಅ) ಸ್ವತಃ ಹೇಳಿಕೆ
- ರಮಝಾನ್ ಮತ್ತು ತಖ್ವ

"ಸಕಲ ಮಾನವರಿಗೆ ಸನ್ಮಾರ್ಗ ದರ್ಶಕವಾದ, ಮಾರ್ಗದರ್ಶನ ಮತ್ತು ಸತ್ಯಾಸತ್ಯ ವಿವೇಚನೆಯ ಸ್ಪಷ್ಟವಾದ ಸಾಕ್ಷ್ಯಗಳಿಂದ ಕೂಡಿದ ಖುರ್‌ಆನ್ ಅವತೀರ್ಣವಾದ ಮಾಸವಾಗಿದೆ ರಮಝಾನ್. ಆದ್ದರಿಂದ ನಿಮ್ಮ ಪೈಕಿ ಯಾರಾದರೂ ಈ ಮಾಸವನ್ನು ಪಡೆದರೆ ಆತನು ಅದರಲ್ಲಿ ಉಪವಾಸ ಮಾಡಲಿ. ಆದರೆ ಯಾರಾದರೂ ರೋಗಿ ಅಥವಾ ಪ್ರಯಾಣಿಕನಾಗಿದ್ದಲ್ಲಿ ಬೇರೆ ದಿನಗಳಲ್ಲಿ ಆ ಸಂಖ್ಯೆಯನ್ನು ಪೂರ್ತಿಗೊಳಿಸಲಿ. ಅಲ್ಲಾಹನು ನಿಮಗೆ ಸೌಲಭ್ಯವನ್ನು ಇಚ್ಛಿಸುತ್ತಾನೆ; ನಿಮಗೆ ಕಷ್ಟ ಕೊಡಲು ಇಚ್ಛಿಸುವುದಿಲ್ಲ. (ಇದು) ನೀವು ಸಂಖ್ಯೆಯನ್ನು ಪೂರ್ಣಗೊಳಿಸಲಿಕ್ಕೂ ನಿಮಗೆ ಮಾರ್ಗದರ್ಶನ ಮಾಡಿದುದಕ್ಕಾಗಿ ಅಲ್ಲಾಹನ ಸ್ತುತಿಕೀರ್ತನ ಮಾಡಲಿಕ್ಕೂ ನೀವು ಕೃತಜ್ಞತೆ ಸೂಚಿಸಲಿಕ್ಕೂ ಆಗಿದೆ. (ಪವಿತ್ರಖುರ್‌ಆನ್ 2 : 186)

ವಿಷಯ ಸೂಚಿಕೆ — ಪುಟ


* ವ್ರತಾನುಷ್ಠಾನ 1
* ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು 2
* ಲೋಕದಲ್ಲಿ ಶಾಂತಿಸ್ಥಾಪನೆಗಿರುವ ಮಾರ್ಗಗಳು 3
* ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಶಾಂತಿಪ್ರಿಯ ಮಹಾನುಭಾವ 6
* ಮಹಿಳೆಯರ ಹಕ್ಕುಗಳು ಮತ್ತು ಸಮಾನತೆ 10
* ಧರ್ಮ ಸ್ಥಾಪಕರನ್ನು ಗೌರವಿಸುವುದು ಜಾಗತಿಕ ಶಾಂತಿಗೆ ಬುನಾದಿ 16
* ತನ್ನ ಮರಣದ ಬಗ್ಗೆ ಹಝ್ರತ್ ಈಸಾ ಮಸೀಹರ(ಅ) ಸ್ವತಃ ಹೇಳಿಕೆ 20
* ರಮಝಾನ್ ಮತ್ತು ತಖ್ವಾ 23
* ವಾರ್ತೆಗಳು : 27
  - ನ್ಯೂಝಿಲೇಂಡ್ ಆಕ್ರಮಣ ಖಂಡನೀಯ
  - ಹುಮ್ಯಾನಿಟಿ ಫಸ್ಟ್ ಇಂಡಿಯಾದಿಂದ ಕುಡಿಯುವ ನೀರಿನ ಕೊಡುಗೆ
  - ದೇವನ ಅನುಗ್ರಹ ಪ್ರಾಪ್ತಿಗೆ ಪ್ರಾರ್ಥನೆ ಅತ್ಯುತ್ತಮ ಮಾರ್ಗ
  - ಅಹ್ಮದಿಯಾ : ರೋಗಿಗಳಿಗೆ ಹಣ್ಣುಹಂಪಲು ವಿತರಣೆ • ಅಹ್ಮದಿಯಾ ಕಿರುಹೊತ್ತಗೆ ವಿತರಣೆ
* ನಿಧನ ವಾರ್ತೆಗಳು : • ಮೌಲಾನ ಖುರ್‌ಶೀದ್ ಅನ್ವರ್ ಸಾಹಿಬ್ • ಎಂ.ಸಿ. ಮುಹಮ್ಮದ್ ಸಾಹಿಬ್ 30
* ಪ್ರತಿಕ್ರಿಯೆ : ಶ್ರೀಲಂಕಾದ ಹತ್ಯಾಕಾಂಡ 31
* ಓದಿದ್ದು : 33
  - ಝಾಕೀರ್ ನಾಯ್ಕ್‌ನ 16 ಕೋಟಿ ರೂ. ಆಸ್ತಿ ಜಪ್ತಿ • 1500 ಮೀ. ಕೆಳಗೆ ಭಾರತೀಯರ ವಾಸ!
  - ಉಪವಾಸದಿಂದ ಆರೋಗ್ಯ ವೃದ್ಧಿ • ಅವಿವಾಹಿತ ಪಾದ್ರಿ ಆಯ್ಕೆ ಕಷ್ಟ: ಪೋಪ್ ಫ್ರಾನ್ಸಿಸ್
  - ಕೆಲವು ಧರ್ಮಗುರು, ಬಿಷಪ್‌ರಿಂದ ಲೈಂಗಿಕ ಕಿರುಕುಳ: ಪೋಪ್ • ಶೌಚ ಕೆಲಸಕ್ಕೆ ಪದವೀಧರರ ಅರ್ಜಿ
  - ಹುಟ್ಟಿಸಿದ್ದಕ್ಕೆ ಪೋಷಕರ ವಿರುದ್ಧವೇ ದಾವೆ • ಕಾಶ್ಮೀರ: ಜಮಾತೆ ಇಸ್ಲಾಮಿಗೆ ದಿಗ್ಬಂಧನ
  - ಲೈಂಗಿಕ ಕಿರುಕುಳ ಆರೋಪ: ಪ್ರಮುಖ ಕಾರ್ಡಿನಲ್ ದೋಷಿ • ನಾಯಕರ ಪಾದ ಚುಂಬಿಸಿದ ಪೋಪ್
* ಸಂಪಾದಕರಿಗೆ ಪತ್ರ 36


# ಯುಗರಶ್ಮಿ

## ಯುಗರಶ್ಮಿಗೆ ಧನಸಹಾಯ ನೀಡಿದ ಉದಾರಮತಿಗಳು

ಜನಾಬ್ ಜೆ. ಎ. ಚಿಕ್ಕೋಡಿ ಸಾಹಿಬ್, ಬೆಳಗಾಂ : ರೂ. 1000/-

ಮುಖಪುಟ ಚಿತ್ರ : ಮುಖಪುಟಚಿತ್ರ : ಅಹ್ಮದಿಯಾ ಮುಸ್ಲಿಂ ಜಮಾಅತ್ ಮಸ್ಜಿದ್, ಬೈತುಲ್ ಆಫಿಯತ್ ಫಿಲಡೆಲ್ಫಿಯಾ, ಯು.ಎಸ್.ಎ.


ಬಿಡಿ ಪ್ರತಿ : ರೂ. 15/- ವಾರ್ಷಿಕ ಚಂದಾ : ರೂ. 60/- ಅಂಚೆ ಮೂಲಕ : ರೂ. 70/-

ವಿಳಾಸ : 10-23-1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು - 575 001.

بِسۡمِ اللّٰہِ الرَّحۡمٰنِ الرَّحِیۡمِ
نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ

# ಯುಗರಶ್ಮಿ

ಮೇ 2019

ಸಂಪಾದಕ : ಮುಹಮ್ಮದ್ ಯೂಸುಫ್

ಆರಂಭ : 1975 | ಸಂಪುಟ : 35 | ಹಿಜ್‌ರತ್ : 1398 ಹಿಜರೀ ಶಮ್ಸೀ | ಸಂಚಿಕೆ : 3-4

## ವ್ರತಾನುಷ್ಠಾನ

ಆಹಾರವನ್ನು ಕಡಿಮೆ ಮಾಡುವುದು ಮತ್ತು ಹಸಿವನ್ನು ಸಹಿಸುವುದು ಆತ್ಮದ ಸಂಸ್ಕಾರಕ್ಕೂ ಉನ್ನತಿಗೂ ಅತ್ಯಾವಶ್ಯಕವಾದ ಒಂದು ಕರ್ಮವಾಗಿದೆ. ಅದು ಆತ್ಮ ದರ್ಶನ ಶಕ್ತಿಯನ್ನು ಪೋಷಿಸುತ್ತದೆ. ಮನುಷ್ಯನು ಜೀವಿಸುವುದು ಭಕ್ಷ್ಯ ಪೇಯಾದಿಗಳಿಂದ ಮಾತ್ರವಲ್ಲ. ಈ ಜೀವಿತದ ನಂತರ ಅವನಿಗೆ ಮತ್ತೊಂದು ಜೀವಿತ ಸಹ ಇದೆ. ಶಾಶ್ವತವಾದ ಪಾರತ್ರಿಕ ಜೀವಿತವನ್ನು ಅಲಕ್ಷ್ಯ ಮಾಡುವುದರಿಂದ ಮನುಷ್ಯನು ದೇವನಿಂದ ಬೇರ್ಪಟ್ಟು ಅವನ ಕೋಪಕ್ಕೆ ಸ್ವಯಂ ಗುರಿಯಾಗುತ್ತಾನೆ.

ವ್ರತಾನುಷ್ಠಾನದ ಉದ್ದೇಶ, ಒಂದು ಕ್ಲಪ್ತ ಕಾಲದವರೆಗೆ ಪಾನಾಶನಾದಿಗಳನ್ನು ವರ್ಜಿಸಿ, ಹಸಿವನ್ನು ಸಹಿಸುವುದು ಮಾತ್ರವಲ್ಲವೆಂದು ನೆನಪಿಡಬೇಕಾಗಿದೆ. ವ್ರತಾನುಷ್ಠಾನಿಯು ಎಲ್ಲ ವಿಧ ದೋಷಗಳಿಂದ ದೂರವಿದ್ದು, ದೇವಸ್ಮರಣೆಯಲ್ಲಿ ಹೆಚ್ಚು ಸಮಯವನ್ನು ವ್ಯಯಿಸಬೇಕಾದುದು ಅತ್ಯಾವಶ್ಯಕವಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವಸಲ್ಲಂ) ರಮಝಾನ್ ಮಾಸದಲ್ಲಿ ಬಹಳ ಹೆಚ್ಚು ದೇವಾರಾಧನೆಯಲ್ಲಿ ಮಗ್ನರಾಗಿರುತ್ತಿದ್ದರು. ಒಟ್ಟಾರೆ, ಉಪವಾಸ ಕಾಲದಲ್ಲಿ ಆಹಾರ ಪಾನೀಯಗಳಿಗೆ ಸಂಬಂಧಿಸಿದ ವಿಚಾರಗಳಿಂದ ವಿರಮಿಸಿ, ಆ ಬಗೆಯ ಕಾರ್ಯಗಳನ್ನು ಉಪೇಕ್ಷಿಸಿ, ಶ್ರದ್ಧೆಯನ್ನೆಲ್ಲ ದೇವನ ಕಡೆಗೆ ಇರಿಸಬೇಕಾಗಿದೆ. ಭೌತಿಕ ಭಕ್ಷ್ಯ ವಸ್ತುಗಳು ಲಭಿಸಿ ಆಧ್ಯಾತ್ಮಿಕ ಆಹಾರದ ಕುರಿತು ಚಿಂತನೆ ಮಾಡದ ಮನುಷ್ಯನನ್ನು ಭಾಗ್ಯಹೀನನೆಂದೇ ಹೇಳಬಹುದು. ಆಹಾರವನ್ನು ಸೇವಿಸುವುದರಿಂದ ಶರೀರಕ್ಕೆ ಬಲವೂ ಓಜಸ್ಸೂ ಲಭಿಸುವಂತೆ ಆಧ್ಯಾತ್ಮಿಕಾಹಾರದ ಮೂಲಕ ಆತ್ಮಕ್ಕೆ ರಕ್ಷಣೆಯೂ ಆತ್ಮ ಶಕ್ತಿಗಳಿಗೆ ಚೈತನ್ಯವೂ ದೊರಕುತ್ತದೆ. ಎಲ್ಲ ವಿಧ ಸಫಲತೆಗಳ ಬಾಗಿಲು ದೇವಾನುಗ್ರಹದಿಂದ ತೆರೆಯಲ್ಪಡುವುದರಿಂದ ವಿಜಯ ಲಬ್ಧಿಗಾಗಿ ಅವನಿಂದಲೇ ಸಹಾಯ ಯಾಚಿಸಬೇಕಾಗಿದೆ.

**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**
ಅಹ್ಮದಿಯಾ ಮುಸ್ಲಿಂ ಜಮಾಅತಿನ ಸ್ಥಾಪಕರು

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

* ವಿಶ್ವಾಸದಿಂದ ಮತ್ತು ಪ್ರತಿಫಲೇಚ್ಛೆಯಿಂದ ಯಾರಾದರೂ ರಮಝಾನ್ ರಾತ್ರಿಯಲ್ಲಿ ನಮಾಝ್ ಮಾಡಿದರೆ ಅವನ ಪೂರ್ವ ಪಾಪಗಳು ಕ್ಷಮಿಸಲ್ಪಡುವುವು. (ಬುಖಾರಿ)

* ವಿಶ್ವಾಸದಿಂದ ಮತ್ತು ಪ್ರತಿಫಲೇಚ್ಛೆಯಿಂದ ಯಾರಾದರೂ ರಮಝಾನ್ ವ್ರತಾನುಷ್ಠಾನ ಮಾಡಿದರೆ ಅವನ ಪೂರ್ವ ಪಾಪಗಳು ಕ್ಷಮಿಸಲ್ಪಡುವುವು. (ಬುಖಾರಿ)

* ರಮಝಾನಿನ ಹೊರತಿರುವ ಉಪವಾಸಗಳ ಪೈಕಿ ಅತ್ಯುತ್ತಮವಾದುದು ಮುಹರ್ರಂ ಮಾಸದ ಉಪವಾಸವಾಗಿದೆ. ಹಾಗೆಯೇ ಫರ್ಝ್ ನಮಾಝ್ ನಂತರ ನಮಾಝ್‌ಗಳ ಪೈಕಿ ಅತ್ಯುತ್ತಮವಾದುದು ರಾತ್ರಿಯ ಸುನ್ನತ್ ನಮಾಝ್ ಆಗಿದೆ. (ಮುಸ್ಲಿಂ)

* ರಾತ್ರಿಯಲ್ಲಿ ಎದ್ದು ನಮಾಝ್ ಮಾಡಿದವನನ್ನೂ ಪತ್ನಿಯನ್ನು ಕರೆದು ಎಬ್ಬಿಸಿ, ಅವಳು ಏಳದಿದ್ದಾಗ ಮುಖಕ್ಕೆ ನೀರು ಚಿಮುಕಿಸಿ ಎಬ್ಬಿಸುವವನನ್ನೂ ಅಲ್ಲಾಹು ಅನುಗ್ರಹಿಸಲಿ. ಅದೇ ಪ್ರಕಾರ, ರಾತ್ರಿ ಎದ್ದು ನಮಾಝ್ ಮಾಡಿ, ಪತಿಯನ್ನು ಕರೆದು ಎಬ್ಬಿಸಿ, ಅವನು ಏಳದಿದ್ದಾಗ ಮುಖಕ್ಕೆ ನೀರು ಚಿಮುಕಿಸಿ ಎಬ್ಬಿಸುವವಳನ್ನೂ ಅಲ್ಲಾಹು ಅನುಗ್ರಹಿಸಲಿ. (ಅಬೂದಾವೂದ್)

* ನಿಮ್ಮಲ್ಲಿ ಯಾರಾದರೂ ರಾತ್ರಿ ಎದ್ದು ನಮಾಝ್ ಮಾಡುವಾಗ ಖುರ್‌ಆನ್ ಓದಲು ನಾಲಗೆಯಲ್ಲಿ ಪ್ರಯಾಸವಾಗುವುದಾದರೆ ಮತ್ತು ಹೇಳುವುದನ್ನು ಗ್ರಹಿಸಲು ಅಸಾಧ್ಯವಾಗುವುದಾದರೆ ನಿದ್ರೆ ಮಾಡಿರಿ. (ಮುಸ್ಲಿಂ)

* ಉಪವಾಸ ಗುರಾಣಿಯಾಗಿದೆ. ನಿಮ್ಮಲ್ಲಿ ಯಾರಾದರೂ ಉಪವಾಸಿಗನಾಗಿದ್ದರೆ ಆತನು ಅನಾವಶ್ಯ ಮಾತನಾಡಬಾರದು, ಜಗಳ ಮಾಡಬಾರದು, ಬೈಯ್ಯಬಾರದು. ಯಾರಾದರೂ ಜಗಳಕ್ಕೆ ಬಂದರೆ ನಾನು ಉಪವಾಸಿಗ ಎಂದು ಹೇಳಲಿ. (ಬುಖಾರಿ)

* ಯಾರು ಸುಳ್ಳು ಹೇಳುವುದರಿಂದ ಮತ್ತು ಅದಕ್ಕನುಗುಣವಾಗಿ ವರ್ತಿಸುವುದರಿಂದ ಬಿಟ್ಟು ನಿಲ್ಲುವುದಿಲ್ಲವೋ ಅವನು ಹಸಿವೆ ಮತ್ತು ದಾಹ ಸಹಿಸುವುದರಿಂದ ಏನೂ ಪ್ರಯೋಜನವಿಲ್ಲ. (ಬುಖಾರಿ)

* ರಮಝಾನ್ ಮಾಸ ಆಗಮಿಸಿದರೆ ಸ್ವರ್ಗದ ಬಾಗಿಲುಗಳು ತೆರೆಯಲ್ಪಡುವುವು; ನರಕದ ಬಾಗಿಲುಗಳು ಮುಚ್ಚಲ್ಪಡುವುವು; ಶೈತಾನ್ ಬಂಧಿಸಲ್ಪಡುವನು. (ಬುಖಾರಿ)

* ನೀವು ಸಹರಿ ಉಂಡು ಉಪವಾಸ ಮಾಡಿರಿ; ಸಹರಿಯಲ್ಲಿ ಅನುಗ್ರಹವಿದೆ. (ಬುಖಾರಿ)

* ಇಫ್ತಾರ್ ಮಾಡಲು ಜನರು ಅವಸರಪಡುವ ಕಾಲ ತನಕ ಒಳಿತು ಮತ್ತು ಅನುಗ್ರಹ ಪ್ರಾಪ್ತವಾಗುವುದು. (ಬುಖಾರಿ)

# ಲೋಕದಲ್ಲಿ ಶಾಂತಿಸ್ಥಾಪನೆಗಿರುವ ಮಾರ್ಗಗಳು

## *ಲೋಕದಲ್ಲಿ ಸ್ಥಿರವಾಗಿ ಕಾಪಾಡಿಕೊಳ್ಳಬಹುದಾದ ಶಾಂತಿಯನ್ನು ಸ್ಥಾಪಿಸಲು ಆವಶ್ಯಕವಾದ ಮೂಲಭೂತ ಕ್ರಮಗಳು.*

ಇಂದಿನ ಲೋಕ ಸಂಘರ್ಷ, ನೋವು ಮತ್ತು ಯುದ್ಧದಿಂದ ಸುತ್ತುವರಿಯಲ್ಪಟ್ಟಿದೆ ಎಂಬುದು ರಹಸ್ಯವಾದುದೇನೂ ಅಲ್ಲ. ನಾವು ಮುಂದಿನ ಪೀಳಿಗೆಗೋಸ್ಕರ ಲೋಕವನ್ನು ಸಂರಕ್ಷಿಸಲು ಬಯಸುವೆವಾದರೆ, ನಮ್ಮ ಮಕ್ಕಳು ಮತ್ತು ಮಕ್ಕಳ ಮಕ್ಕಳು ಹೆಚ್ಚು ಸುರಕ್ಷಿತವಾದ, ಹೆಚ್ಚು ಶಾಂತಿಭರಿತ ಲೋಕದಲ್ಲಿ ಜೀವಿಸಲಿ ಎಂದು ಬಯಸುವೆವಾದರೆ ನಾವು ಶಾಂತಿ ಸ್ಥಾಪನೆಗಿರುವ ಮಾರ್ಗದಲ್ಲಿ ಚಲಿಸಲು ಹೆಜ್ಜೆ ಮುಂದಿಡುವಾಗ ಪ್ರಾಯೋಗಿಕ ಕ್ರಮಗಳನ್ನು ಕೈಗೊಳ್ಳುವುದು ಆವಶ್ಯಕವಾಗಿದೆ.

ಅಹ್ಮದಿಯಾ ಮುಸ್ಲಿಮ್ ಜಮಾಅತ್ ಯಾವಾಗಲೂ ಜನಾಂಗಗಳ ಮಧ್ಯೆ, ಧರ್ಮಗಳ ಮಧ್ಯೆ, ವಂಶಗಳ ಮಧ್ಯೆ ಶಾಂತಿ ಮತ್ತು ಪರಸ್ಪರ ಸಹಕಾರವನ್ನು ಪ್ರೋತ್ಸಾಹಿಸುತ್ತಾ ಇದೆ. ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋಚ್ಚ ನಾಯಕ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ದಣಿವಿಲ್ಲದೆ ಯು.ಕೆ, ಯುರೋಪು ಮತ್ತು ಯು.ಎಸ್. ಗಳಲ್ಲೂ ಭಾಷಣ ಮಾಡುತ್ತಾ ಮತ್ತು ಲೋಕದ ರಾಜಕೀಯ ಹಾಗೂ ಧಾರ್ಮಿಕ ನಾಯಕರಿಗೆ ಪತ್ರಗಳನ್ನು ಬರೆದು ಲೋಕದಲ್ಲಿ ವಾಸ್ತವಿಕ ಶಾಂತಿ ಸ್ಥಾಪಿಸಲು ಆವಶ್ಯಕವಾದ ಪರಿಹಾರ ಮಾರ್ಗಗಳ ಬಗ್ಗೆ ಸೂಚಿಸುತ್ತಾ ಅವರನ್ನು ಆಗ್ರಹಪಡಿಸುತ್ತಾ ಇರುತ್ತಾರೆ.

ಈ ಪತ್ರಗಳು ಮತ್ತು ಭಾಷಣಗಳನ್ನು **"ವರ್ಲ್ಡ್ ಕ್ರೈಸಿಸ್ ಆ್ಯಂಡ್ ಪಾತ್‌ವೇ ಟು ಪೀಸ್"** ಎಂಬ ಪುಸ್ತಕದಲ್ಲಿ ಸಂಗ್ರಹಿಸಿ ಪ್ರಕಟಿಸಲಾಗಿದೆ. ಲೋಕದಲ್ಲಿ ಶಾಂತಿಯನ್ನೂ ಸೌಹಾರ್ದವನ್ನೂ ಸ್ಥಾಪಿಸಿ ಸಂಘರ್ಷವನ್ನು ಕೊನೆಗೊಳಿಸಲು ಆವಶ್ಯಕವಾಗಿ ನಾವು ಕೈಗೊಳ್ಳಬೇಕಾದ ಕ್ರಮಗಳನ್ನು ಅದರಲ್ಲಿ ಸೂಚಿಸಲಾಗಿದೆ.

ಅಹ್ಮದಿಯಾ ಮುಸ್ಲಿಮ್ ಜಮಾಅತ್ **"ಪಾತ್‌ವೇ ಟು ಪೀಸ್"** ಎಂಬ ಚಳುವಳಿಯನ್ನು ಇದೇ ಉದ್ದೇಶಕ್ಕೋಸ್ಕರ ಜಾಗತಿಕವಾಗಿ ಪ್ರಾರಂಭಿಸಿದೆ ಮತ್ತು ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಸೂಚಿಸಿದ ಪರಿಹಾರ ಮಾರ್ಗಗಳನ್ನು ಪ್ರಚಾರ ಮಾಡುತ್ತಿದೆ. ನಾವು ಈ ಚಳುವಳಿಯ ಮೂಲಭೂತ ಕ್ರಮಗಳನ್ನು ನಿಮ್ಮ ಮುಂದಿರಿಸುತ್ತೇವೆ.

### ಸೃಷ್ಟಿಕರ್ತನನ್ನು ಗುರುತಿಸುವುದು

"ನೀವೊಂದು ಕಲಾಕೃತಿಯನ್ನು ಪ್ರೀತಿಸುವಿರಾದರೆ ನೀವು ಅದನ್ನು ರಚಿಸಿದ ಕಲಾವಿದರನ್ನು ಪ್ರೀತಿಸಬೇಕು. ನೀವು ಸೃಷ್ಟಿಗಳನ್ನು ಪ್ರೀತಿಸುವಿರಾದರೆ ಸೃಷ್ಟಿಕರ್ತನನ್ನು ಪ್ರೀತಿಸಬೇಕು."

*– ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್, ಅಹ್ಮದಿಯಾ ಮುಸ್ಲಿಮ್ ಜಮಾಅತಿನ ನಾಲ್ಕನೆಯ ಖಲೀಫ.*

ನಾವು ನಮ್ಮ ಸೃಷ್ಟಿಕರ್ತನ ಕುರಿತು ಸರಿಯಾದ ಜ್ಞಾನವನ್ನು ಪಡೆದರೆ ನಾವು ಯಾವ ಧರ್ಮದ ಅನುಯಾಯಿಗಳಾಗಿದ್ದರೂ ಎಲ್ಲ ಜನರನ್ನು, ಅವರು ಯಾವ ರಾಷ್ಟ್ರೀಯತೆ, ವಂಶ ಅಥವಾ ವರ್ಗಕ್ಕೆ ಸೇರಿದವರಾದರೂ ಒಬ್ಬನೇ ಸೃಷ್ಟಿಕರ್ತನಿಂದ ಸೃಷ್ಟಿಸಲ್ಪಟ್ಟವರೆಂದು ತಿಳಿಯುವೆವು ಮತ್ತು ಜನರ ರಾಷ್ಟ್ರೀಯತೆ ಮೊದಲಾದುವು ಕೇವಲ ಅವರನ್ನು ಗುರುತಿಸಲು ಬಳಸುವ ಪದಗಳೆಂದು ಮನವರಿಕೆ ಮಾಡಿಕೊಳ್ಳುವೆವು.

ನಮ್ಮ ಹಿನ್ನೆಲೆ ಬೇರೆ ಬೇರೆಯಾಗಿದ್ದರೂ ನಾವೆಲ್ಲರೂ ಮಾನವೀಯತೆಯ ಹಿತಕ್ಕೋಸ್ಕರ ಒಟ್ಟಿಗೆ ಸೇರಬೇಕು. ನಾವೆಲ್ಲರೂ ಜೊತೆಸೇರಿ ಮಾನವೀಯ ಮೌಲ್ಯಗಳನ್ನು ಸಮರ್ಥಿಸಬೇಕು ಮತ್ತು ನಾವು ಜೀವಿಸುವ ಈ ಲೋಕವನ್ನು ಉತ್ತಮವೂ ಹೆಚ್ಚು ಸೌಹಾರ್ದಮಯವೂ ಆಗಿ ಪರಿವರ್ತಿಸಲು ಪ್ರಯತ್ನಿಸಬೇಕು.

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಶಾಶ್ವತ ಮೌಲ್ಯವುಳ್ಳ ಮಾತುಗಳಲ್ಲಿ ಹೇಳುವುದಾದರೆ, "ಒಬ್ಬ ಕಪ್ಪು ವರ್ಣದವನು ಬಿಳಿ ವರ್ಣದವನಿಗಿಂತ ಶ್ರೇಷ್ಠನಲ್ಲ; ಅದೇ ರೀತಿ ಒಬ್ಬ ಬಿಳಿ ವರ್ಣದವನು ಕಪ್ಪು ವರ್ಣದವನಿಗಿಂತಲೂ ಶ್ರೇಷ್ಠನಲ್ಲ."

ನಾವು ಈ ಮೂಲಭೂತ ತತ್ವವನ್ನು ಅರಿತುಕೊಂಡರೆ ಮಾತ್ರ ಲೋಕದಲ್ಲಿ ಇಂದಿಗಿಂತ ಹೆಚ್ಚು ಶಾಂತಿಮಯ ಸಮಾಜವನ್ನು ಸೃಷ್ಟಿಸಲು ಶಕ್ತರಾಗುವೆವು.

### ದೇಶಗಳ ಮಧ್ಯೆ ಜಾಗತಿಕ ಸಹಕಾರದಿಂದ ಐಕ್ಯತೆ

ಎಲ್ಲ ಜನಾಂಗಗಳ, ಎಲ್ಲ ಧರ್ಮಗಳ ಮತ್ತು ಎಲ್ಲ ಸಂಸ್ಕೃತಿಗಳ ಜನರು ಚದುರಿಹೋಗಿ ಜಗತ್ತಿನಾದ್ಯಂತ ಹರಡಿಹೋಗಿದ್ದಾರೆ ಹಾಗೂ ವಿವಿಧ ಸಂಸ್ಕೃತಿಗಳಿಗೆ ಮತ್ತು ವಿಭಿನ್ನತೆಗಳಿಗೆ ಒಂದು ಹೊಸ ಹೆಸರು ನೀಡಿದ್ದಾರೆ. ವಿವಿಧ ಜನಾಂಗಗಳ ಐಕ್ಯತೆಗೆ ಜಾಗತಿಕ ನಾಯಕರ ಐಕ್ಯತೆ ಸಹ ಆವಶ್ಯಕವಾಗಿದೆ.

ಇಂದಿನ ಲೋಕ ಒಂದು ಜಾಗತಿಕ ಗ್ರಾಮವಾಗಿದೆ. ಈ ಜಾಗತಿಕ ಗ್ರಾಮದಲ್ಲಿ ಪ್ರತಿಯೊಂದು ದೇಶ ಇನ್ನೊಂದು ದೇಶದ ಅವಲಂಬನೆಗೊಳಪಟ್ಟಿರುತ್ತದೆ. ಅಂತರ್‌ರಾಷ್ಟ್ರೀಯ ವಾಣಿಜ್ಯ ಒಂದು ಪರಿಪೂರ್ಣ ಉದಾಹರಣೆಯಾಗಿದೆ. ಪ್ರಾಕೃತಿಕ ಸಂಪನ್ಮೂಲಗಳನ್ನು ಮಾರಾಟ ಮಾಡುತ್ತಾ ಒಂದು ದೇಶ ಇನ್ನೊಂದು ದೇಶವನ್ನು ಅವಲಂಬಿಸುತ್ತದೆ ಮತ್ತು ಆ ಮೂಲಕ ಆರ್ಥಿಕ ಅಭಿವೃದ್ಧಿ ಉಂಟಾಗುತ್ತದೆ. ಆದರೆ ಒಂದು ದೇಶ ಇನ್ನೊಂದು ದೇಶದ ಹಕ್ಕುಗಳನ್ನು ಕಿತ್ತುಕೊಳ್ಳಲು ಪ್ರಯತ್ನಿಸುವಾಗ ಮತ್ತು ಬಡದೇಶದ ಸಂಪನ್ಮೂಲಗಳನ್ನು ವಶಪಡಿಸಿಕೊಳ್ಳುವಾಗ ಏನಾಗುತ್ತದೆ? ಆಗ ಪ್ರಕ್ಷುಬ್ಧತೆ, ಆತಂಕ, ಸಮಾಜದ ಶಕ್ತಿ ಹರಣ ಸಂಭವಿಸುತ್ತದೆ. ಅದು ನಮ್ಮ ಜಾಗತಿಕ ಗ್ರಾಮವನ್ನು ಬಲಹೀನಗೊಳಿಸುತ್ತದೆ ಮತ್ತು ಅಂತರ್‌ರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯ ತತ್ವಕ್ಕೆ ಭಂಗವುಂಟಾಗುತ್ತದೆ.

ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋಚ್ಚ ನಾಯಕ ಹೇಳುತ್ತಾರೆ: "ಕ್ರೂರ ಕೃತ್ಯಗಳನ್ನು ನಿಲ್ಲಿಸಲೇಬೇಕು. ಏಕೆಂದರೆ ಅವುಗಳನ್ನು ಹರಡಲು ಬಿಟ್ಟರೆ ದ್ವೇಷದ ಜ್ವಾಲೆಗಳು ಸಂಪೂರ್ಣ ಲೋಕವನ್ನು ಸುತ್ತುವರಿಯುವುದು ಮತ್ತು ಅದು ಎಷ್ಟು ವ್ಯಾಪಿಸುವುದೆಂದರೆ ಜನರು ಪ್ರಚಲಿತ ಆರ್ಥಿಕ ಬಿಕ್ಕಟ್ಟಿನ ದುಷ್ಪರಿಣಾಮಗಳನ್ನು ಬೇಗನೆ ಮರೆತು

ಬಿಡುವರು."

ಅಂತರ್‍ರಾಷ್ಟ್ರೀಯ ಸೌಹಾರ್ದದ ಬಗ್ಗೆ ಇಸ್ಲಾಮ್ ಉಪದೇಶಿಸುವುದೇನೆಂದರೆ, ಪ್ರತೀಕಾರ ಮಾಡುವ ಆವಶ್ಯಕತೆ ಇದ್ದರೆ ಪ್ರತೀಕಾರವು ಅಕ್ರಮದ ಅನುಪಾತಕ್ಕೆ ಅನುಸಾರವಾಗಿರಬೇಕು. ಆದರೆ ಕ್ಷಮಿಸುವುದರಿಂದ ಸುಧಾರಣೆಯಾಗುವ ಪ್ರತೀಕ್ಷೆ ಇದ್ದರೆ ಆಗ ಕ್ಷಮಿಸುವುದನ್ನು ಆಯ್ಕೆ ಮಾಡಬೇಕು. ನೈಜ ಉದ್ದೇಶ ಯಾವಾಗಲೂ ಸುಧಾರಣೆ, ಸೌಹಾರ್ದ ಸ್ಥಾಪನೆ ಮತ್ತು ಶಾಶ್ವತವಾಗಿ ನೆಲೆನಿಲ್ಲುವಂತಹ ಶಾಂತಿಸ್ಥಾಪನೆಯಾಗಿರಬೇಕು.

## ಪರಿಪೂರ್ಣ ನ್ಯಾಯಪಾಲನೆ

"ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. (ಸದಾ) ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು" –*ಪವಿತ್ರ ಖುರ್‌ಆನ್ 5:9*

ನ್ಯಾಯ ಎಂಬ ಪರಿಕಲ್ಪನೆ ಮಾನವನ ಜೀವಿತದ ಪ್ರತಿಯೊಂದು ಭಾಗದಲ್ಲಿ ವ್ಯಾಪಿಸಿದೆ. ನಮ್ಮ ಮನೆಯಿಂದ ನಮ್ಮ ನಗರಗಳ ಮತ್ತು ದೇಶಗಳ ತನಕ ನ್ಯಾಯ ಪಾಲನೆ ಪ್ರತಿಯೊಂದು ಜೀವನ ಕ್ಷೇತ್ರದಲ್ಲಿ ಆವಶ್ಯಕವಾಗಿದೆ.

ಇವೆಲ್ಲ ಕ್ಷೇತ್ರಗಳೊಳಗೆ ಮುಖ್ಯವಾದುದೇನೆಂದರೆ, ನಾವು ನಮ್ಮ ಹಕ್ಕುಗಳ ಬಗ್ಗೆ ಮಾತ್ರವಲ್ಲ ಅನ್ಯರ ಹಕ್ಕುಗಳ ಬಗ್ಗೆ ಕಾಳಜಿ ಹೊಂದಿದವರಾಗಬೇಕು. ಪ್ರತಿಯೊಬ್ಬ ಮಾನವನ ಹೊಣೆಗಾರಿಕೆ ಏನೆಂದರೆ ಅವನು ಯಾವಾಗಲೂ ನ್ಯಾಯ ಪಾಲನೆಯ ಉನ್ನತ ಮಟ್ಟವನ್ನು, ಅದರ ಪರಿಣಾಮ ಅವನಿಗೆ ಅನುಕೂಲವಾಗುತ್ತದೆಯೋ ಪ್ರತಿಕೂಲವಾಗುತ್ತದೆಯೋ ಎಂಬುದನ್ನು ಪರಿಗಣಿಸದೆ ಕಾಪಾಡಿಕೊಳ್ಳಬೇಕು.

ನ್ಯಾಯ ಪಾಲನೆ ಬಗ್ಗೆ ಬೆಳಕು ಬೀರುತ್ತಾ ಪವಿತ್ರ ಖುರ್‌ಆನ್ ಅಧ್ಯಾಯ 4 ವಚನ 136ರಲ್ಲಿ ಹೀಗೆ ಹೇಳುತ್ತದೆ: "ನೀವು ಪರಿಪೂರ್ಣವಾದ ನ್ಯಾಯ ನಿಷ್ಠೆಯುಳ್ಳವರೂ ಅಲ್ಲಾಹನಿಗೋಸ್ಕರ ಸಾಕ್ಷ್ಯ ವಹಿಸುವವರೂ ಆಗಿರಿ; ಅದು ನಿಮಗೆ ಅಥವಾ (ನಿಮ್ಮ) ಮಾತಾಪಿತರಿಗೆ ಅಥವಾ ನಿಕಟ ಬಂಧುಗಳಿಗೆ ವಿರುದ್ಧವಾಗಿದ್ದರೂ ಸರಿ."

ಇದೊಂದು ಸುವರ್ಣ ತತ್ವವಾಗಿದೆ. ನೈಜ ನ್ಯಾಯಪಾಲನೆ ಆವಶ್ಯಪಡುವುದೇನೆಂದರೆ ಹೆಚ್ಚಿನ ಒಳಿತಿಗೋಸ್ಕರ ಸ್ವಾರ್ಥವನ್ನು ಕೈಬಿಡಬೇಕು.

## ಉಗ್ರಗಾಮಿತ್ವವನ್ನು ತಿರಸ್ಕರಿಸಿರಿ

"ಭೂಮಿಯಲ್ಲಿ ಗಲಭೆ ಗೊಂದಲಗಳನ್ನು ಸೃಷ್ಟಿಸಲು ಪ್ರಯತ್ನ ಮಾಡಬೇಡಿ. ಖಂಡಿತವಾಗಿಯೂ ಅಲ್ಲಾಹನು ಗೊಂದಲಗಾರರನ್ನು ಪ್ರೀತಿಸುವುದಿಲ್ಲ." – *ಪವಿತ್ರ ಖುರ್‌ಆನ್ 28:78*

ಲೋಕದಲ್ಲಿ ಗಲಭೆ ಗೊಂದಲಗಳನ್ನು ಸೃಷ್ಟಿಸುವುದನ್ನು ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಮಾನವರಿಗೆ ನಿಷಿದ್ಧಗೊಳಿಸಿದೆ. ಯಾವುದೇ ವ್ಯಕ್ತಿ, ಸರಕಾರ ಅಥವಾ ದೇಶದ ವಿರುದ್ಧ ಯಾವುದೇ ಕಾರಣದಿಂದ ಭಯೋತ್ಪಾದಕ ಕೃತ್ಯ ನಡೆಸುವುದಕ್ಕೆ ಯಾವ ಸಮರ್ಥನೀಯ ಕಾರಣವೂ ಇಲ್ಲ. ನಾವು ಐಕ್ಯದಿಂದಿರುವುದು ಮತ್ತು ಎಲ್ಲ ವಿಧ ಹಿಂಸಾಚಾರವನ್ನೂ ಉಗ್ರಗಾಮಿತ್ವವನ್ನೂ ತಿರಸ್ಕರಿಸುವುದು ಅತ್ಯಂತ ಮುಖ್ಯವಾಗಿದೆ.

ಧರ್ಮದ ಹೆಸರಿನಲ್ಲಿ ಬರ್ಬರಕೃತ್ಯಗಳು ಮತ್ತು ಸ್ವೇಚ್ಛೆಯಿಂದ ಹಿಂಸಾಚಾರ ನಡೆಸುವುದು ವರ್ಧಿಸುತ್ತಿದೆ. ಆದುದರಿಂದ ಎಲ್ಲ ರೀತಿಯ ಭಯೋತ್ಪಾದಕ ಕೃತ್ಯಗಳ ವಿರುದ್ಧ ಹೋರಾಡಲು ಮಾನವರೆಲ್ಲರೂ ಒಗ್ಗೂಡಿಸುವುದು ಅತ್ಯಂತ ಮುಖ್ಯವಾಗಿದೆ.

ಮಕ್ಕದಲ್ಲಿ ಹನ್ನೆರಡು ವರ್ಷಗಳ ತೀವ್ರ ಹಿಂಸಾಚಾರಗಳಿಗೆ ಈಡಾದರೂ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಧರ್ಮದ ಹೆಸರಿನಲ್ಲಿ ಉಗ್ರಗಾಮಿ ಕೃತ್ಯ ನಡೆಸುವುದನ್ನು ತಿರಸ್ಕರಿಸಿದರು.

ನೆನಪಿನಲ್ಲಿಡಬೇಕಾದ ಮುಖ್ಯವಾದ ವಿಷಯವೇನೆಂದರೆ ಮುಸ್ಲಿಮ್ ದೇಶಗಳಲ್ಲಿ ನಡೆಸಲಾಗುವ ಕ್ರೂರ ಹಿಂಸಾಚಾರಗಳಿಗೆ ಮಾತ್ರವಲ್ಲ ಭಯೋತ್ಪಾದಕ ಕೃತ್ಯ ಎಂದು ಹೇಳಬೇಕಾಗಿರುವುದು. 15ನೇ ನ್ಯಾಶನಲ್ ಪೀಸ್ ಸಿಂಪೋಸಿಯಂನಲ್ಲಿ ಹಝ್ರತ್ ಮಸ್‌ರೂರ್ ಅಹ್ಮದ್ ಅವರು ಅತ್ಯಂತ ಚಿಂತಾರ್ಹವಾಗಿ ಹೇಳಿದರು: "ಇತ್ತೀಚೆಗಿನ ಭಯೋತ್ಪಾದಕ ಆಕ್ರಮಣಗಳ ಕಾರಣದಿಂದ ಮತ್ತು ನಿರಾಶ್ರಿತರು ಪಶ್ಚಿಮ ದೇಶಗಳಿಗೆ ಆಶ್ರಯ ಬೇಡಿಕೊಂಡು ಬಂದ ಕಾರಣದಿಂದ ಗತಕಾಲದ ಕರಾಳ ದಿನಗಳ ಭಯವನ್ನು ಹುಟ್ಟಿಸುವ ಅಪಾಯಕಾರಿ ರಾಷ್ಟ್ರೀಯತೆ ಪಶ್ಚಿಮ ದೇಶಗಳಲ್ಲಿ ಮೇಲೆದ್ದಿದೆ. ಅತ್ಯಂತ ಕಳವಳಕಾರಿ ವಿಷಯವೇನೆಂದರೆ ಬಲಪಂಥೀಯ ಗುಂಪುಗಳು ಹೆಚ್ಚು ವಾಚಾಳಿಗಳಾಗಿವೆ ಮತ್ತು ಅದರ ಸದಸ್ಯರ ಸಂಖ್ಯೆ ವರ್ಧಿಸಿದೆ ಹಾಗೂ ಅವರು ರಾಜಕೀಯವಾಗಿ ಸಹ ಲಾಭ ಪಡೆದಿದ್ದಾರೆ. ಈ ಜನರು ಸಹ ಉಗ್ರಗಾಮಿಗಳೇ ಆಗಿದ್ದಾರೆ. ಅವರು ಪಶ್ಚಿಮದ ಸಮಾಜಕ್ಕೆ ವಿಷ ಪ್ರಯೋಗ ಮಾಡಿ ಅನ್ಯ ವರ್ಣ ಅಥವಾ ಧರ್ಮದವರ ವಿರುದ್ಧ ಜನ ಸಾಮಾನ್ಯರನ್ನು ಉತ್ತೇಜಿಸುತ್ತಿದ್ದಾರೆ."

ನಾವು ಎಲ್ಲ ವಿಧ ಹಿಂಸಾಚಾರ ಮತ್ತು ತೀವ್ರವಾದಗಳ ವಿರುದ್ಧ ಹೋರಾಡಿ ಶಾಶ್ವತ ಶಾಂತಿ ಸ್ಥಾಪನೆಗೋಸ್ಕರ ಒಂದು ರೂಪ ರೇಖೆಯನ್ನು ಸಿದ್ಧಪಡಿಸಬೇಕಾಗಿದೆ.

## ದೇಶಭಕ್ತಿ

"ತನ್ನ ದೇಶವನ್ನು ಪ್ರೀತಿಸುವುದು ಧರ್ಮದ ಭಾಗವಾಗಿದೆ."

– *ಹಝ್ರತ್ ಮುಹಮ್ಮದ್ ಪೈಗಂಬರ್(ಸ)*

ಒಬ್ಬನು ಒಂದು ದೇಶದಲ್ಲಿ ಜನಿಸಿದ ನಾಗರಿಕನೋ ಅಥವಾ ಒಂದು ದೇಶದ ಪ್ರಜೆಯಾಗಲು ಆಯ್ಕೆ ಮಾಡಿದವನೋ ಎಂಬ ವಿಷಯವನ್ನು ಪರಿಗಣಿಸದೆ ಪ್ರತಿಯೊಬ್ಬ ತಾನು ವಾಸಿಸುವ ದೇಶಕ್ಕೆ ನಿಷ್ಠಾವಂತನಾಗಿರುವುದು ಆವಶ್ಯಕವಾಗಿದೆ.

ಒಂದು ನ್ಯಾಯಬದ್ಧ ಸರಕಾರದ ವಿರುದ್ಧ ವಿದ್ರೋಹ ಮತ್ತು ವಿಶ್ವಾಸ ಘಾತುಕ ವರ್ತನೆ ಯಾವಾಗಲೂ ಶಕ್ತಿಹೀನ ಸಮಾಜ ವ್ಯವಸ್ಥೆಗೆ ದೇಶವನ್ನು ಒಯ್ದಿದೆ. ಏಕೆಂದರೆ ವಿದ್ರೋಹ ಮತ್ತು ದೇಶ ದ್ರೋಹಕರ ಕೃತ್ಯಗಳು ದೇಶದ ಶಾಂತಿ ಮತ್ತು ಭದ್ರತೆಗೆ ಬೆದರಿಕೆ ಒಡ್ಡುತ್ತವೆ. ದೇಶದಲ್ಲಿ ಆಂತರಿಕ ವಿದ್ರೋಹ ಅಥವಾ ವಿರೋಧವಿದ್ದರೆ ಬಾಹ್ಯ ವಿರೋಧಿಗಳು ಆ ಜ್ವಾಲೆಗೆ ಗಾಳಿ ಹಾಕುವುವು ಮತ್ತು ಬಾಹ್ಯ ಶಕ್ತಿಗಳು ದೇಶದ ಆಂತರಿಕ ಅವ್ಯವಸ್ಥೆಯ ಲಾಭ ಪಡೆಯಲು ಪ್ರಯತ್ನಿಸುವುವು. ಚರಿತ್ರೆಯಲ್ಲೆಲ್ಲ ಹೀಗೆಯೇ ಸಂಭವಿಸಿದೆ ಮತ್ತು ದೇಶಗಳನ್ನು ಅಸ್ಥಿರಗೊಳಿಸಿವೆ. ಆದುದರಿಂದ ಒಬ್ಬನು ತನ್ನ ದೇಶದ ಬಗ್ಗೆ ಹೊಂದಿದ ನಿಷ್ಠಾಹೀನತೆಯ ಪರಿಣಾಮ ಬಹಳ ದೂರಗಾಮಿ

ಮತ್ತು ತೀವ್ರವಾಗಿರುವುದು.

ಸರಕಾರ ಮತ್ತು ಪ್ರಜೆಗಳ ಸಂಬಂಧ ಪರಸ್ಪರ ಗೌರವ ನೀಡುವ ರೀತಿಯಲ್ಲಿರಬೇಕು. ಸರಕಾರದ ಧೋರಣೆಗಳು ಪರಸ್ಪರ ಗೌರವ ವರ್ಧಿಸುವಂತಿರಬೇಕು. ಯಾರಾದಾದರೂ ಭಾವನೆಗಳಿಗೆ ನೋವನ್ನುಂಟುಮಾಡುವ ಮತ್ತು ಹಾನಿಯನ್ನುಂಟುಮಾಡುವ ಕ್ರಮಗಳನ್ನು ಸರಕಾರಗಳು ಕೈಗೊಳ್ಳಬಾರದು.

## ಆಣವ ನಿಶ್ಶಸ್ತ್ರೀಕರಣದ ಆವಶ್ಯಕತೆ

ಇಂದಿನ ಕಾಲದಲ್ಲಿ ಯುದ್ಧದಲ್ಲಿ ಬಳಸುವ ಆಯುಧಗಳು ಎಷ್ಟು ವಿನಾಶಕಾರಿಗಳಾಗಿವೆ ಎಂದರೆ ಪೀಳಿಗೆಗಳ ನಂತರ ಪೀಳಿಗೆಗಳು ತೀವ್ರವಾಗಿ ಅಂಗವಿಕಲರಾಗಿ ಜನಿಸುವುವು. ಅಸಂಖ್ಯಾತ ಮಕ್ಕಳು ತಮ್ಮ ತಂದೆ ತಾಯಂದಿರು ಅತ್ಯಂತ ಅಮಾನವೀಯವಾಗಿ ಹತ್ಯೆ ಮಾಡಲ್ಪಟ್ಟದನ್ನೂ ಕಾಣುತ್ತಿದ್ದಾರೆ ಮತ್ತು ಅವರನ್ನು ತಮ್ಮಿಂದ ಅಗಲುವಂತೆ ಮಾಡಿದುದೇಕೆಂದು ಆಶ್ಚರ್ಯ ಚಕಿತರಾಗುತ್ತಾರೆ. ಸಾವಿರಗಟ್ಟಲೆ ಮಹಿಳೆಯರು ವಿಧವೆಯರಾಗಿ ಯಾವುದೇ ಪ್ರತೀಕ್ಷೆ ಇಲ್ಲದವರೂ ಆಕ್ರಮಣಗಳಿಗೆ ಗುರಿಯಾಗುವವರೂ ಆಗಿದ್ದಾರೆ.

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋನ್ನತ ನಾಯಕರಾದ ಮಿರ್ಝಾ ಮಸ್‌ರೂರ್ ಅಹ್ಮದ್ ಹೇಳುತ್ತಾರೆ: "ಪ್ರಾಯಶಃ ಮಹಾ ಶಕ್ತಿಶಾಲಿ ದೇಶಗಳು ಅಣು ಅಸ್ತ್ರಗಳನ್ನು ಪ್ರತಿರೋಧಕವಾಗಿ ಇರಿಸಬಹುದಾದರೂ ಅಣು ಅಸ್ತ್ರಗಳನ್ನು ಹೊಂದಿದ ಚಿಕ್ಕ ದೇಶಗಳ ಬಗ್ಗೆ ಅವರು ಅಂತಹ ಸಂಯಮ ತೋರುವರೆಂಬ ಬಗ್ಗೆ ಖಾತರಿ ಇರುವುದಿಲ್ಲ. ಆ ಚಿಕ್ಕ ದೇಶಗಳು ಅಣು ಅಸ್ತ್ರಗಳನ್ನು ಎಂದೂ ಬಳಸಲಾರವೆಂದು ನಂಬಲು ಸಾಧ್ಯವಿಲ್ಲ. ಆದುದರಿಂದ ಲೋಕ ವಿನಾಶದ ಅಂಚಿನಲ್ಲಿದೆ ಎಂಬುದು ಸ್ಪಷ್ಟವಾಗಿದೆ."

ನಾವು ನಮ್ಮ ಮಕ್ಕಳಿಗೆ ಶುಭಪ್ರತೀಕ್ಷೆಯ ಬಳುವಳಿ ನೀಡಲು ಬಯಸುವೆವಾದರೆ ಮತ್ತು ನಮ್ಮ ಮುಂದಿನ ಪೀಳಿಗೆಗಳಿಗೆ ಶಾಂತಿಮಯ ಲೋಕವನ್ನು ಬಿಟ್ಟು ಹೋಗಲು ಬಯಸುವೆವಾದರೆ ನಾವು ನಮ್ಮ ಆದ್ಯತೆಗಳನ್ನು ತುರ್ತಾಗಿ ಬದಲಾವಣೆ ಮಾಡಬೇಕು ಮತ್ತು ಆಣವ ನಿಶ್ಶಸ್ತ್ರೀಕರಣದ ಆವಶ್ಯಕತೆಯನ್ನು ಮನವರಿಕೆ ಮಾಡಿಕೊಳ್ಳಬೇಕು.

ಮೃತ್ಯು ಮತ್ತು ವಿನಾಶಗಳಿಗೊಯ್ಯುವ ಆಯುಧಗಳನ್ನು ಗಳಿಸುವ ಸ್ಪರ್ಧೆಗೆ ಮುನ್ನುಗ್ಗುವುದಕ್ಕೆ ಬದಲಾಗಿ ಮಾನವರನ್ನು ರಕ್ಷಿಸುವ ಸ್ಪರ್ಧೆಗೆ ಸೇರುವುದು ಆವಶ್ಯಕವಾಗಿದೆ.

## ಆಯುಧ ಮಾರಾಟಮಾಡಿ ಲಾಭಗಳಿಸುವುದನ್ನು ವರ್ಜಿಸಬೇಕು

ಅಹ್ಮದಿಯಾ ಜಮಾಅತಿನ ಸರ್ವೋಚ್ಚ ನಾಯಕರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಯೋರ್ಕ್ ಯುನಿವರ್ಸಿಟಿಯ ಪ್ರೊಫೆಸರುಗಳನ್ನು, ರಾಜಕಾರಣಿಗಳನ್ನು, ಜರ್ನಲಿಸ್ಟ್‌ಗಳನ್ನು, ಚಿಂತಕಾಗ್ರಣಿಗಳನ್ನು ಸಂಬೋಧಿಸಿ "ಅನ್ಯಾಯ ಭರಿತ ಲೋಕದಲ್ಲಿ ನ್ಯಾಯಪಾಲನೆ" ಎಂಬ ವಿಷಯಕ್ಕೆ ಸಂಬಂಧಿಸಿ ಮಾಡಿದ ಪ್ರಸಿದ್ಧ ಭಾಷಣದಲ್ಲಿ ಹೀಗೆ ಹೇಳಿದರು: "ಹಣ ಮಾತನಾಡುತ್ತಿದೆ; ಆದರೆ ನೈತಿಕತೆ ಎಲ್ಲಿಯೂ ಬಾಕಿಯಾಗಿರುವುದಾಗಿ ಕಾಣಿಸುವುದಿಲ್ಲ."

ವಿನಾಶಕಾರಿ ಆಯುಧಗಳ ಮಾರಾಟದಿಂದ ಸಿಗುವ ಲಾಭ ನಂಬಲಾರದಷ್ಟು ಬೃಹತ್ತಾಗಿದೆ. ರಾಜಕೀಯ ಮತ್ತು ವಾಣಿಜ್ಯೋದ್ಯಮದ ನಾಯಕರು ಜನರ ಮೇಲೆ ಲಾಭಕ್ಕೆ ಆದ್ಯತೆ ನೀಡುತ್ತಿರುವುದನ್ನು ಮುಂದುವರಿಸುತ್ತಿರುವುದರಿಂದ ಅವರು ನಮ್ಮನ್ನು ಸುರಕ್ಷಿತತೆಗೆ ಒಯ್ಯಲಾರರು.

ಈ ಲಾಭ ಗಳಿಕೆಯ ಉದಾಹರಣೆಗಳು ಧಾರಾಳವಿವೆ: ಹಲವಾರು ಪಾಶ್ಚಿಮಾತ್ಯ ದೇಶಗಳು ಮಾರಾಟ ಮಾಡುತ್ತಿರುವ ಆಯುಧಗಳು ಚಿಕ್ಕ ರಾಜ್ಯಗಳ ಪ್ರಜೆಗಳನ್ನು ಗುರಿಯಾಗಿಸಿ ಬಳಸಲ್ಪಡುತ್ತಿವೆ. ಆದರೂ ಯಾವುದೇ ಚಿಕ್ಕದೇಶ ಅಂತಹ ವಿನಾಶಕಾರಿ ಆಯುಧಗಳನ್ನು ಬಹುಸಂಖ್ಯೆಯಲ್ಲಿ ನಿರ್ಮಿಸುವ ಕಾರ್ಖಾನೆಗಳನ್ನು ಹೊಂದಿಲ್ಲ. ಅವರಿಗೆ ಆಯುಧಗಳನ್ನು ಪೂರೈಕೆ ಮಾಡುವುದು ಪಾಶ್ಚಿಮಾತ್ಯ ದೇಶಗಳು ಮಾತ್ರವಾಗಿವೆ.

ನಾವು ವಾಸಿಸುವ ಈ ಲೋಕದಲ್ಲಿ ನಾವು ಬಹಿರಂಗವಾಗಿ ಕಾಣುತ್ತಿದ್ದೇವೆ. ಪ್ರಮುಖ ಮಹಾಶಕ್ತಿ ರಾಷ್ಟ್ರಗಳು ಮಾರಾಟ ಮಾಡುವ ಆಯುಧಗಳನ್ನು ಜನರನ್ನು ಕೊಲ್ಲಲು, ಅಂಗವಿಕಲರನ್ನಾಗಿ ಮಾಡಲು ಮತ್ತು ನಿರಪರಾಧಿ ಜನರನ್ನು ಕ್ರೂರವಾಗಿ ಹತ್ಯೆ ಮಾಡಲು ಬಳಸಲಾಗುತ್ತಿದೆ. ಈ ಶಕ್ತಿಶಾಲಿ ರಾಷ್ಟ್ರಗಳು ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತೇಜಿಸಲು ತಮ್ಮ ಭಂಡವಾಳವನ್ನು ಅತ್ಯಂತ ಹೆಚ್ಚಾಗಿ ವರ್ಧಿಸಲು ಮಾತ್ರ ತಮ್ಮ ಗಮನವನ್ನು ಕೇಂದ್ರೀಕರಿಸಿರುವುದು ಖೇದಕರವಾಗಿದೆ. ಅವರು ಅವರ ಕೃತ್ಯದ ದುಷ್ಪರಿಣಾಮಗಳ ಬಗ್ಗೆ ಮತ್ತು ಶಾಂತಿಗೆ ಹಿನ್ನಡೆಯಾಗುವ ಬಗ್ಗೆ ಚಿಂತಿಸುವುದೇ ಇಲ್ಲ.

## ಆರ್ಥಿಕ ನ್ಯಾಯಪಾಲನೆ ಮತ್ತು ಬಡತನ ನಿವಾರಣೆಯ ಆವಶ್ಯಕತೆ

ಒಂದು ದೇಶದ ಸಂಪತ್ತನ್ನು ಪ್ರತಿಯೊಬ್ಬ ನಾಗರಿಕನಿಗೆ ಆವಶ್ಯಕವಾದ ಅನುಕೂಲತೆಗಳನ್ನು ಒದಗಿಸಲು ವಿನಿಯೋಗಿಸಬೇಕು. ಐಶ್ವರ್ಯವಂತರ ಸಂಪತ್ತನ್ನು ಬಲಾತ್ಕಾರದಿಂದ ಅವರಿಂದ ವಶಪಡಿಸಿಕೊಳ್ಳಬೇಕೆಂದೂ ಅವರು ಒಂದು ಕನಿಷ್ಠ ಪರಿಮಾಣದ ಸಂಪತ್ತನ್ನು ಮಾತ್ರ ತಮ್ಮ ವಶದಲ್ಲಿ ಇರಿಸಿಕೊಳ್ಳಬಹುದೆಂದೂ ಇಸ್ಲಾಮ್ ಉಪದೇಶಿಸುವುದಿಲ್ಲ. ಆದರೆ ಒಂದು ದೇಶದ ಸಾಧನ ಸಂಪತ್ತು ಆ ದೇಶದ ರಾಷ್ಟ್ರೀಯ ನಿಧಿ ಎಂದೂ ಆ ಸಾಧನ ಸಂಪತ್ತನ್ನು ಸಮಾಜದ ಪ್ರತಿಯೊಂದು ವರ್ಗದ ಜನರ ಮತ್ತು ಪ್ರತಿಯೊಂದು ವಿಭಾಗದ ಜನರ ಸೇವೆಗೆ ಬಳಸಬೇಕೆಂದೂ ಇಸ್ಲಾಮ್ ಉಪದೇಶಿಸುತ್ತಿದೆ.

ಎಲ್ಲ ಸಾಧನ ಸಂಪತ್ತುಗಳು ಮಾನವರೆಲ್ಲರ ಒಳಿತಿಗೋಸ್ಕರವಾಗಿರುವುವು ಎಂದೂ ಅವು ಕೇವಲ ಆಯ್ಕೆಗೊಂಡ ಕೆಲವರ ಒಳಿತಿಗೆ ಮಾತ್ರವಾಗಿರುವವುಗಳಲ್ಲ ಎಂದೂ ಇಸ್ಲಾಮ್ ಹೇಳುತ್ತಿದೆ. ಈ ಸಾಧನ ಸಂಪತ್ತುಗಳನ್ನು ಕೇವಲ ಅದೃಷ್ಟಶಾಲಿಗಳಾದ ಕೆಲವರ ಹಿತಕ್ಕೋಸ್ಕರ ಮಾತ್ರ ಬಳಸುವುದಾದರೆ ನಿರಾಶೆ ಮತ್ತು ಪ್ರಕ್ಷುಬ್ಧತೆಯಿಂದ ಬಡ ಮತ್ತು ವಂಚಿತ ವರ್ಗದ ಜನರು ವಿದ್ರೋಹಗಳಿಗೂ ಆಂತರಿಕ ಶಾಂತಿ ಭಂಗಕ್ಕೂ ಮುಂದಾಗುವರು. ವಿಕಾಸಶೀಲ ದೇಶದ ಭಾಗ್ಯಹೀನರಾದ ಜನರು ಎಷ್ಟು ಆಶಾಭಂಗಕ್ಕೊಳಗಾಗುವರೆಂದರೆ ಅವರು ತಮ್ಮ ನಾಯಕರ ವಿರುದ್ಧ ತಿರುಗುವರಲ್ಲದೆ ಮಹಾಶಕ್ತಿ ರಾಷ್ಟ್ರಗಳ ವಿರುದ್ಧ ಸಹ ವರ್ತಿಸುವವರಾಗುವರು. ಆದುದರಿಂದ ಸ್ಥಿರವಾದ ಶಾಂತಿಯನ್ನು ಸ್ಥಾಪಿಸಲು ಬಡತನದ ನಿವಾರಣೆ ಅತ್ಯಂತ ಮುಖ್ಯ ವಿಷಯವಾಗುತ್ತದೆ.

26 ನೇ ಪುಟಕ್ಕೆ

# ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಶಾಂತಿಪ್ರಿಯ ಮಹಾನುಭಾವ



ಕಳೆದ ಒಂದು ನೂರಕ್ಕಿಂತಲೂ ಹೆಚ್ಚು ವರ್ಷಗಳಿಂದ ಅಹ್ಮದಿಯಾ ಮುಸ್ಲಿಮ್ ಸಂಘಟನೆ ಒಬ್ಬ ಸರ್ವೋಚ್ಚ ನೇತಾರನ ಮಾರ್ಗದರ್ಶನ ಪ್ರಕಾರ ಯಾವಾಗಲೂ ಕಾರ್ಯನಿರತವಾಗಿರುತ್ತದೆ. ಆರಂಭದಲ್ಲಿ ಜಮಾಅತಿನ ಸ್ಥಾಪಕರಾದ ವಾಗ್ದತ್ತ ಮಸೀಹ್ ಮತ್ತು ಮಹ್‌ದೀ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅವರು ಈ ಜಮಾಅತ್‌ಗೆ ಮಾರ್ಗದರ್ಶನ ನೀಡುತ್ತಿದ್ದರು. 1908ರಲ್ಲಿ ಅವರು ನಿಧನ ಹೊಂದಿದ ನಂತರ ಅವರ ಉತ್ತರಾಧಿಕಾರಿಗಳಾದ ಖಲೀಫರು ಜಮಾಅತಿನ ಜನರಲ್ಲಿ ಐಕ್ಯತೆಯನ್ನುಂಟುಮಾಡಿ ಅವರಿಗೆ ಲೌಕಿಕ ಮತ್ತು ಆಧ್ಯಾತ್ಮಿಕ ವಿಷಯಗಳಿಗೆ ಸಂಬಂಧಿಸಿ ಮಾರ್ಗದರ್ಶನ ನೀಡುತ್ತಿದ್ದಾರೆ.

ಜಮಾಅತಿನ ಇಂದಿನ ಸರ್ವೋಚ್ಚ ನಾಯಕ, ಐದನೆಯ ಖಲೀಫರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಶಾಂತಿಗೆ ಉತ್ತೇಜನ ನೀಡುತ್ತಾ, ಅಂತರ್ರಾಷ್ಟ್ರೀಯ ಸಂಘರ್ಷ ಮತ್ತು ಅಣು ಅಸ್ತ್ರಗಳ ಅಪಾಯಗಳ ಬಗ್ಗೆ ಮುನ್ನೆಚ್ಚರಿಕೆ ನೀಡುತ್ತಾ ದಣಿವಿಲ್ಲದೆ ಪ್ರಯತ್ನಿಸುತ್ತಿದ್ದಾರೆ. ಅವರು ಕ್ಯಾಪಿಟೋಲ್ ಹಿಲ್‌ನಲ್ಲಿ ಅಮೇರಿಕನ್ ಕಾಂಗ್ರೆಸ್ಸನ್ನು, ಬ್ರಿಟಿಷ್ ಪಾರ್ಲಿಮೆಂಟನ್ನು, ಕೆನಡಿಯನ್ ಪಾರ್ಲಿಮೆಂಟನ್ನು ಮತ್ತು ಯುರೋಪಿಯನ್ ಪಾರ್ಲಿಮೆಂಟನ್ನು ಸಂಬೋಧಿಸಿ ಅಂತರ್ರಾಷ್ಟ್ರೀಯ ಶಾಂತಿ ಸ್ಥಾಪನೆಗೆ ಸಂಬಂಧಿಸಿ ಪ್ರಮುಖ ವಿಷಯಗಳ ಕುರಿತು ಭಾಷಣ ನೀಡಿದ್ದಾರೆ.

ಈ ಭಾಷಣಗಳಲ್ಲಿಯೂ ಇತರ ಭಾಷಣಗಳಲ್ಲಿಯೂ ಹಝ್ರತ್ ಖಲೀಫರು ನ್ಯಾಯ ಮತ್ತು ಶಾಂತಿಯ ಮಧ್ಯೆ ಇರುವ ಸಂಬಂಧವನ್ನು ಒತ್ತಿ ಹೇಳಿ ಅಣವ ನಿಶ್ಶಸ್ತ್ರೀಕರಣ ಮತ್ತು ಪರಸ್ಪರ ಸಹಕಾರದಿಂದ ವರ್ತಿಸುವ ಬಗ್ಗೆ ಪ್ರಸ್ತಾಪಿಸಿ ಸಂಘರ್ಷ ನಿವಾರಣೆ, ನ್ಯಾಯಪಾಲನೆ ಮತ್ತು ಶಾಂತಿ ಸ್ಥಾಪನೆ ಬಗ್ಗೆ ನೈಜ ಇಸ್ಲಾಮೀ ತತ್ವಗಳನ್ನು ವಿಶದೀಕರಿಸಿದ್ದಾರೆ. ಅವರು ವಿವಿಧ ವಿಷಯಗಳಿಗೆ ಸಂಬಂಧಿಸಿ ಹೀಗೆ ಹೇಳಿದರು:

## ನ್ಯಾಯ ಮತ್ತು ಶಾಂತಿ ಸ್ಥಾಪನೆ ಮಧ್ಯೆ ಸಂಬಂಧದ ಬಗ್ಗೆ

"ಸತ್ಯವೇನೆಂದರೆ, ಶಾಂತಿ ಮತ್ತು ನ್ಯಾಯ ಇವನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಒಂದನ್ನು ಇನ್ನೊಂದಿಲ್ಲದೆ ಹೊಂದಲು ಸಾಧ್ಯವೇ ಇಲ್ಲ. ಎಲ್ಲ ವಿವೇಕಿಗಳಾದ ಬುದ್ಧಿಶಾಲಿಗಳು ಈ ತತ್ವವನ್ನು ಖಂಡಿತವಾಗಿ ಮನವರಿಕೆ ಮಾಡುವರು. ಲೋಕದಲ್ಲಿ ಅಸ್ತವ್ಯಸ್ತತೆಯನ್ನೂ ಅಶಾಂತಿಯನ್ನೂ ಹುಟ್ಟಿಸಲು ದೃಢನಿರ್ಧಾರ ಮಾಡಿದ ಕೆಲವು ಜನರ ಹೊರತು ಯಾವುದೇ ಸಮಾಜದ ಯಾವನೇ ವ್ಯಕ್ತಿ, ಯಾವುದೇ ದೇಶದ ವ್ಯಕ್ತಿ ಅಥವಾ ಲೋಕವಿಡೀ, ನ್ಯಾಯ ಮತ್ತು ಸರಿಯಾದ ಕ್ರಮಬದ್ಧತೆ ಇರುವಲ್ಲಿ ಅಸ್ತವ್ಯಸ್ತತೆ ಮತ್ತು ಶಾಂತಿಭಂಗ ಉಂಟಾಗುವುದೆಂದು ವಾದಿಸಲಾರದು."

## ಅಸಮಾನತೆ ಬಗ್ಗೆ ಇಸ್ಲಾಮಿನ ಉಪದೇಶ

"ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಹೇಳುತ್ತದೆ– ಎಲ್ಲ ಜನರನ್ನು ಸಮಾನರಾಗಿ ಸೃಷ್ಟಿಸಲಾಗಿದೆ ಎಂದು. ಹಝ್ರತ್ ಮುಹಮ್ಮದ್ ಪೈಗಂಬರ್[ಸ] ತನ್ನ ಕೊನೆಯ ಪ್ರವಚನದಲ್ಲಿ ಮುಸ್ಲಿಮರೊಂದಿಗೆ ಹೀಗೆ ಉಪದೇಶಿಸಿದರು: ಅರಬಿಯನು ಅರಬಿಯೇತರನಿಗಿಂತ ಶ್ರೇಷ್ಠನಲ್ಲ; ಅರಬಿಯೇತರನು ಅರಬಿಗಿಂತ ಶ್ರೇಷ್ಠನೂ ಅಲ್ಲ. ಬಿಳಿಯನು ಕರಿಯನಿಗಿಂತ ಶ್ರೇಷ್ಠನಲ್ಲ; ಕರಿಯನು ಬಿಳಿಯನಿಗಿಂತಲೂ ಶ್ರೇಷ್ಠನಲ್ಲ. ಆದುದರಿಂದ ಸ್ಪಷ್ಟವಾಗುವುದೇನೆಂದರೆ, ಇಸ್ಲಾಮೀ ಉಪದೇಶಗಳ ಪ್ರಕಾರ ಎಲ್ಲ ಜನಾಂಗಗಳ ಜನರು ಮತ್ತು ಎಲ್ಲ ವಂಶಗಳ ಜನರು ಸಮಾನರಾಗಿದ್ದಾರೆ.

ಎಲ್ಲ ಜನರಿಗೆ ಯಾವುದೇ ತಾರತಮ್ಯ ಮಾಡದೆ, ದ್ವೇಷವಿಲ್ಲದೆ, ಸಮಾನ ಹಕ್ಕುಗಳನ್ನು ನೀಡಬೇಕೆಂದು ಇಸ್ಲಾಮ್ ಉಪದೇಶಿಸುತ್ತದೆ. ವಿವಿಧ ಗುಂಪುಗಳ ಮತ್ತು ದೇಶಗಳ ಮಧ್ಯೆ ಸೌಹಾರ್ದದ ಅಸ್ತಿಭಾರ ಹಾಕುವ ಸುವರ್ಣ ತತ್ವ ಇದಾಗಿದ್ದು ಶಾಂತಿ ಸ್ಥಾಪನೆಗೆ ಪೂರಕವಾಗಿದೆ."

## ದೇಶಗಳ ಮಧ್ಯೆ ನ್ಯಾಯಪಾಲನೆ

"ನಾವು ಈಗ ಕಾಣುವುದೇನೆಂದರೆ, ಶಕ್ತಿಶಾಲಿ ಮತ್ತು ಬಲಹೀನ ದೇಶಗಳ ಮಧ್ಯೆ ವಿಭಜನೆ ಮತ್ತು ಬೇರ್ಪಡುವಿಕೆ ಇದೆ. ಉದಾಹರಣೆಗೆ, ಸಂಯುಕ್ತರಾಷ್ಟ್ರ ಸಂಘದಲ್ಲಿ ಕೆಲವು ದೇಶಗಳಿಗೆ ವಿಶಿಷ್ಟ ಅಧಿಕಾರಗಳಿವೆ. ಸೆಕ್ಯುರಿಟಿ ಕೌನ್ಸಿಲ್‌ನಲ್ಲಿ ಕೆಲವು ಸ್ಥಿರ ಸದಸ್ಯರೂ ಕೆಲವು ತಾತ್ಕಾಲಿಕ ಸದಸ್ಯರೂ ಇರುತ್ತಾರೆ. ಈ ವ್ಯತ್ಯಾಸ ಆಂತರಿಕ ಆತಂಕಗಳಿಗೆ ಮತ್ತು ನಿರಾಶೆಗೆ ಕಾರಣವಾಗಿದೆ. ಕೆಲವು ದೇಶಗಳು ಈ ಅಸಮಾನತೆ ಬಗ್ಗೆ ಪ್ರತಿಭಟಿಸುವ ವರದಿಗಳನ್ನು ಆಲಿಸುತ್ತಿದ್ದೇವೆ. ಇಸ್ಲಾಮ್ ಪರಿಪೂರ್ಣ ನ್ಯಾಯಪಾಲನೆ ಮತ್ತು ಸಮತೆಯನ್ನು ಎಲ್ಲ ವಿಷಯಗಳಿಗೆ ಸಂಬಂಧಿಸಿ ಉಪದೇಶಿಸುತ್ತದೆ. ನಾವು ಪವಿತ್ರ ಖುರ್‌ಆನ್ ಅಧ್ಯಾಯ 5 ವಚನ 3ರಲ್ಲಿ ಒಂದು ನಿರ್ಣಾಯಕ ಮಾರ್ಗದರ್ಶನವನ್ನು ಕಾಣುತ್ತೇವೆ. ಈ ವಚನದಲ್ಲಿ ಹೀಗೆ ಪ್ರತಿಪಾದಿಸಲಾಗಿದೆ: ನ್ಯಾಯಪಾಲನೆಗೆ ಅನುಯೋಜ್ಯವಾಗಿ ವರ್ತಿಸಬೇಕು. ತಮ್ಮ ದ್ವೇಷ ಮತ್ತು ಹಗೆತನದಲ್ಲಿ ಮಿತಿಮೀರಿ ವರ್ತಿಸಿದವರೊಂದಿಗೆ ಕೂಡ ನ್ಯಾಯಯುತವಾಗಿ ಮತ್ತು ಒಳ್ಳೆಯ ರೀತಿಯಲ್ಲಿ ವರ್ತಿಸಬೇಕು. ಪವಿತ್ರ ಖುರ್‌ಆನ್ ಹೀಗೆ ಸಹ ಉಪದೇಶಿಸಿದೆ: ಯಾರಾದರೂ ಎಲ್ಲಿಯಾದರೂ ನಿಮಗೆ ಒಳಿತು ಮಾಡುವ ಬಗ್ಗೆ ಸಲಹೆ ನೀಡಿದರೆ ನೀವು ಅದನ್ನು ಅಂಗೀಕರಿಸಬೇಕು. ಯಾರಾದರೂ ಎಲ್ಲಿಯಾದರೂ ಪಾಪಕೃತ್ಯ ಅಥವಾ ಕೆಟ್ಟವರ್ತನೆ ಮಾಡುವ ಬಗ್ಗೆ ಸಲಹೆ ನೀಡಿದರೆ ನೀವು ಅದನ್ನು ತಿರಸ್ಕರಿಸಬೇಕು.

"ನ್ಯಾಯಪಾಲನೆ ಮೂಲಕ ದೇಶಗಳ ಮಧ್ಯೆ ಶಾಂತಿ ಸ್ಥಾಪನೆಗೆ ಸಂಬಂಧಿಸಿ ಪವಿತ್ರ ಖುರ್‌ಆನ್ ಅಧ್ಯಾಯ 15 ವಚನ 89ರಲ್ಲಿ ಹೀಗೆ ಹೇಳಲಾಗಿದೆ: 'ಅನ್ಯರ ಸಂಪತ್ತಿನ ಕಡೆಗೆ ಅಸೂಯೆಯಿಂದ ದಿಟ್ಟಿಸಿ ನೋಡಬಾರದು.' ಇದೇ ರೀತಿ ಯಾವುದೇ ದೇಶ ಇನ್ನೊಂದು ದೇಶದ ಸಾಧನ ಸಂಪತ್ತನ್ನು ಆ ದೇಶಕ್ಕೆ ಸಹಾಯ ನೀಡುವ ನೆಪದಿಂದ ಅಪಹರಿಸಬಾರದು. ಆದುದರಿಂದ ಅನ್ಯ ದೇಶಕ್ಕೆ ತಾಂತ್ರಿಕ ಜ್ಞಾನ ಒದಗಿಸುವ ಆಧಾರದಲ್ಲಿ ಅನ್ಯಾಯಭರಿತ ವಾಣಿಜ್ಯ ಒಪ್ಪಂದಗಳನ್ನು ಆ ದೇಶದೊಂದಿಗೆ ಮಾಡಬಾರದು. ಇದೇ ರೀತಿ ತಾಂತ್ರಿಕ ಜ್ಞಾನ ಅಥವಾ ಸಹಾಯ ನೀಡುವ ನೆಪದಲ್ಲಿ ಅಭಿವೃದ್ಧಿಶೀಲ ದೇಶಗಳ ಸಾಧನ ಸಂಪತ್ತುಗಳನ್ನು ತಮ್ಮ ಹತೋಟಿಗೆ ತೆಗೆದುಕೊಳ್ಳಬಾರದು. ಎಲ್ಲಿಯಾದರೂ ಕಡಿಮೆ ಶಿಕ್ಷಣ ಗಳಿಸಿದ ಜನರಿಗೆ ಅಥವಾ ಸರಕಾರಗಳಿಗೆ ತಮ್ಮ ನೈಸರ್ಗಿಕ ಸಂಪತ್ತನ್ನು ಹೇಗೆ ಉಪಯೋಗಿಸಬೇಕೆಂಬುದನ್ನು ಕಲಿಸಿಕೊಡುವ ಆವಶ್ಯಕತೆ ಇದ್ದಲ್ಲಿ ಅವರಿಗೆ ಕಲಿಸಿಕೊಡಬೇಕು.

"ಎರಡು ದೇಶಗಳ ಮಧ್ಯೆ ವಾಸ್ತವಿಕ ವಿಷಯಗಳ ಬಗ್ಗೆ ವಿವಾದವಿದ್ದು ಅದು ಅವರನ್ನು ಯುದ್ಧಕ್ಕೆ ಕೊಂಡೊಯ್ಯುವಂತಹದಾಗಿದ್ದರೆ ಉಳಿದ ದೇಶಗಳು ಒಟ್ಟಿಗೆ ಸೇರಿ ಪರಿಪೂರ್ಣ ನ್ಯಾಯಬದ್ಧವಾಗಿ ಮತ್ತು ಯಾವುದೇ ಪಕ್ಷಕ್ಕೆ ಹಾನಿಯಾಗದ ರೀತಿಯಲ್ಲಿ ವಿವಾದಗಳನ್ನು ಪರಿಹರಿಸಲು ಪ್ರಯತ್ನಿಸಬೇಕು. ಇಂತಹ ಉತ್ತಮ ರೀತಿಯಲ್ಲಿ ಸಮಸ್ಯೆಗಳಿಗೆ ಪರಿಹಾರ ಸೂಚಿಸುವುದಾದರೆ ವಿವಾದ ಮಾಡುತ್ತಿರುವ ದೇಶಗಳು ಈ ಮಧ್ಯಸ್ಥಿಕೆಯನ್ನು ಒಪ್ಪಿಕೊಳ್ಳಬೇಕು. ಯಾವುದಾದರೂ ಒಂದು ದೇಶ ಪರಿಹಾರ ಮಾರ್ಗವನ್ನು ಒಪ್ಪಿಕೊಳ್ಳದೆ ಯುದ್ಧವುಂಟಾಗುವ ಪರಿಸ್ಥಿತಿಯನ್ನು ಸೃಷ್ಟಿಸುವುದಾದರೆ ಆಗ ಇತರ ದೇಶಗಳು ಆ ದೇಶದ ವಿರುದ್ಧ ಯುದ್ಧದ ಘೋಷಣೆ ಮಾಡಬೇಕು. ಯಾವುದೇ ಒಂದು ದೇಶ ಒಗ್ಗೂಡಿದ ಇತರ ದೇಶಗಳ ವಿರುದ್ಧ ಹೋರಾಡಲು ಸಮರ್ಥವಾಗಬಾರದು. ಅದು ತನ್ನ ಸೋಲನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಯುದ್ಧ ಸನ್ನದ್ಧ ದೇಶ ಶಾಂತಿಗೆ ಒಪ್ಪಿಗೆ ನೀಡುವುದಾದರೆ ವಿವಾದವನ್ನು ನ್ಯಾಯಯುತವಾಗಿ ಪರಿಹರಿಸಬೇಕು ಮತ್ತು ಪರಿಹಾರವು ಆ ದೇಶ ಇತರ ದೇಶಗಳ ವಿರುದ್ಧ ಯಾವುದೇ ದೂರನ್ನು ಹೇಳುವಂತಿರಬಾರದು.

"ಒಂದು ದೇಶ ಅನ್ಯ ದೇಶಗಳ ಮೇಲೆ ತನ್ನ ಹಿತಾಸಕ್ತಿಗಳಿಗೆ ಆದ್ಯತೆ ನೀಡುವಾಗ ನ್ಯಾಯಪಾಲನೆಯ ಮಾನದಂಡ ಏರುಪೇರಾಗುತ್ತದೆ. ಇಂತಹ ದೇಶದ ರಾಜಕೀಯ ಹಿತಾಸಕ್ತಿಗಳು ಭೌತಿಕ ಮತ್ತು ಆರ್ಥಿಕ ಹಿತಾಸಕ್ತಿಗಳಾಗಿ ಬದಲಾಗಲು ತೊಡಗುತ್ತವೆ. ಇದು ಎಂತಹ ವಿಷಮ ವೃತ್ತವೆಂದರೆ ಅದು ಯಾರನ್ನೂ ತನ್ನ ಅಹಂಭಾವ ಮತ್ತು ಸ್ವಾರ್ಥದ ವಲಯದಿಂದ ತಪ್ಪಿಸಿಕೊಳ್ಳಲು ಬಿಡುವುದಿಲ್ಲ..... ಲೋಕದಲ್ಲಿ ಸ್ವಾರ್ಥ ಹಿತಾಸಕ್ತಿಗಳು ಎಷ್ಟು ವಿಶಾಲವಾಗಿ ಹರಡಿವೆ ಎಂದರೆ ಅವುಗಳು ನ್ಯಾಯಪಾಲನೆಯ ಆವಶ್ಯಕತೆಗಳ ಮೇಲೆ ಮುಸುಕು ಹಾಕಿವೆ.

"ದೇಶಗಳ ಮಧ್ಯೆ ಮೇಲಿಂದ ಮೇಲೆ ಕಾಣುವ ಹಗೆತನವನ್ನು ಬದಿಗಿರಿಸಿ ಯೋಚಿಸುವುದಾದರೆ, ಕೆಲವು ಕಿರಿಯ ದೇಶಗಳ ರಾಜಕೀಯ, ಭೌಗೋಲಿಕ ಮತ್ತು ಆರ್ಥಿಕ ಮೌಲ್ಯಗಳ ಕಾರಣದಿಂದ, ಬೇರೆ ಶಕ್ತಿಶಾಲಿ ದೇಶಗಳು ತಮ್ಮ ದುರಾಶೆ ಮತ್ತು ಶಕ್ತಿಯ ಕಾರಣದಿಂದ ತಮ್ಮ ಲಾಭಕ್ಕೋಸ್ಕರ ಆ ಕಿರಿಯ ದೇಶಗಳನ್ನು ತಮ್ಮ ಅಧೀನಕ್ಕೊಳಪಡಿಸಲು ಪ್ರಯತ್ನಿಸುತ್ತಿವೆ. ಇದರ ಪರಿಣಾಮವಾಗಿ ದೇಶಗಳ ಹೊಸ ಒಕ್ಕೂಟಗಳು ಪ್ರಾರಂಭವಾಗಲು ತೊಡಗಿವೆ. ಇದಕ್ಕೆ ಮುಖ್ಯವಾದ ಕಾರಣ ಮನುಷ್ಯನು ತನ್ನ ಸೃಷ್ಟಿಕರ್ತನನ್ನೂ ಅವನ ಉಪದೇಶಗಳನ್ನೂ ಮರೆತುಬಿಟ್ಟುದಾಗಿದೆ..... ಮಹಾಶಕ್ತಿಶಾಲಿ ದೇಶಗಳು ಕಿರಿಯ ದೇಶಗಳ ಧೋರಣೆಯನ್ನು ರೂಪಿಸುವುದರಲ್ಲಿ ಹಸ್ತಕ್ಷೇಪ ಮಾಡುತ್ತಿವೆ. ಜನಸಾಮಾನ್ಯರು ಸಹ ಅದರ ಬಗ್ಗೆ ಅರಿತಿರುತ್ತಾರೆ. ಇಂತಹ ದೇಶಗಳಲ್ಲಿ ಸರಕಾರಗಳನ್ನು ಸ್ಥಾಪಿಸಲು ಅಥವಾ ಕಿತ್ತು ಹಾಕಲು ಮಹಾಶಕ್ತಿಶಾಲಿ ದೇಶಗಳು ಹಸ್ತಕ್ಷೇಪ ನಡೆಸುತ್ತಿವೆ. ಈ ಕಾರಣದಿಂದ ಕಿರಿಯ ದೇಶಗಳ ಜನರು ಮಹಾಶಕ್ತಿಶಾಲಿ ದೇಶಗಳ ವಿರುದ್ಧ ತಮ್ಮ ಹೃದಯಗಳಲ್ಲಿ ದ್ವೇಷವನ್ನು ಹೊಂದಿರುತ್ತಾರೆ. ಆದರೆ ನನ್ನ ಅಭಿಪ್ರಾಯವೇನೆಂದರೆ ಆ ಕಿರಿಯ ದೇಶಗಳ ನಾಯಕರನ್ನೇ ಹೆಚ್ಚಾಗಿ ದೂಷಿಸಬೇಕಾಗಿದೆ."

**ತೃತೀಯ ಮಹಾಯುದ್ಧವನ್ನು ತಡೆಗಟ್ಟುವ ಬಗ್ಗೆ**

"ಈ ಕಾಲದಲ್ಲಿ ಎಲ್ಲ ಧರ್ಮಗಳ ಜನರು ಮಾತ್ರವಲ್ಲ ಯಾವುದೇ ಧರ್ಮವನ್ನು ನಂಬದ ಜನರು ಒಟ್ಟಿಗೆ ಸೇರುವುದು ಬಹಳ ದೊಡ್ಡ ಆವಶ್ಯಕವಾಗಿದೆ. ಎಲ್ಲ ವಂಶಗಳ, ಎಲ್ಲ ಜನಾಂಗಗಳ ಮತ್ತು ಎಲ್ಲ ಬುಡಕಟ್ಟಿನ ಜನರು ಸರ್ವರನ್ನು ಬಾಧಿಸುವ ಸಮಸ್ಯೆಯಾಗಿರುವ ಲೋಕವನ್ನು ವಿನಾಶದಿಂದ ರಕ್ಷಿಸುವುದಕ್ಕೆ ಒಗ್ಗೂಡುವುದು ಆವಶ್ಯಕವಾಗಿದೆ. ಎಲ್ಲ ಶಾಂತಿ ಪ್ರಿಯರಾದ ಜನರು ಎಲ್ಲ ವಿಧಗಳ ಕ್ರೂರ ಕೃತ್ಯಗಳನ್ನು ಅವುಗಳು ಎಲ್ಲಿ ಸಂಭವಿಸುವುದಾದರೂ ತಡೆಯಲು ಒಗ್ಗೂಡಬೇಕು. ಪ್ರತಿಯೊಬ್ಬನು ಎಲ್ಲ ವಿಧ ಶತ್ರುತ್ವವನ್ನೂ ದ್ವೇಷವನ್ನೂ ಅಸೂಯೆಯನ್ನೂ ತನ್ನ ಹೃದಯದಿಂದ ದೂರಸರಿಸಬೇಕು. ಹೀಗೆ ಮಾಡದಿದ್ದರೆ ಶತ್ರುತ್ವಗಳು ಸ್ಫೋಟಗೊಂಡು ಲೋಕವನ್ನು ನಾಶಮಾಡುವುದಕ್ಕೆ ಕಾರಣವಾಗುವುದು. ಒಂದು ಮಹಾಯುದ್ಧದ ಚಿಹ್ನೆಗಳು ದಿಗಂತದಲ್ಲಿ ಕಾಣಿಸುತ್ತಿವೆ. ನಮ್ಮನ್ನು ವಿನಾಶದ ಪರಿಣಾಮಗಳಿಂದ ಸಂರಕ್ಷಿಸಲು ಒಂದೇ ಒಂದು ಮಾರ್ಗವಿದೆ. ನಾವು ಏಕದೇವನನ್ನು ಕರುಣೆದೋರಲು ಬೇಡಿಕೊಳ್ಳಬೇಕು. ಅವನು ತನ್ನ ಸೃಷ್ಟಿಗಳ ಬಗ್ಗೆ ಕಾರುಣ್ಯದೋರುವವನಾಗಿದ್ದಾನೆ. ಲೋಕ ಇದರ ಬಗ್ಗೆ ಒಲವುಳ್ಳದಾಗಲಿ ಎಂದು ನಾನು ಪ್ರಾರ್ಥಿಸುತ್ತೇನೆ."

"ಇಂದು ಲಭ್ಯವಿರುವ ಆಯುಧಗಳು ಎಷ್ಟು ವಿನಾಶಕಾರಿಗಳಾಗಿವೆ ಎಂದರೆ ಅವುಗಳನ್ನು ಪ್ರಯೋಗಿಸಿದರೆ ಅದರ ದುಷ್ಪರಿಣಾಮವಾಗಿ ಪೀಳಿಗೆಗಳ ನಂತರ ಪೀಳಿಗೆಗಳ ಮಕ್ಕಳು ತೀವ್ರ ಶಾರೀರಿಕ ವಿಕಲತೆಗಳಿಂದ ಜನಿಸುವರು.

ವಿನಾಶಕಾರಿ ಯುದ್ಧದ ಪರಿಣಾಮಗಳು ಆ ಯುದ್ಧಕ್ಕೆ ಮಾತ್ರ ಸೀಮಿತವಾಗದೆ ಅದರ ದುಷ್ಪರಿಣಾಮಗಳು ಪೀಳಿಗೆಗಳಿಂದ ಪೀಳಿಗೆಗಳಿಗೆ ವ್ಯಾಪಿಸುವುವು. ಇವು ಅಂತಹ ಯುದ್ಧಗಳ ನೈಜ ಪರಿಣಾಮಗಳಾಗಿವೆ. ಹೀಗಿದ್ದರೂ ಸ್ವಾರ್ಥಿಗಳಾದ ಅವಿವೇಕಿ ಜನರು ತಮ್ಮ ಆವಿಷ್ಕಾರಗಳ ಬಗ್ಗೆ ಅತ್ಯಂತ ಹೆಚ್ಚು ಹೆಮ್ಮೆ ಪಡುತ್ತಾರೆ ಮತ್ತು ತಾವು ಉತ್ಪಾದಿಸಿದುದು ಲೋಕಕ್ಕೆ ಒಂದು ಕೊಡುಗೆಯಾಗಿದೆ ಎಂದು ವರ್ಣಿಸುತ್ತಾರೆ.

ಆದರೆ ಸ್ಪಷ್ಟವಾಗಿ ತಿಳಿಯಬೇಕಾದುದೇನೆಂದರೆ ಈಗಿನ ಕಾಲದಲ್ಲಿ ಅಣುಅಸ್ತ್ರಗಳನ್ನು ಪ್ರಯೋಗಿಸುವುದಾದರೆ ಕೆಲವು ವಿಶಿಷ್ಟ

ದೇಶಗಳ ಭೂಭಾಗಗಳು ಸಂಪೂರ್ಣವಾಗಿ ಭೂಪಟದಿಂದ ಅಳಿಸಿ ಹೋಗುವುವು; ಅವು ಅಸ್ತಿತ್ವದಲ್ಲಿರಲಾರವು.

ಅತ್ಯಂತ ಹೆಚ್ಚು ಭಯವನ್ನು ಹುಟ್ಟಿಸುವ ವಿಷಯವೇನೆಂದರೆ ಅಣುಅಸ್ತ್ರಗಳು ಕೊನೆಗೆ ಎಂತಹ ಜನರ ಕೈಗಳಿಗೆ ದೊರಕುವುದೆಂದರೆ ಅವರಿಗೆ ತಮ್ಮ ದುಷ್ಕೃತ್ಯಗಳ ಪರಿಣಾಮಗಳ ಬಗ್ಗೆ ಚಿಂತಿಸುವ ಶಕ್ತಿ ಇರುವುದಿಲ್ಲ ಅಥವಾ ಅವರು ಅದರ ಬಗ್ಗೆ ಚಿಂತಿಸಲು ಇಚ್ಛಿಸುವುದೇ ಇಲ್ಲ.

ಮಹಾಶಕ್ತಿಶಾಲಿ ದೇಶಗಳು ನ್ಯಾಯಯುತವಾಗಿ ವರ್ತಿಸುವುದಿಲ್ಲವಾದರೆ, ಚಿಕ್ಕ ದೇಶಗಳ ಬೇಗುದಿಗಳನ್ನು ನಿವಾರಿಸುವುದಿಲ್ಲವಾದರೆ, ಮಹತ್ತರವಾದ ಮತ್ತು ವಿವೇಕಭರಿತ ಧೋರಣೆಗಳನ್ನು ಕೈಗೊಳ್ಳುವುದಿಲ್ಲವಾದರೆ ಆಗ ಪರಿಸ್ಥಿತಿ ಹತೋಟಿಯಿಂದ ಹೊರಗಾಗುವುದು ಮತ್ತು ಸಂಭವಿಸುವ ವಿನಾಶ ನಾವು ಮನವರಿಕೆ ಮಾಡಲು ಅಸಾಧ್ಯವೂ ಊಹಿಸಲು ಅಸಾಧ್ಯವೂ ಆಗುವುದು. ಶಾಂತಿಯನ್ನು ಬಯಸುವ ಲೋಕದ ಬಹುಸಂಖ್ಯಾತರಾದ ಜನರು ಈ ವಿನಾಶದಿಂದ ಸುತ್ತುವರಿಯಲ್ಪಡುವರು."

**ಅಸ್ತ್ರ ವ್ಯಾಪಾರ ಮತ್ತು ಅಣ್ವಾಯುಧಗಳು**

"ಅಂತರ್‍ರಾಷ್ಟ್ರೀಯ ಮಟ್ಟದಲ್ಲಿಯೂ ರಾಷ್ಟ್ರೀಯ ಮಟ್ಟದಲ್ಲಿಯೂ ಧ್ರುವೀಕರಣ ಮತ್ತು ಒಬ್ಬರಿನ್ನೊಬ್ಬರ ಬಗ್ಗೆ ಕಟುವಾದ ನಿಲುವನ್ನು ಹೊಂದಿರುವುದನ್ನು ನಾವು ಕಾಣುತ್ತಿದ್ದೇವೆ. ಒಬ್ಬರಿನ್ನೊಬ್ಬರ ಕಡೆಗೆ ಬೊಟ್ಟು ಮಾಡುವುದನ್ನು ಬಿಟ್ಟು ಮತ್ತು ಒಬ್ಬರಿನ್ನೊಬ್ಬರನ್ನು ದೂಷಿಸುವುದಕ್ಕೆ ಬದಲಾಗಿ ಪರಿಹಾರ ಮಾರ್ಗಗಳನ್ನು ಈಗ ಕಂಡುಕೊಳ್ಳಬೇಕಾದುದು ಆವಶ್ಯಕವಾಗಿದೆ. ನನ್ನ ಅಭಿಪ್ರಾಯದಲ್ಲಿ ಒಂದು ಸದಾಸಿದ್ಧ ಪರಿಹಾರವಿದೆ. ಅದರ ಪರಿಣಾಮ ತಕ್ಷಣ ಸಿಗುವುದು ಮತ್ತು ಲೋಕದ ಸಮಸ್ಯೆಗಳಿಗೆ ಪರಿಹಾರ ಸಿಗುವುದು. ನಾನು ಉದ್ದೇಶಿಸುವುದು ಅಂತರ್‍ರಾಷ್ಟ್ರೀಯ ಆಯುಧಗಳ ವ್ಯಾಪಾರವನ್ನಾಗಿದೆ. ಅದನ್ನು ತಡೆಗಟ್ಟಬೇಕು ಮತ್ತು ಪರಿಮಿತಿಗೆ ಒಳಪಡಿಸಬೇಕು.

ಪ್ರತಿಯೊಂದು ದೇಶದ ಮುಖ್ಯ ಉದ್ದೇಶ ಮಾನವರಿಗೆ ಹಿತಮಾಡುವುದಾಗಿರಬೇಕಾಗಿದ್ದರೂ ಮತ್ತು ಶಾಂತಿಯನ್ನು ಸ್ಥಾಪಿಸುವುದಾಗಿರಬೇಕಾಗಿದ್ದರೂ ದುಃಖಕರವಾದ ಸತ್ಯವೇನೆಂದರೆ ವಾಣಿಜ್ಯ ಹಿತಾಶಕ್ತಿಗಳು ಮತ್ತು ಸಂಪತ್ತು ಗಳಿಸುವುದು ಅನ್ಯ ವಿಷಯಗಳ ಮೇಲೆ ಅನಿವಾರ್ಯವಾಗಿ ಆದ್ಯತೆ ಪಡೆದಿವೆ.

ಯಾವುದೇ ಗುಂಪು ಅಥವಾ ಸರಕಾರ ತಾವು ಸುರಕ್ಷಿತರೆಂಬ ಭ್ರಮೆ ಹೊಂದಿರಬಾರದು. ಏಕೆಂದರೆ ಯುದ್ಧಗಳು ಆರಂಭಿಸಿದರೆ ಅವು ವೇಗವಾಗಿ ಮತ್ತು ಬಹಳ ಸಾರಿ ಅನಿರೀಕ್ಷಿತವಾಗಿ ವ್ಯಾಪಿಸುತ್ತವೆ.

ಇಂದಿನ ಕಾಲದಲ್ಲಿ ಅನೇಕ ದೇಶಗಳು ಅಣ್ವಾಯುಧಗಳನ್ನು ಹೊಂದಿವೆ. ಅಂತಹ ಯಾವುದಾದರೂ ಒಂದು ಅಣ್ವಸ್ತ್ರವನ್ನು ಎಂದಾದರೂ ಯಾರಾದರೂ ಪ್ರಯೋಗಿಸಿದರೆ ಅದರ ದುಷ್ಪರಿಣಾಮಗಳು ಊಹಿಸಲು ಅಸಾಧ್ಯವಾಗುವುವು ಮತ್ತು ನಾವು ಇಹಲೋಕ ಬಿಟ್ಟು ಹೋದ ನಂತರ ಸಹ ದುಷ್ಪರಿಣಾಮಗಳು ಮುಂದುವರಿಯುವುವು. ನಾವು ನಮ್ಮ ಮುಂದಿನ ಪೀಳಿಗೆಗೆ ಸಮೃದ್ಧಿಯ ಬಳುವಳಿ ನೀಡುವುದಕ್ಕೆ ಬದಲಾಗಿ ನಾವು ಅವರಿಗೆ ದುಃಖವನ್ನೂ ನಿರಾಶೆಯನ್ನೂ ಬಿಟ್ಟು ಹೋಗುವ ಅಪರಾಧಿಗಳಾಗುವೆವು. ಲೋಕಕ್ಕೆ ನಮ್ಮ ಕೊಡುಗೆ ಅಂಗವಿಕಲ ಮಕ್ಕಳ ಪೀಳಿಗೆಯನ್ನಾಗುವುದು. ಅವರು ಶಾರೀರಿಕ ಮತ್ತು ಮಾನಸಿಕ ವಿಕಲತೆಗಳಿಗೆ ಈಡಾಗುವರು. ಅಂತಹ ಮಕ್ಕಳ ಹೆತ್ತವರು ಕೂಡ ಅವರನ್ನು ಪಾಲನೆ ಪೋಷಣೆ ಮಾಡಲು ಜೀವಿಸುವರೆಂಬ ಬಗ್ಗೆ ಯಾರಿಗೆ ತಾನೆ ತಿಳಿಯಲು ಸಾಧ್ಯ?

ನಾವು ಯಾವಾಗಲೂ ನೆನಪಿನಲ್ಲಿಡಬೇಕಾದುದು ಏನೆಂದರೆ ನಾವು ನಮ್ಮ ಸ್ವಾರ್ಥ ಹಿತಾಸಕ್ತಿಗಳಿಗೋಸ್ಕರ ಮಾತ್ರ ಹೇಗಾದರೂ ಪ್ರಯತ್ನ ಮಾಡುವುದಾದರೆ ಅನ್ಯರ ಹಕ್ಕುಗಳು ಅಪಹರಿಸಲ್ಪಡುವುವು ಮತ್ತು ಅದರ ಪರಿಣಾಮವಾಗಿ ಸಂಘರ್ಷ, ಯುದ್ಧ ಮತ್ತು ಸಂಕಷ್ಟ ಮಾತ್ರ ತಲೆದೋರುವುವು.

ಲೋಕಕ್ಕೆ ನಾನು ನೀಡುವ ಸಂದೇಶ ಏನೆಂದರೆ ಕೇವಲ ಇಂದಿನ ಬಗ್ಗೆ ಮಾತ್ರ ಯೋಚಿಸದೆ ನಾಳೆಯ ಬಗ್ಗೆಯೂ ಯೋಚಿಸಿರಿ. ನಾವು ನಮ್ಮ ಮಕ್ಕಳಿಗೆ ಶುಭಪ್ರತೀಕ್ಷೆ ಮತ್ತು ಸದವಕಾಶಗಳ ಬಳುವಳಿಯನ್ನು ಬಿಟ್ಟು ಹೋಗಬೇಕು. ನಾವು ನಮ್ಮ ಪಾಪಕೃತ್ಯಗಳ ಭಯಾನಕ ಪರಿಣಾಮಗಳನ್ನು ಅವರಿಗೆ ಬಳುವಳಿಯಾಗಿ ಬಿಟ್ಟು ಹೋಗುವವರಾಗಬಾರದು."

**ಇಸ್ಲಾಮ್ ಮತ್ತು ಸಹಿಷ್ಣು ಮನೋಭಾವ**

"ಇಸ್ಲಾಮ್ ಎಲ್ಲ ಧರ್ಮಗಳ ಪ್ರವಾದಿಗಳನ್ನು ನಂಬಬೇಕೆಂದು ಆವಶ್ಯಪಡುತ್ತಿದೆ ಮತ್ತು ಆ ಪ್ರವಾದಿಗಳಿಗೆ ಅವರು ನಿಯೋಜಿಸಲ್ಪಟ್ಟಾಗ ಅವತೀರ್ಣವಾದ ಉಪದೇಶಗಳು ಸತ್ಯವೆಂದು ಪ್ರತಿಪಾದಿಸುತ್ತಿದೆ. ಹೀಗಿರುವಾಗ ಇಸ್ಲಾಮ್ ಧರ್ಮ ಅನ್ಯ ಧರ್ಮಗಳ ಬಗ್ಗೆ ಸಹಿಷ್ಣುತೆಯನ್ನು ಉಪದೇಶಿಸುವುದಿಲ್ಲ ಎಂದು ಹೇಳಲು ಹೇಗೆ ತಾನೆ ಸಾಧ್ಯ? ಅನ್ಯ ಧರ್ಮದೊಂದಿಗೆ ಸಾಮರಸ್ಯವನ್ನೂ ಸೌಹಾರ್ದವನ್ನೂ ಅದು ಉಪದೇಶಿಸದಿರುವುದಾದರೂ ಹೇಗೆ? ಅದು ಧಾರ್ಮಿಕ ಅಸಹಿಷ್ಣುತೆಯನ್ನು ಮತ್ತು ಅನ್ಯ ಧರ್ಮೀಯರೊಂದಿಗೆ ಪ್ರೀತಿ ವಾತ್ಸಲ್ಯದಿಂದ ಇರದಿರಲು ಉಪದೇಶಿಸುವುದೇ? ಅದು ಅಸಂಭವನೀಯವಾಗಿದೆ. ಇಸ್ಲಾಮ್ ಧರ್ಮದಲ್ಲಿ ಸಹಿಷ್ಣುತೆ ಇಲ್ಲವೆಂದೂ ಅಭಿಪ್ರಾಯ ಸ್ವಾತಂತ್ರ್ಯವಿಲ್ಲವೆಂದೂ ಆಪಾದಿಸುವುದು ನಿರಾಧಾರವಾಗಿದೆ.

ನಾನು ಹೇಳಲು ಬಯಸುವುದೇನೆಂದರೆ "ಇಸ್ಲಾಮ್" ಎಂಬ ಹೆಸರು ಸಹ ಕ್ರೌರ್ಯ, ಅನ್ಯರೊಂದಿಗೆ ಸಹಜೀವನ ನಡೆಸಲು ಸಾಧ್ಯವಿಲ್ಲದಿರುವಿಕೆ, ಸಹನೆ ರಾಹಿತ್ಯ ಮೊದಲಾದುವುಗಳಿಗೆ ಪ್ರತಿವಿಷದ ರೂಪದಲ್ಲಿದೆ. "ಇಸ್ಲಾಮ್" ಶಬ್ದದ ಪ್ರಮುಖ ಅರ್ಥಗಳನ್ನು ನಾನು ವಿವರಿಸುವೆನು: ಇಸ್ಲಾಮ್ ಶಬ್ದದ ಒಂದು ಅರ್ಥ, ಶಾಂತಿ ಎಂದಾಗಿದೆ. ಇನ್ನೊಂದು ಅರ್ಥ, ಶರಣಾಗತಿ ಮತ್ತು ವಿಧೇಯತೆ ಆಗಿದೆ. ಮತ್ತೊಂದು ಅರ್ಥ, ಶಾಂತಿಯನ್ನು ಸ್ಥಾಪಿಸುವುದು ಮತ್ತು ಸಾಮರಸ್ಯ ಸ್ಥಾಪಿಸುವುದಾಗಿದೆ. ಮಗದೊಂದು ಅರ್ಥ, ಯಾರಾದರೂ ನಿಮಗೆ ಹಾನಿಯನ್ನುಂಟುಮಾಡುವುದು ಸಂಭಾವ್ಯವಾಗಿರುವಾಗ ಅವನನ್ನು ಬಿಟ್ಟು ದೂರ ಸರಿಯುವುದು. ಸೌಹಾರ್ದದಿಂದ ಜೊತೆಗೂಡಿ ನಡೆಯುವುದು ಎಂಬ ಅರ್ಥ ಸಹ ಈ ಪದಕ್ಕಿದೆ.

ಸಹನೆ ದೋರುವಿಕೆ ಮತ್ತು ಕ್ಷಮಿಸುವಿಕೆಯ ಅತ್ಯುತ್ತಮ ಉದಾಹರಣೆ ಇಸ್ಲಾಮ್ ಧರ್ಮದ ಪೈಗಂಬರರು(ಸ) ಪ್ರಕಟಿಸಿದ್ದಾರೆ. ಮಕ್ಕ ವಿಜಯದ ಸಂದರ್ಭದಲ್ಲಿ ಅವರು, ಹಿಂಸಾಚಾರ ನಡೆಸಿದ

ಎಲ್ಲರನ್ನೂ ಕ್ಷಮಿಸಿದರು. ಚರಿತ್ರೆ ಈ ಘಟನೆಗೆ ಸಾಕ್ಷ್ಯ ನೀಡಿದೆ. ಇಕ್ರಿಮ ಇಸ್ಲಾಮಿನ ಅತ್ಯಂತ ದೊಡ್ಡ ಶತ್ರುವಾಗಿದ್ದನು. ಹಝ್ರತ್ ಪೈಗಂಬರರು(ಸ) ಸಾರ್ವತ್ರಿಕ ಕ್ಷಮಾದಾನವನ್ನು ಪ್ರಕಟಿಸಿದ್ದರೂ ಇಕ್ರಿಮನು ಮುಸ್ಲಿಮರನ್ನು ಆಕ್ರಮಿಸಿದನು ಮತ್ತು ಸೋತು ಓಡಿ ಹೋದನು. ಇಕ್ರಿಮನ ಪತ್ನಿ ಹಝ್ರತ್ ಪೈಗಂಬರರೊಂದಿಗೆ(ಸ) ತನ್ನ ಪತಿಯನ್ನು ಕ್ಷಮಿಸಬೇಕೆಂದು ಬೇಡಿಕೊಂಡಾಗ ಅವನನ್ನು ಹಝ್ರತ್ ಪೈಗಂಬರರು(ಸ) ಕ್ಷಮಿಸಿದರು. ತನ್ನನ್ನು ಕ್ಷಮಿಸಿದ ನಂತರ ಇಕ್ರಿಮನು ಹಝ್ರತ್ ಪೈಗಂಬರರ(ಸ) ಮುಂದೆ ಹಾಜರಾಗಿ ಅಹಂಭಾವದಿಂದ ಹೇಳಿದನು: 'ನೀವು ನನ್ನನ್ನು ಕ್ಷಮಿಸಿದ ಕಾರಣ ನಾನು ಮುಸ್ಲಿಮನಾದೆನು ಎಂದು ನೀವು ಭಾವಿಸುವಿರಾದರೆ ನಾನು ಮುಸ್ಲಿಮನಾಗಿಲ್ಲ ಎಂದು ನಿಮಗೆ ಸ್ಪಷ್ಟಪಡಿಸುತ್ತೇನೆ. ನಾನು ನನ್ನ ಧರ್ಮದಲ್ಲಿ ಸ್ಥಿರವಾಗಿರುವಾಗ ನೀವು ನನ್ನನ್ನು ಕ್ಷಮಿಸುವಿರಾದರೆ ಅದು ಉತ್ತಮ. ಹಾಗಲ್ಲವಾದರೆ ನಾನು ಹೋಗುವೆನು.' ಆಗ ಹಝ್ರತ್ ಪೈಗಂಬರರು(ಸ) ಹೇಳಿದರು: 'ನೀನು ನಿನ್ನ ಧರ್ಮದಲ್ಲಿಯೇ ವಿಶ್ವಾಸಿಯಾಗಿರುವ ಸ್ವಾತಂತ್ರ್ಯ ಹೊಂದಿರುವೆ. ನೀನು ಎಲ್ಲ ವಿಧದಲ್ಲೂ ಸ್ವತಂತ್ರನಾಗಿರುವೆ.' ಆ ಸಂದರ್ಭದಲ್ಲಿ ಸಾವಿರ ಗಟ್ಟಲೆ ಮಕ್ಕದ ನಿವಾಸಿಗಳು ಮುಸ್ಲಿಮರಾಗಿರಲಿಲ್ಲ. ಅವರು ಸೋತವರಾಗಿದ್ದರೂ ಅವರಿಗೆ ಧಾರ್ಮಿಕ ಸ್ವಾತಂತ್ರ್ಯ ನೀಡಲಾಗಿತ್ತು. ಇದು ಪವಿತ್ರ ಖುರ್‌ಆನಿನ ಉಪದೇಶವಾಗಿದೆ ಮತ್ತು ಹಝ್ರತ್ ಪೈಗಂಬರರ(ಸ) ನಡೆವಳಿಕೆಯಾಗಿದೆ."

"ಇಸ್ಲಾಮ್ ಧಾರ್ಮಿಕ ಸ್ವಾತಂತ್ರ್ಯದ ಪ್ರಾಮುಖ್ಯತೆ ಬಗ್ಗೆ ಎಷ್ಟು ಒತ್ತಿ ಹೇಳಿದೆ ಎಂದರೆ ಅಂತಹ ಉನ್ನತ ಮಟ್ಟದ ಉಪದೇಶಗಳು ಬೇರೆ ಎಲ್ಲಿಯೂ ಕಾಣಲು ಅಸಾಧ್ಯವಾಗಿದೆ. ಅನ್ಯಧರ್ಮಗಳು ಮಿಥ್ಯವೆಂದು ಸಾಬೀತುಗೊಳಿಸುವ ತನಕ ತಮ್ಮ ಧರ್ಮ ಸತ್ಯವೆಂದು ಸಾಬೀತುಗೊಳಿಸಲು ಸಾಧ್ಯವಿಲ್ಲ ಎಂದು ಜನರು ಭಾವಿಸುತ್ತಾರೆ. ಆದರೆ ಇಸ್ಲಾಮಿನ ನಿಲುವು ಬೇರೆಯೇ ಆಗಿದೆ. ಏಕೆಂದರೆ ಅದು ಹೀಗೆ ಉಪದೇಶಿಸುತ್ತಿದೆ: ಇಸ್ಲಾಮ್ ಮಾನವರೆಲ್ಲರಿಗೋಸ್ಕರ ಅವತೀರ್ಣವಾದ ಸತ್ಯ ಧರ್ಮವಾಗಿದ್ದರೂ ಲೋಕದಲ್ಲಿ ಆಗಮಿಸಿದ ಎಲ್ಲ ಪ್ರವಾದಿಗಳನ್ನು ಎಲ್ಲ ದೇಶಗಳಿಗೂ ಜನಾಂಗಗಳಿಗೂ ಕಳುಹಿಸಿದುದು ಏಕ ದೇವನೇ. ಈ ವಿಷಯವನ್ನು ಪವಿತ್ರ ಖುರ್‌ಆನ್‌ನಲ್ಲಿ ಸ್ಪಷ್ಟವಾಗಿ ವಿವರಿಸಲಾಗಿದೆ. ಎಲ್ಲ ಪ್ರವಾದಿಗಳನ್ನು ಪ್ರೀತಿ ವಾತ್ಸಲ್ಯಗಳ ಉಪದೇಶಗಳೊಂದಿಗೆ ತಾನು ಕಳುಹಿಸಿರುವುದಾಗಿಯೂ ಎಲ್ಲ ಸತ್ಯವಿಶ್ವಾಸಿಗಳು ಅವರನ್ನು ನಂಬಬೇಕೆಂದೂ ಅಲ್ಲಾಹನು ಹೇಳಿರುವನು. ಇಸ್ಲಾಮ್ ಬಹಿರಂಗವಾಗಿ ಪ್ರತಿಯೊಂದು ದೇಶದ ಪ್ರತಿಯೊಂದು ಧರ್ಮವನ್ನು ಪ್ರಶಂಸಿಸುವ ಹಾಗೆ ಬೇರೆ ಯಾವ ಧರ್ಮವೂ ಮಾಡುವುದಿಲ್ಲ. ಪ್ರವಾದಿಗಳು ಎಲ್ಲ ದೇಶಗಳಿಗೂ ಜನಾಂಗಗಳಿಗೂ ಕಳುಹಿಸಲ್ಪಟ್ಟಿದ್ದಾರೆಂದು ಮುಸ್ಲಿಮರು ನಂಬುವುದರಿಂದ ಅವರು ಅನ್ಯ ಧರ್ಮದ ಪ್ರವಾದಿಗಳನ್ನು ಸುಳ್ಳುಗಾರರೆಂದು ಹೇಳಲು ಸಾಧ್ಯವಿಲ್ಲ. ದೇವನು ನಿಯೋಜಿಸಿದ ಪ್ರವಾದಿಗಳನ್ನು ಗೌರವ ರಹಿತವಾಗಿ ಕಾಣುವುದು, ಲೇವಡಿ ಮಾಡುವುದು, ಅಪಹಾಸ್ಯ ಮಾಡುವುದು ಮುಸ್ಲಿಮನಾದವನಿಗೆ ಸಾಧ್ಯವಿಲ್ಲ ಮತ್ತು ಅನ್ಯಧರ್ಮಗಳ ಅನುಯಾಯಿಗಳ ಭಾವನೆಗಳಿಗೆ ನೋವುಂಟಾಗುವಂತೆ ವರ್ತಿಸಲು ಕೂಡ ಸಾಧ್ಯವಿಲ್ಲ."

**ವಲಸೆಗಾರರು ಮತ್ತು ನಿರಾಶ್ರಿತರು**

"ನಿಶ್ಚಯವಾಗಿಯೂ ಕೆಲವು ವಲಸೆಗಾರರು ಅಪರಾಧಗಳನ್ನು ಮಾಡಿದ್ದಾರೆ ಮತ್ತು ಅವರ ಲಜ್ಜಾತ್ಮಕ ವರ್ತನೆಗಳು ಭಯವನ್ನೂ ಆತಂಕವನ್ನೂ ಸೃಷ್ಟಿಸುವಂತೆ ಮಾಡಿವೆ. ನಾನು ಒಂದು ವಿಷಯವನ್ನು ಸ್ಪಷ್ಟಗೊಳಿಸಲು ಇಚ್ಛಿಸುತ್ತೇನೆ. ಒಬ್ಬ ಮಹಿಳೆಯ ಗೌರವವನ್ನು ಕಳಂಕಪಡಿಸುವವನು ಮತ್ತು ಯಾವುದಾದರೂ ರೀತಿಯಲ್ಲಿ ಆಕೆಯನ್ನು ದುರುಪಯೋಗಪಡಿಸುವವನು ಇಸ್ಲಾಮ್ ಧರ್ಮ ತತ್ವಗಳಿಗೆ ಸಂಪೂರ್ಣ ವಿರುದ್ಧವಾಗಿ ವರ್ತಿಸುವವನಾಗಿದ್ದಾನೆ. ಅಂತಹ ಅಶ್ಲೀಲ ಮತ್ತು ನಿಂದನೀಯ ಅಪರಾಧ ಮಾಡುವವರಿಗೆ ಇಸ್ಲಾಮ್ ಕಠಿಣವಾದ ಶಿಕ್ಷೆ ವಿಧಿಸುತ್ತಿದೆ.

ತಮ್ಮದೇ ಆಗಿರುವ ಯಾವುದೇ ಕಾರಣವಿಲ್ಲದೆ ಸಂಕಷ್ಟವನ್ನು ಅನುಭವಿಸುವ ನೈಜ ನಿರಾಶ್ರಿತರನ್ನು ಸಮಾಜ ತಿರಸ್ಕರಿಸಬಾರದು. ಶಾಂತಿಯಿಂದ ಜೀವಿಸಲು ಮಾತ್ರ ಸದವಕಾಶವನ್ನು ಇಚ್ಛಿಸುವ, ದೇಶದ ಕಾನೂನು ಕಾಯಿದೆಗಳಿಗೆ ಬದ್ಧರಾಗಿ ಉತ್ತಮ ನಾಗರಿಕರಾಗಲು ಇಚ್ಛಿಸುವ ನಿಷ್ಕಳಂಕರಾದ ಜನರನ್ನು ಸಮಾಜವು ಬದಿಗೆ ಸರಿಸಬಾರದು. ತಮ್ಮ ಜೀವಿತವು ಭಗ್ನಗೊಂಡ, ಹಿಂಸಾಚಾರಕ್ಕೆ ಈಡಾದ, ನಿಸ್ಸಹಾಯಕರಾದ, ದುರ್ಬಲರಾದ ಮತ್ತು ಪ್ರತಿರೋಧ ಶಕ್ತಿ ಕಳೆದುಕೊಂಡ ಜನರಿಗೆ ನಾವು ನೆರವಿನ ಹಸ್ತವನ್ನು ನೀಡಬೇಕು. ನಾವು ನಮ್ಮ ಕಾರುಣ್ಯವನ್ನು ಪ್ರಕಟಿಸೋಣ. ಹತಾಶೆಯಿಂದ ಬಳಲುತ್ತಿರುವವರ ಭಾರಗಳನ್ನು ಎತ್ತಲು ಹೆಗಲು ನೀಡಲು ನಾವು ಸಿದ್ಧರಾಗಿರೋಣ.

ಇನ್ನೊಂದು ಕಡೆ ವಲಸೆ ಬಂದವರಿಗೆ ತಮ್ಮ ಹೊಸ ದೇಶಗಳಲ್ಲಿ ಹೊಣೆಗಾರಿಕೆಗಳಿವೆ. ನಾನು ಮೊದಲು ಹೇಳಿದಂತೆ, ಅವರು ತಮ್ಮ ಹೊಸ ಸಮಾಜಕ್ಕೆ ನೆರವಾಗಬೇಕು ಮತ್ತು ಆ ಸಮಾಜದೊಂದಿಗೆ ಭಾವೈಕ್ಯತೆಗೆ ಪರಿಶ್ರಮಪಡಬೇಕು. ಅವರು ತಮ್ಮನ್ನು ಸ್ಥಳೀಯರಿಂದ ಪ್ರತ್ಯೇಕಿಸಬಾರದು. ಅವರು ತಮ್ಮ ಹೊಸ ದೇಶಕ್ಕೆ ಸೇವೆ ಸಲ್ಲಿಸಬೇಕು ಮತ್ತು ಅದರ ಮುಂದುವರಿಯುತ್ತಿರುವ ಅಭಿವೃದ್ಧಿಗೆ ಜೊತೆಗೂಡಿ ಕೆಲಸ ಮಾಡಬೇಕು. ವಿವಿಧ ಹಿನ್ನಲೆಗಳ ಮತ್ತು ವಿವಿಧ ಸಂಪ್ರದಾಯಗಳ ಜನರು ಹೇಗೆ ಜೊತೆಗೂಡಿ ಜೀವಿಸಬಹುದೆಂಬುದಕ್ಕೆ ಮಾರ್ಗಗಳನ್ನು ಕಂಡುಕೊಳ್ಳಬೇಕು."

ಹಝ್ರತ್ ಖಲೀಫರು ಶಾಂತಿ, ಸೌಹಾರ್ದ ಮತ್ತು ನ್ಯಾಯದ ಬಗ್ಗೆ ಒತ್ತಿ ಹೇಳುತ್ತಿರುವುದು ಹೊಸ ಚಳುವಳಿ ರೂಪದಲ್ಲಿ ಅಲ್ಲ. ಅದು ನೈಜ ಇಸ್ಲಾಮೀ ಸಂದೇಶವೇ ಆಗಿದೆ. ಅವರು ಹೇಳುತ್ತಾರೆ: "ಕಳೆದ ನೂರು ವರ್ಷಗಳ ಚರಿತ್ರೆ ಸಾಬೀತು ಪಡಿಸುವುದೇನೆಂದರೆ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸದಸ್ಯರು ತಾವು ವಾಸಿಸುವ ದೇಶಕ್ಕೆ ನಿಷ್ಠೆಯನ್ನು ಯಾವಾಗಲೂ ಪ್ರಕಟಿಸುವವರೂ ಎಲ್ಲ ರೀತಿಗಳ ತೀವ್ರವಾದ, ವಿದ್ರೋಹ ಮತ್ತು ಅಸ್ತವ್ಯಸ್ತತೆಯಿಂದ ಸಂಪೂರ್ಣವಾಗಿ ಮುಕ್ತರೂ ಆಗಿದ್ದಾರೆ. ಅಹ್ಮದಿಯಾ ಜಮಾಅತಿನ ಈ ಮೂಲಭೂತ ದೇಶ ಪ್ರೇಮ ಮತ್ತು ನಿಷ್ಠೆಯ ಕಾರಣವೇನೆಂದರೆ ಅದು ವಾಸ್ತವಿಕವಾಗಿ ನೈಜ ಇಸ್ಲಾಮೀ ಸಂಘಟನೆ ಆಗಿದೆ. ನಮ್ಮ ಸಮುದಾಯ ವೈಶಿಷ್ಟ್ಯಪೂರ್ಣವಾಗಿದೆ. ಏಕೆಂದರೆ ನಾವು ಇಸ್ಲಾಮಿನ ನೈಜ ಶಾಂತಿಭರಿತ ಉಪದೇಶಗಳನ್ನು ಲೋಕದ ಜನರಿಗೆ ಪರಿಚಯಿಸುತ್ತಾ ಮುಂದುವರಿಯುತ್ತಿದ್ದೇವೆ. ಆ ಉಪದೇಶಗಳು ಇಸ್ಲಾಮಿನ ನೈಜ ತತ್ವಗಳಾಗಿ ಅಂಗೀಕರಿಸಲ್ಪಡಲು ನಾವು ಯಾವಾಗಲೂ ಪರಿಶ್ರಮಪಡುತ್ತಿದ್ದೇವೆ.

**(The Review of Religions - Oct 2018 ಸಂಚಿಕೆಯಿಂದ. ಭಾಷಾಂತರ: ಎಮ್. ಉಬೈದುಲ್ಲಾ)**

# ಮಹಿಳೆಯರ ಹಕ್ಕುಗಳು ಮತ್ತು ಸಮಾನತೆ

**ಇಸ್ಲಾಮ್‌ನಲ್ಲಿ ಮಹಿಳೆಯ ಸ್ಥಾನ ಯಾವಾಗಲೂ ವಾಗ್ವಾದಗಳಿಗೆ ಕಾರಣವಾಗುವ ವಿಷಯವಾಗಿದೆ. ಇಸ್ಲಾಮ್‌ನಲ್ಲಿ ಮಹಿಳೆಯರು ಕೀಳು ಸ್ಥಾನ ಹೊಂದಿದ್ದಾರೆಂದೂ ಸ್ವಾತಂತ್ರ್ಯ ಅನುಭವಿಸುವುದಿಲ್ಲವೆಂದೂ ಹಲವು ಜನರು ನಂಬುತ್ತಾರೆ. ಆದರೆ ಅವರ ಈ ನಂಬಿಕೆ ತಪ್ಪಾಗಿದೆ. ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಜಾಗತಿಕ ಸರ್ವೋಚ್ಚ ನೇತಾರರೂ ಐದನೆಯ ಖಲೀಫರೂ ಆಗಿರುವ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಇಸ್ಲಾಮ್ ಧರ್ಮದ ಮಹಿಳೆಯರ ವಾಸ್ತವಿಕ ಸ್ಥಾನಮಾನವನ್ನು ವಿವರಿಸಿದ್ದಾರೆ. ಮಹಿಳೆಯರು ಸ್ವತಂತ್ರರಾಗಿರುವರೆಂದೂ ಅವರು ಧೈರ್ಯದಿಂದ ವರ್ತಿಸಿದ ಉದಾಹರಣೆಗಳು ಅನುಕರಣೀಯವೆಂದೂ ಯು.ಕೆ. ಅಹ್ಮದಿಯಾ ಮುಸ್ಲಿಮ್ ಮಹಿಳೆಯರ ಸಂಘಟನೆಯಾದ ಲಜ್ನ ಇಮಾಇಲ್ಲಾಹ್ ಸದಸ್ಯರನ್ನು ಸಂಬೋಧಿಸುತ್ತಾ ಹೇಳಿದರು.**

ಹಝ್ರತ್ ಖಲೀಫತುಲ್ ಮಸೀಹ್ ಹೀಗೆ ಹೇಳಿದರು:

ಇಸ್ಲಾಮ್ ಧರ್ಮದ ನೈಜ ತತ್ವಗಳನ್ನು ಅರಿತುಕೊಂಡ ಪರಿಣಾಮವಾಗಿ ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸದಸ್ಯರು ಇಸ್ಲಾಮ್ ಧರ್ಮದಲ್ಲಿ ಮಹಿಳೆಯರಿಗಿರುವ ಸ್ಥಾನಮಾನಗಳನ್ನು ಮನವರಿಕೆ ಮಾಡಿಕೊಂಡಿದ್ದಾರೆ. ಆದರೆ ಮಹಿಳೆಯರ ಈ ಸ್ಥಾನಮಾನಗಳ ಬಗ್ಗೆ ಅಹ್ಮದಿಯೇತರ ಮುಸ್ಲಿಮರಿಗೂ ಮುಸ್ಲಿಮೇತರ ಬಹುಸಂಖ್ಯಾತ ಜನರಿಗೂ ತಿಳಿದಿಲ್ಲ ಮತ್ತು ಅವರು ಮನವರಿಕೆ ಮಾಡಿಕೊಂಡಿಲ್ಲ. ಇಂದು ನೀವು ನಡೆಸುವ ಇಜ್ತಿಮಾ (ದೇಶದ ಎಲ್ಲ ಕಡೆಗಳಿಂದಲೂ ಬಂದು ಜಮಾಯಿಸುವ ವಾರ್ಷಿಕ ಸಮ್ಮೇಳನ) ಅಹ್ಮದೀ ಮಹಿಳೆಯರು ಮತ್ತು ಬಾಲಿಕೆಯರು ಮಾತ್ರ ಭಾಗವಹಿಸುವ ಸಮ್ಮೇಳನವಾಗಿದೆ. ಈ ಸಮ್ಮೇಳನದ ಕಾಲದಲ್ಲಿ ಧಾರ್ಮಿಕ ಜ್ಞಾನವನ್ನು ವರ್ಧಿಸಲು, ನೈತಿಕ ಮತ್ತು ಆಧ್ಯಾತ್ಮಿಕ ಪ್ರಗತಿಗೋಸ್ಕರ ಅನೇಕ ಕಾರ್ಯಕ್ರಮಗಳನ್ನು ಜರಗಿಸಲಾಗುತ್ತಿದೆ. ಈ ಸಮ್ಮೇಳನದ ವ್ಯವಸ್ಥೆ ಬಗ್ಗೆ ಹೇಳುವುದಾದರೆ, ಆರಂಭದಿಂದ ಮುಕ್ತಾಯದ ತನಕ ಇದರ ವ್ಯವಸ್ಥೆಯನ್ನು ಮಹಿಳೆಯರೇ ಮಾಡುತ್ತಾರೆ. ನಮ್ಮ ಮಹಿಳೆಯರ ಮತ್ತು ಬಾಲಿಕೆಯರ ಅಭಿರುಚಿ ಮತ್ತು ಆವಶ್ಯಕತೆಗಳಿಗನುಸಾರವಾಗಿ ಕಾರ್ಯಕ್ರಮಗಳನ್ನು ರೂಪಿಸುತ್ತಾರೆ. ಆದುದರಿಂದ ಈ ಸಮ್ಮೇಳನ ಮಹಿಳೆಯರು ಇಸ್ಲಾಮಿನಲ್ಲಿ ಹೊಂದಿರುವ ಸ್ಥಾನಮಾನದ ಪ್ರಾಯೋಗಿಕ ಮತ್ತು ಒಗ್ಗೂಡುವಿಕೆಯ ಪ್ರದರ್ಶನವಾಗಿರುತ್ತದೆ.

ನಮ್ಮ ಧರ್ಮದ ವಿರುದ್ಧ ಮಾಡುವ ಒಂದು ಆಕ್ಷೇಪ, ಅದು ಮಹಿಳೆಯರ ಬಗ್ಗೆ ತಾರತಮ್ಯದಿಂದ ವರ್ತಿಸುತ್ತಿದೆ ಮತ್ತು ಅವರು ಪುರುಷರಿಗಿಂತ ಕೀಳು ಎಂದು ಪರಿಗಣಿಸುತ್ತದೆ ಎಂದಾಗಿದೆ. ಆದರೆ ಈ ಆಕ್ಷೇಪ ಇಸ್ಲಾಮ್ ಧರ್ಮದ ನೈಜ ತತ್ವಗಳಿಗೆ ವಿರುದ್ಧವಾಗಿದೆ. ಪವಿತ್ರ ಖುರ್‌ಆನ್ ಅಧ್ಯಾಯ 4 ವಚನ 2ರಲ್ಲಿ ಮಾನವರ ಸೃಷ್ಟಿಯ ಬಗ್ಗೆ ಅಲ್ಲಾಹನು, ಅವರನ್ನು ಒಂದು ಜೀವಾಳದಿಂದ ಸೃಷ್ಟಿಸಿರುವುದಾಗಿ ಹೇಳಿರುವನು. ಅನಂತರ ಅಲ್ಲಾಹನು ಹೀಗೆ ಹೇಳುತ್ತಾನೆ: **ಖಲಖ ಮಿನ್‌ಹಾ ಝೌಜಹಾ** – ಅದರಿಂದ ಅದರ ಜೋಡಿಯನ್ನೂ ಸೃಷ್ಟಿಸಿದನು.

ಬೈಬಲ್‌ನಲ್ಲಿ ಪುರುಷ ಮತ್ತು ಸ್ತ್ರೀಯ ಸೃಷ್ಟಿಯನ್ನು ವಿವರಿಸುವಾಗ ಜೋಡಿಯ ಬಗ್ಗೆ ಸಹ ಪ್ರಸ್ತಾಪಿಸಲಾಗಿದೆ. ಆದರೆ ಸ್ತ್ರೀಯನ್ನು ಆದಮರ(ಅ) ಪಕ್ಕೆಲುಬಿನಿಂದ ಸೃಷ್ಟಿಸಲಾಯಿತೆಂದು ಬೈಬಲ್ ಹೇಳುತ್ತದೆ. ಇದು ಪವಿತ್ರ ಖುರ್‌ಆನಿನ ಉಪದೇಶಕ್ಕೆ ವಿರುದ್ಧವಾಗಿದೆ. ಸ್ತ್ರೀಯನ್ನು ಪುರುಷನ ಶರೀರದಿಂದಾಗಲಿ, ಅವನ ಪಕ್ಕೆಲುಬಿನಿಂದಾಗಲಿ ಸೃಷ್ಟಿಸಿದುದಾಗಿ ಪವಿತ್ರ ಖುರ್‌ಆನ್ ಹೇಳುವುದಿಲ್ಲ. ಪುರುಷನನ್ನೂ ಸ್ತ್ರೀಯನ್ನೂ ಒಂದು ಜೀವಾಳದಿಂದ ಸೃಷ್ಟಿಸಲಾಯಿತೆಂದೂ ಆದುದರಿಂದ ಸ್ತ್ರೀ ಮತ್ತು ಪುರುಷ ಒಂದೇ ತರದವರೂ ಒಂದೇ ವರ್ಗದವರೆಂದೂ ಪವಿತ್ರ ಖುರ್‌ಆನ್ ಹೇಳಿದೆ. ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಸ್ತ್ರೀ ಮತ್ತು ಪುರುಷರನ್ನು ಒಂದೇ ರೀತಿಯಲ್ಲಿ ಸೃಷ್ಟಿಸಿರುವುದಾಗಿ ಹೇಳಿರುವುದರಿಂದ ಒಂದು ವರ್ಗದವರು ಇನ್ನೊಂದು ವರ್ಗದವರಿಗಿಂತ ಮೇಲಿನ ಸ್ಥಾನವನ್ನು ಹೊಂದಿಲ್ಲ.

ಸರ್ವಶಕ್ತನಾದ ಅಲ್ಲಾಹನು ಸ್ತ್ರೀಯನ್ನು ಸೃಷ್ಟಿಸಿದುದು ಪುರುಷನನ್ನು ಸೃಷ್ಟಿಸಿದ ಹಾಗೆಯೇ ಎಂದು ಹೇಳಿರುವುದರಿಂದ ಸ್ತ್ರೀಯರ ಹೃದಯಗಳೂ ಮನಸ್ಸುಗಳೂ ಪುರುಷನ ಹೃದಯಗಳೂ ಮನಸ್ಸುಗಳೂ ಸೃಷ್ಟಿಸಲ್ಪಟ್ಟ ಹಾಗೆಯೇ ಸೃಷ್ಟಿಸಲ್ಪಟ್ಟಿವೆ ಎಂದು ಸ್ಪಷ್ಟವಾಗುತ್ತದೆ. ಸ್ತ್ರೀಯನ್ನು ಪುರುಷನ ಪಕ್ಕೆಲುಬಿನಿಂದ ಸೃಷ್ಟಿಸಿದ ಬಗ್ಗೆ ಪವಿತ್ರ ಖುರ್‌ಆನ್ ಪ್ರಸ್ತಾಪಿಸುವುದಿಲ್ಲ. ಪುರುಷರ ಮತ್ತು ಸ್ತ್ರೀಯರ ಸಮಾನ ಗುಣಗಳನ್ನು ಪ್ರಸ್ತಾಪಿಸಲಾಗಿದೆ. ಹೀಗಿದ್ದರೂ ಚರಿತ್ರೆಯಲ್ಲಿ ಕೆಲವು ಸಂದರ್ಭಗಳಲ್ಲಿ ಪುರುಷರು ಸ್ತ್ರೀಯರನ್ನು ಅವರ ಶಕ್ತಿಸಾಮರ್ಥ್ಯಗಳನ್ನು ಮತ್ತು ಹೊಣೆಗಾರಿಕೆಗಳನ್ನು ನಿರ್ವಹಿಸುವುದನ್ನು ತಡೆದಿದ್ದಾರೆ. ಅದೇ ರೀತಿ ಸ್ತ್ರೀಯರು ಸಹ ಪುರುಷರನ್ನು ಅವರ ಹೊಣೆಗಾರಿಕೆಗಳನ್ನು ನಿರ್ವಹಿಸುವುದರಿಂದ ತಡೆದಿದ್ದಾರೆ. ಮೇಲರಿಮೆಯ ಕಾರಣದಿಂದಲೋ ಕೀಳರಿಮೆಯ ಕಾರಣದಿಂದಲೋ ಪುರುಷರು ಕೆಲವು ಸಂದರ್ಭಗಳಲ್ಲಿ ತಮ್ಮನ್ನು ಸ್ತ್ರೀಯರಿಗಿಂತ ಸಹಜವಾಗಿ ವಿಭಿನ್ನರೆಂದು ಭಾವಿಸಿದ್ದಾರೆ. ಅಥವಾ ಸ್ತ್ರೀಯರು ಸಹ ತಮ್ಮನ್ನು ಪುರುಷರಿಗಿಂತ ಸಹಜವಾಗಿಯೇ ವಿಭಿನ್ನರೆಂದು ಗಣಿಸಿದ್ದಾರೆ. ಆದರೆ ಪುರುಷರೂ ಸ್ತ್ರೀಯರೂ ಒಂದೇ ವರ್ಗದವರೆಂದು ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಹೇಳುತ್ತದೆ. ಪುರುಷರಿಗೂ ಸ್ತ್ರೀಯರಿಗೂ ಒಂದೇ ರೀತಿಯ ಭಾವನೆಗಳು ಇವೆ ಎಂದೂ ಪ್ರತಿಯೊಬ್ಬ ಪುರುಷನು ಅಲ್ಲಾಹನ ಮುಂದೆ ಲೆಕ್ಕ ಒಪ್ಪಿಸಲಿಕ್ಕಿರುವ ಹಾಗೆಯೇ ಪ್ರತಿಯೊಬ್ಬ ಸ್ತ್ರೀ ಸಹ ತನ್ನ ಕೃತ್ಯಗಳ ಬಗ್ಗೆ ಲೆಕ್ಕ ಒಪ್ಪಿಸಲಿಕ್ಕಿದೆ ಎಂದೂ ಪವಿತ್ರ ಖುರ್‌ಆನ್ ಹೇಳುತ್ತದೆ.

ಹೀಗಿದ್ದರೂ ಇಸ್ಲಾಮ್ ಪುರುಷನಿಗೂ ಸ್ತ್ರೀಗೂ ವಿಭಿನ್ನ ಹೊಣೆಗಾರಿಕೆಗಳನ್ನು ವಿಧಿಸಿ ಕೆಲಸಗಳನ್ನು ವಿಭಜಿಸಿ ನೀಡಿದೆ. ಪುರುಷರಿಗೂ ಸ್ತ್ರೀಯರಿಗೂ ವಿವಿಧ ಕಾರ್ಯಭಾರಗಳನ್ನು ನೀಡಿದೆ. ಇದರ ಅರ್ಥ ಪುರುಷರ ಹೊಣೆಗಾರಿಕೆಗಳನ್ನು ಅರ್ಥ ಮಾಡಿಕೊಳ್ಳುವ ಶಕ್ತಿ ಮಹಿಳೆಯರಿಗಿಲ್ಲ ಎಂದಲ್ಲ. ಬೇರೆ ಬೇರೆ ಹೊಣೆಗಾರಿಕೆಗಳನ್ನು ನೀಡಿದುದು ಪ್ರಕೃತಿ ಸಹಜವಾದ ರೀತಿಯಲ್ಲಾಗಿದೆ. ಪುರುಷರಲ್ಲಿಯೂ ವಿವಿಧ ವ್ಯತ್ಯಾಸಗಳಿರುತ್ತವೆ. ಬೇರೆ ಬೇರೆ ಪುರುಷರಿಗೆ ಬೇರೆ ಬೇರೆ ನೈಪುಣ್ಯತೆಗಳೂ ಯೋಗ್ಯತೆಗಳೂ ಇರುತ್ತವೆ. ಉದಾಹರಣೆಗೆ, ಕೆಲವು ಪುರುಷರು ಡಾಕ್ಟರ್‌ಗಳಾಗುತ್ತಾರೆ. ಬೇರೆ ಕೆಲವರು ಇಂಜಿನೀಯರ್, ಟೀಚರ್, ವಿಜ್ಞಾನಿ ಅಥವಾ ಬೇರೆ ರೀತಿಯ ಉದ್ಯೋಗಗಳನ್ನೂ

ಕಸಬುಗಳನ್ನೂ ಕೈಗೊಳ್ಳುತ್ತಾರೆ. ಒಬ್ಬ ಡಾಕ್ಟರ್ ಎಷ್ಟು ನಿಷ್ಣಾತನಾದರೂ ಅವನು ಅನ್ಯ ಉದ್ಯೋಗಿಗಳಿಗಿಂತ ಶ್ರೇಷ್ಠನಲ್ಲ. ಅದೇ ರೀತಿ ಬೇರೆ ಉದ್ಯೋಗಿಗಳೂ ವೃತ್ತಿನಿರತರೂ ಡಾಕ್ಟರ್‌ಗಳಿಗಿಂತ ಶ್ರೇಷ್ಠರೂ ಅಲ್ಲ.

ಇದೇ ರೀತಿ ಲೋಕದಲ್ಲಿ ಒಂದು ರೀತಿಯ ಸಂತುಲಿತ ಸ್ಥಿತಿ ಸ್ಥಾಪಿಸಲು ಸರ್ವಶಕ್ತನಾದ ಅಲ್ಲಾಹನು ತನ್ನ ಅಪ್ರತಿಮ ಜ್ಞಾನ್ಮೆಗನುಸಾರವಾಗಿ ಪುರುಷರಿಗೂ ಸ್ತ್ರೀಯರಿಗೂ ವಿಭಿನ್ನ ಕಾರ್ಯಭಾರಗಳನ್ನು ನೀಡಿರುವನು. ಅವರು ತಮ್ಮ ಹೊಣೆಗಾರಿಕೆಗಳನ್ನು ನಿರ್ವಹಿಸಿದ ಬಗ್ಗೆ ಅಲ್ಲಾಹನಿಗೆ ಲೆಕ್ಕ ಕೊಡಬೇಕಾಗಿದೆ.

ಹಝ್ರತ್ ಮುಹಮ್ಮದ್ ಪೈಗಂಬರರು[ಸ] ಹೇಳಿರುವರು: ಒಬ್ಬ ಕುರಿ ಕಾಯುವವನ ಹೊಣೆಗಾರಿಕೆ ಕುರಿಗಳನ್ನು ಸಂರಕ್ಷಿಸುವುದಾಗಿರುವ ಹಾಗೆಯೇ ಪ್ರತಿಯೊಬ್ಬ ಪುರುಷ ಮತ್ತು ಸ್ತ್ರೀ ತನ್ನ ಹೊಣೆಗಾರಿಕೆಗಳನ್ನು ಈಡೇರಿಸಬೇಕು. ಅಲ್ಲಾಹನು ಮಹಿಳೆಗೆ ತನ್ನ ಮಕ್ಕಳ ನೈತಿಕ ಮತ್ತು ಧಾರ್ಮಿಕ ತರಬೇತಿ ನೀಡುವ ಹೊಣೆಗಾರಿಕೆಯನ್ನು ನೀಡಿ ಆಕೆ ತನ್ನ ಮನೆಯನ್ನೂ ಪತಿಯ ಸ್ವತ್ತನ್ನೂ ಸಂರಕ್ಷಿಸುವ ಹೊಣೆಗಾರಿಕೆಯನ್ನೂ ನೀಡಿರುವುದರಿಂದ ಆಕೆ ಅವುಗಳ ಬಗ್ಗೆ ಶ್ರದ್ಧೆ ವಹಿಸಬೇಕು. ಏಕೆಂದರೆ ಈ ವಿಷಯಗಳ ಸಂಬಂಧಿಸಿ ಆಕೆ ಮಾತ್ರ ಅಲ್ಲಾಹನ ಮುಂದೆ ಹೊಣೆಗಾರ್ತಿಯಾಗುವಳು. ಇದೇ ರೀತಿ ಪುರುಷನು ತನ್ನ ಕುಟುಂಬದ ಖರ್ಚು ವೆಚ್ಚಗಳನ್ನು ನೋಡಬೇಕು ಮತ್ತು ಅವರ ಬಗ್ಗೆ ಕಾಳಜಿ ವಹಿಸಿ ಅವರ ಆವಶ್ಯಕತೆಗಳನ್ನು ಈಡೇರಿಸಬೇಕೆಂಬ ಹೊಣೆಗಾರಿಕೆಗಳನ್ನು ಅಲ್ಲಾಹನು ಪುರುಷನಿಗೆ ವಿಧಿಸಿದ್ದಾನೆ ಮತ್ತು ಅವನು ಅದರ ಬಗ್ಗೆ ಅಲ್ಲಾಹನಿಗೆ ಲೆಕ್ಕ ನೀಡಬೇಕಾಗುವುದು.

ಇಸ್ಲಾಮ್ ಪುರುಷರಿಗೆ ಮತ್ತು ಮಹಿಳೆಯರಿಗೆ ಬೇರೆ ಬೇರೆ ಕೆಲಸಗಳನ್ನು ನೀಡಿದೆ ಎಂದು ಹೇಳಿದುದರಿಂದ ಪುರುಷರು ಮಾಡುವ ಕೆಲಸಗಳನ್ನು ಮಾಡಲು ಸ್ತ್ರೀಯರಿಗೆ ಸಾಮರ್ಥ್ಯವಿಲ್ಲ ಎಂಬ ಅರ್ಥದಲ್ಲಿ ಅಲ್ಲ. ಅಥವಾ ಸ್ತ್ರೀಯರು ಪುರುಷರಿಗಿಂತ ಕೀಳಾದ ಕಾರಣದಿಂದಲೂ ಅಲ್ಲ. ನಾನು ಇದರ ಮೊದಲು ಹೇಳಿದ ಹಾಗೆ ಈ ಸಮ್ಮೇಳನವನ್ನು ಲಜ್‌ನ (ಲಜ್‌ನ ಇಮಾಇಲ್ಲಾಹ್ ಎಂಬ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಹದಿನೈದು ವರ್ಷಕ್ಕಿಂತ ಹೆಚ್ಚು ಪ್ರಾಯದ ಮಹಿಳೆಯರ ಸಂಘಟನೆ) ಇದರ ಸದಸ್ಯರಿಂದ ವ್ಯವಸ್ಥೆಗೊಳಿಸಲಾಗಿದೆ. ಇದು ಅಹ್ಮದೀ ಮಹಿಳೆಯರಲ್ಲಿರುವ ಅತ್ಯುತ್ತಮ ಶಕ್ತಿ ಸಾಮರ್ಥ್ಯಗಳ ಮತ್ತು ಸುವ್ಯವಸ್ಥೆ ಮಾಡುವ ನೈಪುಣ್ಯತೆಯ ಉದಾಹರಣೆಯಾಗಿದೆ. ಈ ಇಜ್ತಿಮಾ (ಸಮ್ಮೇಳನ) ಲಜ್‌ನ ಇಮಾಇಲ್ಲಾಹ್ ನಿರಂತರವಾಗಿ ಮಾಡುತ್ತಿರುವ ಕೆಲಸಗಳ ಪ್ರಕಟಣೆಯ ರೂಪದಲ್ಲಿದೆ. ಸ್ತ್ರೀಯು ಧಾರ್ಮಿಕ ವಿಷಯಗಳಲ್ಲಿ ಸಕ್ರಿಯಳಾಗಬಾರದು, ತನ್ನ ಧರ್ಮಕ್ಕೋಸ್ಕರ ತ್ಯಾಗ ಮಾಡಬಾರದು, ಆಕೆ ಧರ್ಮದಿಂದ ದೂರ ಸರಿದು ಕೇವಲ ತನ್ನ ಪತಿಗೆ ಅಲಂಕಾರವಾಗಿಯೂ ಅವನು ಸುಖವನ್ನನುಭವಿಸುವ ವಸ್ತುವಾಗಿಯೂ ಇರಬೇಕೆಂದು ಯೋಚಿಸುವ ಪುರುಷನು ಅತ್ಯಂತ ಅವಿವೇಕಿಯಾಗಿದ್ದಾನೆ. ಇದೇ ರೀತಿ ತಾನು ಮನೆ ಕೆಲಸದಲ್ಲಿ ಮುಳುಗಿರುವುದರಿಂದ ಧಾರ್ಮಿಕ ಕೆಲಸಗಳಲ್ಲಿ ಭಾಗವಹಿಸುವ ಆವಶ್ಯಕತೆ ಇಲ್ಲ; ತನ್ನ ಧರ್ಮ ಮತ್ತು ದೇಶಕ್ಕೆ ತ್ಯಾಗ ಮಾಡಬೇಕಾಗಿಲ್ಲ ಎಂದು ಯೋಚಿಸುವ ಮಹಿಳೆ ಸಹ ತಪ್ಪು ಗ್ರಹಿಕೆಗೆ ಗುರಿಯಾಗಿದ್ದು ಆಕೆ ಮಹಿಳೆಯ ಸ್ಥಾನಮಾನಗಳನ್ನು ಕುಂದಿಸುವವಳಾಗಿದ್ದಾಳೆ.

ಅಹ್ಮದೀ ಮಹಿಳೆಯರು ತಮ್ಮ ಹೊಣೆಗಾರಿಕೆಗಳನ್ನು ಮನವರಿಕೆ ಮಾಡಲಿಕ್ಕೋಸ್ಕರವಾಗಿಯೂ ಧಾರ್ಮಿಕ ವಿಷಯಗಳಲ್ಲಿ ಸೇರಿಕೊಳ್ಳುವುದರ ಬಗ್ಗೆ ಮತ್ತು ಇತರ ಚಟುವಟಿಕೆಗಳಲ್ಲಿ ಭಾಗವಹಿಸುವ ಬಗ್ಗೆ ಮಹಿಳೆಯರಲ್ಲಿ ತಲೆದೋರಬಹುದಾದ ಸಂಶಯಗಳನ್ನು ನಿವಾರಿಸಲು ಹಝ್ರತ್ ಮುಸ್ಲಿಹ್ ಮೌಊದ್[ರ] (ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್, ದ್ವಿತೀಯ ಖಲೀಫ 1914ರಿಂದ 1965ರ ತನಕ) ಲಜ್‌ನ ಇಮಾಇಲ್ಲಾಹ್ ಎಂಬ ಅಹ್ಮದೀ ಮಹಿಳೆಯರ ಸಂಘಟನೆಯನ್ನು ರೂಪಿಸಿ ಪ್ರತಿಯೊಬ್ಬ ಮಹಿಳೆ ಜಮಾಅತಿನ ಸಕ್ರಿಯ ಸದಸ್ಯೆಯಾಗುವಂತೆ ಮಾಡಿದರು. ಹಝ್ರತ್ ಮುಸ್ಲಿಹ್ ಮೌಊದ್[ರ] ಬಹಳ ಸುಂದರವಾಗಿ ಹೇಳಿದರು: ಒಬ್ಬ ಪುರುಷನಿಗೆ ಅತ್ಯುತ್ತಮ ಹೆಸರು ಅಬ್ದುಲ್ಲಾಹ್ (ಅಲ್ಲಾಹನ ದಾಸ) ಎಂಬುದಾಗಿದೆ. ಅದೇ ರೀತಿ ಒಬ್ಬ ಮಹಿಳೆಗೆ ಅತ್ಯುತ್ತಮ ಹೆಸರು ಅಮತುಲ್ಲಾಹ್ (ಅಲ್ಲಾಹನ ದಾಸಿ) ಎಂದಾಗಿದೆ. ಏಕೆಂದರೆ ಒಬ್ಬ ಪುರುಷ ತಾನು ದೇವದಾಸನಾಗಲು ಇಚ್ಛಿಸುವವನಾಗಬೇಕು ಮತ್ತು ಮಹಿಳೆ ದೇವದಾಸಿಯಾಗಲು ಇಚ್ಛಿಸುವವಳಾಗಬೇಕು. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಬಗ್ಗೆ **"ಅಬ್ದುಲ್ಲಾಹ್"** ಎಂಬ ವಿಶೇಷ ನಾಮದಿಂದ ವರ್ಣಿಸಿದ್ದಾನೆ. ಅವರು ಅಲ್ಲಾಹನ ನೈಜ ದಾಸರಾಗಿದ್ದರು. ಆದುದರಿಂದ ಅಲ್ಲಾಹನ ದಾಸಿಯಾಗಬೇಕೆಂಬುದು ಒಬ್ಬ ಮುಸ್ಲಿಮ್ ಮಹಿಳೆಯ ಅತ್ಯಂತ ಹಿರಿಯ ಆಶೆಯಾಗಿರಬೇಕು. ಈ ಕಾರಣದಿಂದ ಅಹ್ಮದಿಯಾ ಜಮಾಅತಿನ ಮಹಿಳೆಯರ ಪೂರಕ ಸಂಘಟನೆಗೆ ಲಜ್‌ನ ಇಮಾಇಲ್ಲಾಹ್ (ಅಲ್ಲಾಹನ ದಾಸಿಯರ ಸಂಘ) ಎಂದು ಹೆಸರಿಸಲಾಗಿದೆ.

ಆದುದರಿಂದ ಪ್ರತಿಯೊಬ್ಬ ಅಹ್ಮದೀ ಮಹಿಳೆ ಅಲ್ಲಾಹನ ದಾಸಿಯಾಗಲು ಪ್ರಾಮಾಣಿಕವಾಗಿ ಪರಿಶ್ರಮಿಸಿ ಅವನ ಪಾರಿತೋಷಿಕಗಳಿಗೆ ವಾರಸುದಾರಳಾಗಬೇಕು ಹಾಗೂ ಅವನ ಕೋಪಕ್ಕೆ ಗುರಿಯಾಗುವವಳಾಗಬಾರದು. ಲೋಕದಲ್ಲಿ ಒಬ್ಬನು ತನ್ನ ಹೊಣೆಗಾರಿಕೆಗಳನ್ನು ಅತ್ಯಂತ ಚೆನ್ನಾಗಿ ನಿರ್ವಹಿಸಿದರೆ ಅವನನ್ನು ದೊರೆಯ ಮುಂದೆ ಪ್ರಶಸ್ತಿಯನ್ನು ಪಡೆದುಕೊಳ್ಳಲು ಹಾಜರುಗೊಳಿಸಲಾಗುತ್ತದೆ. ಆದರೆ ಅಪರಾಧಿಯನ್ನು ಶಿಕ್ಷೆಗೆ ಗುರಿಪಡಿಸಲು ಅಧಿಕಾರಿಗಳ ಮುಂದೆ ಹಾಜರುಪಡಿಸಲಾಗುತ್ತದೆ. ಗೌರವವನ್ನೂ ಪ್ರಶಸ್ತಿಯನ್ನೂ ಗಳಿಸುವವರ ಕಡೆಗೆ ಆಕಾಂಕ್ಷೆಯ ದೃಷ್ಟಿ ಬೀರಲಾಗುತ್ತದೆ. ಆದರೆ ಅಪರಾಧಿಯ ಕಡೆಗೆ ಜಿಗುಪ್ಸೆಯ ದೃಷ್ಟಿ ಬೀರಲಾಗುತ್ತದೆ. ಆದುದರಿಂದ ಪ್ರತಿಯೊಬ್ಬ ಮಹಿಳೆ ತನ್ನ ಹೊಣೆಗಾರಿಕೆಗಳನ್ನು ಮನವರಿಕೆ ಮಾಡಿಕೊಳ್ಳಬೇಕು ಮತ್ತು ಅಲ್ಲಾಹನ ಪಾರಿತೋಷಿಕಗಳನ್ನು ಗಳಿಸಲು ಪ್ರಯತ್ನಿಸುವವರೊಂದಿಗೆ ಸೇರುವವಳಾಗಬೇಕು.

ಜಮಾಅತ್ ಮತ್ತು ಧರ್ಮದ ಬಗ್ಗೆ ನಿಮ್ಮ ಕರ್ತವ್ಯಗಳ ಕುರಿತು ಹೇಳುವುದಾದರೆ ನೀವು ನೆನಪಿಡಬೇಕು – ಅಲ್ಲಾಹನ ದೃಷ್ಟಿಯಲ್ಲಿ ಹೊಣೆಗಾರಿಕೆಗಳು ಮತ್ತು ಕರ್ತವ್ಯಗಳು ಪುರುಷನ ಮೇಲೆ ಮತ್ತು ಸ್ತ್ರೀಯ ಮೇಲೆ ಸಮಾನವಾಗಿವೆ. ಇಬ್ಬರೂ ತಮ್ಮ ಪ್ರತಿಜ್ಞೆಗಳನ್ನು ಈಡೇರಿಸಬೇಕು ಮತ್ತು ಇಸ್ಲಾಮಿಗೋಸ್ಕರ ತ್ಯಾಗಗಳನ್ನು ಮಾಡಬೇಕು. ಹಿಂದಿನ ಕಾಲದಲ್ಲಿ ಮಹಿಳೆಯರು ಮಾಡಿದ ತ್ಯಾಗಗಳ ಬಗ್ಗೆ ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್[ರ] ಪ್ರವಾದಿ ಈಸಾ ಮಸೀಹರ[ಅ] ಕಾಲದ ಮಹಿಳೆಯರ ತ್ಯಾಗಗಳನ್ನು ಪ್ರಸ್ತಾಪಿಸಿದರು.

ಹಝ್ರತ್ ಈಸಾ ಮಸೀಹರ(ಅ) ಅತ್ಯಂತ ಪ್ರಾಮಾಣಿಕ ಶಿಷ್ಯೆಯರಲ್ಲಿ ಮಹಿಳೆಯರಿದ್ದರು. ಅವರು ರಾತ್ರಿ ಹಗಲು ದಣಿವಿಲ್ಲದೆ ಅವರ ಸಂದೇಶ ತಲಪಿಸಿದರು. ಅವರ ಬಲಿದಾನಗಳ ಬಗ್ಗೆ ಕ್ರೈಸ್ತರ ಚರಿತ್ರೆಗಳಲ್ಲಿ ಅಭಿಮಾನಾರ್ಹವಾಗಿ ದಾಖಲಿಸಲ್ಪಡಲಾಗಿದೆ.

ಹಝ್ರತ್ ಈಸಾ ಮಸೀಹರನ್ನು(ಅ) ಶಿಲುಬೆಯಿಂದ ಇಳಿಸಿ ಶವಕುಟೀರದಲ್ಲಿ ಇರಿಸಿದ ನಂತರ ಹೊರಗೆ ಬಂದಾಗ ಅವರನ್ನು ಎಲ್ಲರಿಗಿಂತ ಮೊದಲು ಸಂದರ್ಶಿಸಿ ಸಹಾಯ ಮಾಡಿದವರು ಮಹಿಳೆಯರಾಗಿದ್ದರು. ಅವರ ಪುರುಷರಾದ ಶಿಷ್ಯರು ಅಧಿಕಾರಿಗಳಿಗೆ ಹೆದರಿ ಓಡಿ ಹೋದಾಗ ಮೇರಿ ಮಗ್ದಲೀನ ಮತ್ತು ಬೇರೆ ಇಬ್ಬರು ಮಹಿಳೆಯರು ತಮ್ಮ ಸುರಕ್ಷೆ ಬಗ್ಗೆ ಹೆದರದೆ ಹಝ್ರತ್ ಈಸಾ ಮಸೀಹರ(ಅ) ಬಳಿಗೆ ಬೆಳಗಾಗುವ ಮೊದಲೇ ತಲಪಿದರು. ಈ ರೀತಿ ಅವರು ತಮ್ಮ ಅತಿ ಧೈರ್ಯವನ್ನು ಮತ್ತು ಪುರುಷರಿಗಿಂತ ಹೆಚ್ಚಿನ ಮಟ್ಟದ ದೃಢ ವಿಶ್ವಾಸವನ್ನು ಪ್ರಕಟಿಸಿದರು. ಇದು ಹಝ್ರತ್ ಈಸಾ ಮಸೀಹರ(ಅ) ಕಾಲದ ಮಹಿಳೆಯರ ಉದಾಹರಣೆಯಾಗಿವೆ.

ಆದರೆ ಎಲ್ಲ ಪ್ರವಾದಿಗಳ ಜೀವನ ಚರಿತ್ರೆಗಿಂತ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಜೀವನ ಚರಿತ್ರೆ ಸವಿಸ್ತಾರವಾಗಿ ದಾಖಲಿಸಿ ಸಂರಕ್ಷಿಸಿಡಲಾಗಿದೆ. ಅವರ ಅನುಗ್ರಹಭರಿತ ಕಾಲದಲ್ಲಿ ಮುಸ್ಲಿಮ್ ಮಹಿಳೆಯರು ಮಾಡಿದ ಬಲಿದಾನಗಳು ಎಂತಹ ಅತ್ಯುನ್ನತ ಮಟ್ಟದ್ದಾಗಿದ್ದುವೆಂದರೆ ಅಂತಹ ಬಲಿದಾನಗಳು ಚರಿತ್ರೆಯ ಯಾವ ಕಾಲ ಘಟ್ಟದಲ್ಲಿಯೂ ಹಿಂದೆಂದೂ ಸಂಭವಿಸಿರಲಿಲ್ಲ ಎಂಬುದು ಪ್ರಶ್ನಾತೀತವಾಗಿದೆ. ಆ ಮಹಿಳೆಯರು ಇಸ್ಲಾಮ್ ಧರ್ಮಕ್ಕೋಸ್ಕರ ಮಾಡಿದ ಬಲಿದಾನಗಳ ಬಗ್ಗೆ ಓದುವಾಗ ನೀವು ಭಾವೋದ್ವೇಗಭರಿತರಾಗುವಿರಿ. ಇಸ್ಲಾಮಿನ ಆರಂಭ ಕಾಲದಲ್ಲಿ ಹಝ್ರತ್ ಪೈಗಂಬರರು(ಸ) ಮತ್ತು ಅವರ ಅನುಯಾಯಿಗಳು ಅತ್ಯಂತ ಕ್ರೂರ ಹಿಂಸಾಚಾರಗಳಿಗೆ ಗುರಿಯಾದರು. ವರ್ಣಿಸಲು ಅಸಾಧ್ಯವಾದ ದೌರ್ಜನ್ಯಗಳನ್ನು ಅವರ ಮೇಲೆ ಮಾಡಲಾಯಿತು. ಎಲ್ಲ ಮುಸ್ಲಿಮರು ಹಿಂಸಾಚಾರಗಳಿಗೆ ಈಡಾಗಿದ್ದರೂ ಮುಸ್ಲಿಮರಾದ ಗುಲಾಮ ಜನರೊಂದಿಗೆ ಶತ್ರುಗಳು ವರ್ತಿಸಿದ ರೀತಿ ಅತ್ಯಂತ ಮನುಷ್ಯತ್ವ ರಹಿತವೂ ಬರ್ಬರವೂ ಆಗಿತ್ತು.

ಉದಾಹರಣೆಗೆ, ಹಝ್ರತ್ ಪೈಗಂಬರರ(ಸ) ಅನುಯಾಯಿಗಳಲ್ಲಿ ಒಬ್ಬ ಪತಿ ಮತ್ತು ಅವರ ಪತ್ನಿ ಇದ್ದರು. ಅವರಿಬ್ಬರೂ ಮುಸ್ಲಿಮೇತರ ಒಡೆಯನ ಗುಲಾಮರಾಗಿದ್ದರು. ಅವರ ಒಡೆಯ ಎಷ್ಟು ನಿಷ್ಕರುಣೆಯಿಂದ ವರ್ತಿಸಿ ಅವರನ್ನು ಹಿಂಸಾಚಾರಗಳಿಗೆ ಗುರಿಪಡಿಸುತ್ತಿದ್ದನೆಂದರೆ ಅವುಗಳ ಬಗ್ಗೆ ಓದುವಾಗ ಮನುಷ್ಯನು ಅತ್ಯಂತ ಕಂಪನವನ್ನು ಅನುಭವಿಸುತ್ತಾನೆ. ಅವರಿಬ್ಬರನ್ನೂ ಸುಡು ಬಿಸಿಲಿನಲ್ಲಿ ಬಿಸಿಯಾದ ಮರಳಿನ ಮೇಲೆ ಮಲಗಿಸಿ ಅವರ ಎದೆಗಳಿಗೂ ದೇಹದ ಇತರ ಭಾಗಗಳಿಗೂ ನಿರಂತರವಾಗಿ ಹೊಡೆಯಲಾಗುತ್ತಿತ್ತು. ಅವರು ಆ ಸುಡು ಮರಳಿನಲ್ಲಿ ನೋವನ್ನನುಭವಿಸುತ್ತಾ ಇದ್ದಾಗ ಅವರ ಕಣ್ಣುಗಳು ಊದಿ ಕೆಂಪಗಾಗುತ್ತಿದ್ದುವು. ಹೀಗಿದ್ದರೂ ಅವರ ಒಡೆಯ ಅವರ ಮೇಲೆ ಯಾವ ಕನಿಕರವನ್ನೂ ತೋರಿಸುತ್ತಿರಲಿಲ್ಲ. ಒಂದು ಸಂದರ್ಭದಲ್ಲಿ ಅವರಿಬ್ಬರನ್ನೂ ಸುಡು ಮರಳಿನಲ್ಲಿ ಮಲಗಿಸಿ ಹಿಂಸೆ ನೀಡುತ್ತಿದ್ದುದನ್ನು ಕಂಡಾಗ ಹಝ್ರತ್ ಪೈಗಂಬರರು(ಸ) ಉದ್ವೇಗಭರಿತರಾದರು. ತನ್ನ ಮಕ್ಕಳನ್ನು ತನ್ನ ಕಣ್ಣುಗಳ ಮುಂದೆಯೇ ಹೊಡೆಯಲ್ಪಡುವುದನ್ನು ಕಾಣುವ ತಂದೆಯ ಹಾಗೆ ಅವರು ದುಃಖಿತರಾದರು. ತನ್ನ ಶಿಷ್ಯರ ಒಡೆಯನು ಅವರನ್ನು ತನ್ನ ಪ್ರವಾದಿತ್ವವನ್ನು ನಿರಾಕರಿಸಲು ಮತ್ತು ಏಕದೇವನಿಗೆ ಬದಲಾಗಿ ಅನೇಕ ದೇವರುಗಳನ್ನು ನಂಬಲು ಬಲಾತ್ಕಾರ ಮಾಡುತ್ತಿರುವುದಾಗಿ ಅವರಿಗೆ ಮನವರಿಕೆಯಾಯಿತು. ಹಝ್ರತ್ ಪೈಗಂಬರರು(ಸ) ಅತ್ಯಂತ ದುಃಖಭರಿತರಾಗಿ ಅಲ್ಲಾಹನೊಂದಿಗೆ ಸ್ವಲ್ಪ ಕಾಲ ಪ್ರಾರ್ಥಿಸಿದರು. ಅನಂತರ ಆ ಮುಸ್ಲಿಮ್ ದಂಪತಿಯೊಂದಿಗೆ ಹೇಳಿದರು: "ಸಹನೆ ದೋರಿರಿ, ಸಹನೆ ದೋರಿರಿ. ಅಲ್ಲಾಹನು ಬೇಗನೆ ನಿಮ್ಮನ್ನು ನಿಮ್ಮ ನೋವಿನಿಂದ ಬಿಡುಗಡೆ ಮಾಡುವನು. ನೀವು ಅನುಭವಿಸಿದ ಹಿಂಸಾಚಾರಗಳಿಗೆ ಪ್ರತಿಯಾಗಿ ಅಲ್ಲಾಹನು ಸ್ವರ್ಗದಲ್ಲಿ ನಿಮಗೊಂದು ಮನೆಯನ್ನು ಮಾಡಿರುವನು."

ನಿರಂತರ ಹಿಂಸಾಚಾರಗಳಿಗೆ ಗುರಿಯಾದ ಕಾರಣದಿಂದ ಪತಿ ಬೇಗನೆ ನಿಧನ ಹೊಂದಿದರು. ಅನಂತರ ಪತ್ನಿಯನ್ನು ಆಕೆಯ ಒಡೆಯನು ಹೊಟ್ಟೆಗೆ ಈಟಿಯಿಂದ ತಿವಿದು ಕೊಂದನು. ಆ ರೀತಿ ಆಕೆ ಹುತಾತ್ಮ ಪದವಿ ಗಳಿಸಿದರು. ಈ ಗುಲಾಮರು ಯಾವುದೇ ಲೌಕಿಕ ಸ್ಥಾನಮಾನಗಳನ್ನು ಹೊಂದಿರಲಿಲ್ಲ. ಆದರೆ ಅವರು ಹಝ್ರತ್ ಪೈಗಂಬರರನ್ನು(ಸ) ನಂಬಿದ ನಂತರ ಅವರು ಧರ್ಮದಲ್ಲಿ ಎಂತಹ ಉನ್ನತ ಆಧ್ಯಾತ್ಮಿಕ ಪದವಿಗಳನ್ನು ಗಳಿಸಿದರೆಂದರೆ ಅವು ಚರಿತ್ರೆಯಲ್ಲಿ ಶಾಶ್ವತವಾಗಿ ದಾಖಲಿಸಲ್ಪಟ್ಟಿವೆ. ಆ ಜನರು ಅವರಿಗೆ ಸಾಧ್ಯವಿರುವ ಎಲ್ಲ ಬಲಿದಾನಗಳನ್ನು ಅರ್ಪಿಸಿದರು ಮತ್ತು ಪ್ರತಿಯೊಂದು ರೀತಿಯ ಚಿತ್ರಹಿಂಸೆಯನ್ನು ಸಹಿಸಿದರು– ತಮ್ಮ ಏಕದೇವ ವಿಶ್ವಾಸವನ್ನು ಸಂರಕ್ಷಿಸಲಿಕ್ಕೋಸ್ಕರ. ಮಕ್ಕದಲ್ಲಿ ಮುಸ್ಲಿಮರ ವಿರುದ್ಧ ಹಿಂಸಾಚಾರ ಕುಗ್ಗದೆ ಮುಂದುವರಿದಾಗ ಮತ್ತು ಮಿತಿಮೀರಿದಾಗ ಹಾಗೂ ಶತ್ರುಗಳು ತಮ್ಮ ಕೆಟ್ಟ ಕಾರಸ್ಥಾನಗಳನ್ನು ವರ್ಧಿಸಿದಾಗ ಹಝ್ರತ್ ಪೈಗಂಬರರು(ಸ) ತನ್ನ ಶಿಷ್ಯರೊಂದಿಗೆ ಇಥ್ಯೋಪಿಯ ದೇಶಕ್ಕೆ ವಲಸೆ ಹೋಗಲು ಉಪದೇಶಿಸಿದರು. ಆಗ ಶಿಷ್ಯರು ಪ್ರತಿಭಟಿಸುತ್ತಾ ತಮ್ಮ ಆಧ್ಯಾತ್ಮಿಕ ನಾಯಕ ಹಝ್ರತ್ ಪೈಗಂಬರರು(ಸ) ಅಪಾಯದ ಸ್ಥಿತಿಯಲ್ಲಿರುವಾಗ ಮತ್ತು ಭಯಾನಕ ಹಿಂಸಾಚಾರಗಳನ್ನು ಎದುರಿಸುತ್ತಾ ಮುಂದುವರಿಯುತ್ತಿರುವಾಗ ತಾವು ಮಾತ್ರ ವಲಸೆ ಹೋಗಿ ಸುಖವಾಗಿರಲು ಹೇಗೆ ಸಾಧ್ಯ ಎಂದು ಕೇಳಿದರು. ಆಗ ಹಝ್ರತ್ ಪೈಗಂಬರರು(ಸ) ಅವರೊಂದಿಗೆ, ಅಲ್ಲಾಹನು ತನಗೆ ವಲಸೆ ಹೋಗಲು ಆಜ್ಞಾಪಿಸಿಲ್ಲ. ಅಂತಹ ಸಂದರ್ಭ ಬಂದರೆ ತಾನು ಸಹ ವಲಸೆ ಹೋಗುವೆನು. ಈಗ ತನ್ನ ಶಿಷ್ಯರು ತನ್ನನ್ನು ಬಿಟ್ಟು ವಲಸೆ ಹೋಗಬೇಕೆಂದು ಹೇಳಿದರು. ಹೀಗೆ ವಲಸೆ ಹೋಗಲು ನಿರ್ಧಾರ ಮಾಡಿದವರಲ್ಲಿ ಒಬ್ಬ ಮುಸ್ಲಿಮ್ ಮಹಿಳೆ ಇದ್ದರು. ಆಕೆ ಬೆಳಗಾಗುವ ಮೊದಲೇ ತನ್ನ ಸಾಮಗ್ರಿಗಳನ್ನು ಒಂದು ಒಂಟೆಯ ಮೇಲೆ ಹೇರಿ ಪ್ರಯಾಣಕ್ಕೆ ಸಿದ್ಧರಾಗಿದ್ದರು. ಆಗ ಇನ್ನೂ ಮುಸ್ಲಿಮನಾಗಿರದ ಹಝ್ರತ್ ಉಮರ್ ಆಕಸ್ಮಿಕವಾಗಿ ಅಲ್ಲಿಂದ ದಾಟಿ ಹೋಗುವಾಗ ಮಹಿಳೆ ತನ್ನ ಸ್ವಂತ ಊರನ್ನು ಬಿಟ್ಟು ಹೋಗಲು ನಿರ್ಬಂಧಿತೆಯಾಗಿ ಮುಂಜಾನೆಯೇ ಸಿದ್ಧತೆ ನಡೆಸುವುದನ್ನು ಕಂಡು ಅಪರಾಧಿ ಭಾವನೆಯಿಂದ ಭಾವೋದ್ವೇಗಭರಿತ ಸ್ವರದಲ್ಲಿ ಹೇಳಿದರು: "ನೀವು ಒಂದು ಪ್ರಯಾಣಕ್ಕೆ ಹೊರಟಂತೆ ಕಾಣಿಸುತ್ತದೆ." ಆಗ ಆ ಮುಸ್ಲಿಮ್ ಮಹಿಳೆ ಹೇಳಿದರು: "ನಮ್ಮ ಮೇಲೆ ಮಾಡಲಾಗುವ ದೌರ್ಜನ್ಯಗಳನ್ನು ಮತ್ತು ನೋವನ್ನು ನಾವು ಸಹಿಸಲಾರೆವು. ಆದುದರಿಂದ ನಾವು ಇಲ್ಲಿಂದ ಹೊರಗೆ ಹೋಗದಿರಲು ಸಾಧ್ಯವಿಲ್ಲ. ಆದರೆ ನಮ್ಮನ್ನು ಇಷ್ಟು ಕ್ರೂರವಾಗಿ ಹಿಂಸಾಚಾರಕ್ಕೆ ಗುರಿಪಡಿಸಲು ನಾವು ಮಾಡಿದ ಅಪರಾಧವಾದರೂ ಏನು? ನಾವು ಹೇಳುವುದು

ಅಲ್ಲಾಹನು ಏಕನಾದ ದೇವನು ಎಂದು ಮಾತ್ರ. ನೀವು ಅದನ್ನು ಸಹಿಸಲಾರಿರಿ. ಆದುದರಿಂದ ನಾವು ಇಲ್ಲಿಂದ ಹೋಗಬೇಕಾಗಿದೆ." ಹಝ್ರತ್ ಉಮರ್ ಆಗ ತೀವ್ರ ವಿರೋಧಿಯಾಗಿದ್ದರು. ಮುಸ್ಲಿಮರ ವಿರುದ್ಧ ಹಿಂಸಾಚಾರದ ಬಗ್ಗೆ ಕನಿಕರ ತೋರಿಸುವವನಾಗಿರದಿದ್ದರೂ ಮುಸ್ಲಿಮ್ ಮಹಿಳೆಯ ಉದ್ವೇಗಭರಿತ ಮಾತುಗಳಿಂದ ಪ್ರಭಾವಿತರಾದರು. ಅವರ ಕಣ್ಣುಗಳಿಂದ ಅಶ್ರುಧಾರೆ ಸುರಿಯಲು ತೊಡಗಿತು. ಅವರು ತಗ್ಗಿದ ಸ್ವರದಲ್ಲಿ "ನಿಮಗೆ ವಿದಾಯ, ನಿಮಗೆ ಶುಭವಾಗಲಿ" ಎಂದು ಹೇಳಿ ಹೋದರು.

ಇನ್ನೊಂದು ಪ್ರಸಿದ್ಧ ಘಟನೆ ಹಝ್ರತ್ ಉಮರ್[ರ] ಅವರ ಸಹೋದರಿಗೆ ಸಂಬಂಧಿಸಿದೆ. ಹಝ್ರತ್ ಉಮರ್[ರ] ಇಸ್ಲಾಮಿನ ಕಠಿಣ ಶತ್ರುವಾಗಿದ್ದಾಗ ಒಮ್ಮೆ ಅವರು ಖಡ್ಗವನ್ನು ಎತ್ತಿ ಹಿಡಿದುಕೊಂಡು ಹಝ್ರತ್ ಪೈಗಂಬರರನ್ನು[ಸ] ಹತ್ಯೆಮಾಡಿ ಇಸ್ಲಾಮನ್ನು ಕೊನೆಗೊಳಿಸಲು ಹೊರಟಿದ್ದರು. ದಾರಿಮಧ್ಯೆ ಒಬ್ಬನು ಅವರೊಂದಿಗೆ ಕೇಳಿದನು: ಎಲ್ಲಿಗೆ ಹೊರಟಿದ್ದೀರಿ? ಆಗ ಹಝ್ರತ್ ಉಮರ್ ತನ್ನ ಉದ್ದೇಶವೇನೆಂದು ಹೇಳಿದಾಗ ಆ ವ್ಯಕ್ತಿ ಹೇಳಿದನು: "ಮೊದಲು ನಿಮ್ಮ ಕುಟುಂಬದ ಬಗ್ಗೆ ವಿಚಾರಿಸಿರಿ. ನಿಮ್ಮ ಒಬ್ಬ ಸಹೋದರಿ ಮುಸ್ಲಿಮಳಾಗಿದ್ದಾಳೆ." ಹಝ್ರತ್ ಉಮರ್ ತನ್ನ ಸಹೋದರಿಯ ಮನೆಗೆ ಹೋಗಿ ಬಾಗಿಲನ್ನು ಬಲವಾಗಿ ತಟ್ಟಿದರು. ಆಗ ಅವರ ಸಹೋದರಿ ಮತ್ತು ಆಕೆಯ ಪತಿ ಪವಿತ್ರ ಖುರ್‌ಆನ್ ಪಠಿಸುತ್ತಿದ್ದರು. ಹಝ್ರತ್ ಉಮರ್ ಆಗಮಿಸಿದುದನ್ನು ತಿಳಿದುಕೊಂಡ ಅವರು ತಮ್ಮ ಮುಸ್ಲಿಮ್ ಅಧ್ಯಾಪಕನನ್ನೂ ಪವಿತ್ರ ಖುರ್‌ಆನಿನ ಹಾಳೆಗಳನ್ನೂ ಅಡಗಿಸಿರಿಸಿದರು. ಹಝ್ರತ್ ಉಮರ್ ಅವರು ಪಠಿಸುವುದನ್ನು ಆಲಿಸಿದ್ದರು. ಆದುದರಿಂದ ಅವರು ಓದುತ್ತಿದ್ದುದು ಏನೆಂದು ಕೇಳಿದರು. ಅವರ ಸಹೋದರಿ ಹೇಳಿದರು: "ನಾವು ಪವಿತ್ರ ಖುರ್‌ಆನನ್ನು ಪಠಿಸುತ್ತಿದ್ದೆವು."

ತನ್ನ ಸಹೋದರಿ ಮತ್ತು ಪತಿ 'ಸಾಬಿ'ಗಳಾಗಿರುವರೆಂದು ಯಾರೋ ಹೇಳಿದುದಾಗಿ ಕೇಳಿರುವೆನು ಎಂದು ಹಝ್ರತ್ ಉಮರ್ ಹೇಳಿದರು. ('ಸಾಬಿ'ಯ ಅರ್ಥ ಮಕ್ಕದ ಜನರ ವಿಶ್ವಾಸಕ್ಕೆ ವಿರುದ್ಧವಾದ ವಿಶ್ವಾಸ ಎಂದು.) ಕೋಪೋದ್ರಿಕನಾಗಿ ಹಝ್ರತ್ ಉಮರ್ ತನ್ನ ಭಾವನನ್ನು ಹೊಡೆಯಲು ಥಟ್ಟನೆ ಮುನ್ನುಗ್ಗಿದಾಗ ಅವರ ಸಹೋದರಿ ಧೈರ್ಯದಿಂದ ಮುನ್ನುಗ್ಗಿ ತನ್ನ ಪತಿಗೆ ಅಡ್ಡವಾಗಿ ನಿಂತು ಹೇಳಿದರು: "ಹೌದು, ನಾವು ಮುಸ್ಲಿಮರಾಗಿದ್ದೇವೆ. ನೀನು ಕೊಲ್ಲಲು ಇಚ್ಛಿಸುವಿಯಾದರೆ ಹಾಗೆ ಮಾಡು."

ಹಝ್ರತ್ ಉಮರ್‌ರಿಗೆ ತಕ್ಷಣ ತನ್ನ ಕೈಯನ್ನು ಹಿಂದೆಕ್ಕೆಳೆಯಲು ಸಾಧ್ಯವಾಗಲಿಲ್ಲ ಮತ್ತು ಅವರ ಕೈಯ ಹೊಡೆತ ಆಕಸ್ಮಿಕವಾಗಿ ಅವರ ಸಹೋದರಿಯ ಮುಖಕ್ಕೆ ತಾಗಿತು. ಅದು ಬಲವಾದ ಹೊಡೆತವಾದುದರಿಂದ ಆಕೆಯ ಮೂಗಿನಿಂದ ರಕ್ತ ಹೊರಚಿಮ್ಮಿತು. ತನ್ನ ಸಹೋದರಿ ತನ್ನ ಪತಿಯನ್ನು ರಕ್ಷಿಸಲು ತನ್ನನ್ನು ಬಲಿಯರ್ಪಿಸಲು ಸಹ ಸಿದ್ಧಳಾದುದನ್ನು ಕಂಡು ಹಝ್ರತ್ ಉಮರ್ ಆಶ್ಚರ್ಯಗೊಂಡರು.

ಇಸ್ಲಾಮ್ ಬಗ್ಗೆ ದ್ವೇಷವಿದ್ದರೂ ಹಝ್ರತ್ ಉಮರ್ ಉತ್ತಮ ಹೃದಯಿಯಾಗಿದ್ದರು. ಆದುದರಿಂದ ತನ್ನ ಸಹೋದರಿಯ ಮುಖದಲ್ಲಿ ರಕ್ತವನ್ನು ಕಂಡು ಅವರಿಗೆ ನಾಚಿಕೆಯಾಯಿತು ಮತ್ತು ಪಶ್ಚಾತ್ತಾಪವಾಯಿತು. ತನ್ನ ಸಹೋದರಿಯನ್ನು ರಕ್ಷಿಸುವುದು ತನ್ನ ಕರ್ತವ್ಯವಾಗಿದ್ದರೂ ಅದರ ಬದಲಿಗೆ ಆಕೆಗೆ ತೀವ್ರವಾದ ಗಾಯವುಂಟುಮಾಡಿದ ಬಗ್ಗೆ ಅವರಿಗೆ ದುಃಖವಾಯಿತು. ಅಪರಾಧ ಮನೋಭಾವದಿಂದ ಬೇಗುದಿಗೊಂಡು ಅವರ ಆಕ್ರಮಣಕಾರಿ ಮನೋಭಾವ ತಕ್ಷಣ ತಗ್ಗಿತು ಮತ್ತು ಅವರು ಪವಿತ್ರ ಖುರ್‌ಆನಿನ ಹಾಳೆಗಳನ್ನು ಓದಲು ಅವುಗಳನ್ನು ತರಲು ತನ್ನ ಸಹೋದರಿಯೊಂದಿಗೆ ಹೇಳಿದರು. ಆಗ ಅವರ ಸಹೋದರಿಯ ಅತ್ಯುತ್ಕೃಷ್ಟವಾದ ವಿಶ್ವಾಸ ಸಕ್ರಿಯವಾಯಿತು. ತನ್ನ ಸಹೋದರನಿಂದ ಹೊಡೆಯಲ್ಪಟ್ಟ ಅವರು ರಕ್ಷಣೆಯಿಲ್ಲದ ಸ್ತ್ರೀಯ ಹಾಗೆ ವರ್ತಿಸದೆ ಅವರು ಧೈರ್ಯಶಾಲಿ ಸಿಂಹಿಣಿ ಮಹಿಳೆಯಾಗಿ ಪರಿವರ್ತನೆಗೊಂಡರು. ಯಾವುದೇ ಭಯವಿಲ್ಲದೆ ಆಕೆ ಹೇಳಿದರು: "ನೀವು ಶುದ್ಧರಾಗಿಲ್ಲದ ಕಾರಣ ಪವಿತ್ರ ಖುರ್‌ಆನನ್ನು ಸ್ಪರ್ಶಿಸಬಾರದು. ನೀವು ಈ ಸ್ಥಿತಿಯಲ್ಲಿರುವಾಗ ಪವಿತ್ರ ಖುರ್‌ಆನನ್ನು ನಿಮ್ಮ ಬಳಿ ಇರಿಸಲಾರೆ." ಹಝ್ರತ್ ಉಮರ್ ನಾಚಿಕೆಗೊಂಡು ಮೃದುವಾಗಿ ಕೇಳಿದರು: "ಪವಿತ್ರ ಖುರ್‌ಆನ್ ಓದಲು ನನ್ನನ್ನು ಶುದ್ಧೀಕರಿಸುವುದು ಹೇಗೆ?" ಆಗ ಅವರ ಸಹೋದರಿ ಹೇಳಿದರು: "ಸ್ನಾನ ಮಾಡಿ ಬನ್ನಿರಿ. ಅನಂತರ ಪವಿತ್ರ ಖುರ್‌ಆನ್ ಓದಲು ಅನುಮತಿಸುವೆನು." ಹಝ್ರತ್ ಉಮರ್ ಸ್ನಾನ ಮಾಡಿ ಬಂದರು. ಅನಂತರ ಅವರ ಸಹೋದರಿ ಅವರಿಗೆ ಪವಿತ್ರ ಖುರ್‌ಆನ್ ಓದಲು ಕೊಟ್ಟರು. ಪವಿತ್ರ ಖುರ್‌ಆನಿನ ಕೆಲವು ವಚನಗಳನ್ನು ಓದಿದ ಕೂಡಲೇ ಅದರ ವಚನಗಳ ಸೌಂದರ್ಯವನ್ನು ಆಸ್ವಾದಿಸಿ ಅವರ ಹೃದಯ ಕರಗಿತು. ಅಶ್ರುಧಾರೆಗಳು ಕಣ್ಣುಗಳಿಂದ ಹರಿದುವು. ಅವರು ಇಸ್ಲಾಮಿನ ಬಗ್ಗೆ ತನಗಿರುವ ಅವಿಶ್ವಾಸದ ಬಗ್ಗೆ ಜಿಗುಪ್ಸೆ ಮತ್ತು ನಾಚಿಕೆ ಹೊಂದಿದರು. ಅವರು ತನ್ನ ಹಿಂದಿನ ಜೀವಿತದ ಬಗ್ಗೆ ಅತೃಪ್ತಿ ಹೊಂದಿದರು. ಅನಂತರ ಅವರು ಎದ್ದು ನಿಂತು ಹಝ್ರತ್ ಪೈಗಂಬರ್[ಸ] ಎಲ್ಲಿದ್ದಾರೆಂದು ಕೇಳಿದರು. ಅವರ ಮಾತನ್ನು ಆಲಿಸಿ ಸಹೋದರಿಗೆ ಪ್ರೀತಿ ಉಕ್ಕಿಬಂತು ಮತ್ತು ಆಕೆ ಪ್ರಾಮಾಣಿಕವಾಗಿ ಪ್ರಾರ್ಥಿಸಿದರು– ತಮ್ಮ ಸಹೋದರ ಮುಸ್ಲಿಮನಾಗಲಿ ಎಂದು. ಅದೇ ಸಮಯ, ಹಝ್ರತ್ ಪೈಗಂಬರರಿಗೆ ಆಕೆಯ ಸಹೋದರ ಏನಾದರೂ ಹಾನಿಯನ್ನುಂಟು ಮಾಡಿದರೆ ತನ್ನನ್ನು ತಾನೇ ಕ್ಷಮಿಸಲು ಸಾಧ್ಯವಿಲ್ಲ ಎಂದು ಆಕೆ ಮನವರಿಕೆ ಮಾಡಿದರು. ಆಕೆ ತನ್ನ ಸಹೋದರನ ಅಂಗಿಯ ಕೊರಳ ಪಟ್ಟಿಯನ್ನು ಬಿಗಿಯಾಗಿ ಹಿಡಿದು ಹಝ್ರತ್ ಪೈಗಂಬರರ ಬಗ್ಗೆ ಇದ್ದ ಪ್ರೀತಿ ಮತ್ತು ವಿಶ್ವಾಸ ಭರಿತಳಾಗಿ ಆವೇಶಗೊಂಡು ಹೇಳಿದರು: "ನೀನು ಹಝ್ರತ್ ಮುಹಮ್ಮದರಿಗೆ[ಸ] ಹಾನಿ ಮಾಡಲು ಉದ್ದೇಶ ಹೊಂದಿಲ್ಲ ಎಂದು ಪ್ರಮಾಣವನ್ನು ಮೊದಲು ಮಾಡು." ಆಗ ಹಝ್ರತ್ ಉಮರ್ ಸೌಮ್ಯವಾಗಿ ಹೇಳಿದರು: "ನನ್ನ ಏಕಮಾತ್ರ ಉದ್ದೇಶ ಮುಸ್ಲಿಮನಾಗುವುದಾಗಿದೆ." ಆಗ ಸಹೋದರಿ ಸಂತೋಷಭರಿತೆಯಾಗಿ ಹಝ್ರತ್ ಪೈಗಂಬರರು[ಸ] ಇರುವ ಸ್ಥಳದ ಬಗ್ಗೆ ತಿಳಿಸಿದರು. ಹಝ್ರತ್ ಉಮರ್[ರ] ಹಝ್ರತ್ ಪೈಗಂಬರರನ್ನು[ಸ] ಸಮೀಪಿಸಿ ಪೂರ್ಣ ವಿಧೇಯತೆಯಿಂದ ಇಸ್ಲಾಮಿಗೆ ಪ್ರವೇಶಿಸಿದರು. ಒಬ್ಬ ಮಹಿಳೆ ಮಾಡಿದ ಮಹತ್ತರವಾದ ಬಲಿದಾನದಿಂದ ಆಕೆಯ ಸಹೋದರನ ಹೃದಯ ಕರಗಿತು ಮತ್ತು ಮುಸ್ಲಿಮರು ಸಂಭ್ರಮಿಸಿ "ಅಲ್ಲಾಹು ಅಕ್‌ಬರ್" ಎಂದು ಘೋಷಿಸಿದರು.

ಇನ್ನೊಂದು ಆಶ್ಚರ್ಯಕರ ಘಟನೆ ಉಹುದ್ ಯುದ್ಧಕ್ಕೆ ಸಂಬಂಧಿಸಿದುದಾಗಿದೆ. ಆ ಯುದ್ಧದಲ್ಲಿ ಹಝ್ರತ್ ಪೈಗಂಬರರ[ಸ]

ಹಲ್ಲುಗಳು ಮುರಿದುವು ಮತ್ತು ಅವರು ಹುತಾತ್ಮರಾದರೆಂಬ ವದಂತಿ ಹಬ್ಬಿತು. ಈ ವದಂತಿ ಮದೀನಕ್ಕೆ ತಲುಪಿದಾಗ ಮುಸ್ಲಿಮ್ ಮಹಿಳೆಯರು ತಮ್ಮ ಮನೆಗಳಿಂದ ಹೊರಟು ಯುದ್ಧ ಕ್ಷೇತ್ರದ ಕಡೆಗೆ ಓಡಿ ಸತ್ಯವೇನೆಂದು ತಿಳಿಯಲು ಬಯಸಿದರು. ಆಗ ಒಬ್ಬ ವೃದ್ಧೆಯಾದ ಮಹಿಳೆ ಮಾರ್ಗ ಮಧ್ಯೆ ಒಬ್ಬ ಸಹಾಬಿ(ಶಿಷ್ಯ)ಯೊಂದಿಗೆ ಕೇಳಿದರು – ಹಝ್ರತ್ ಪೈಗಂಬರರು(ಸ) ಜೀವದಿಂದಿರುವರೋ ಎಂದು? ಆಗ ಆ ಸಹಾಬಿ ಹೇಳಿದರು: "ನಿಮ್ಮ ಪತಿ ಯುದ್ಧದಲ್ಲಿ ಮೃತರಾದರೆಂದು ಸಂತಾಪದೊಂದಿಗೆ ಹೇಳುತ್ತೇನೆ." ಆಗ ಮಹಿಳೆ ಹೇಳಿದರು: "ನಾನು ನನ್ನ ಪತಿಯ ಬಗ್ಗೆ ಕೇಳಿಲ್ಲ. ನಾನು ಹಝ್ರತ್ ಪೈಗಂಬರರ(ಸ) ಬಗ್ಗೆ ಮಾತ್ರ ಕೇಳಿದ್ದೇನೆ." ಆಗ ಆ ಸಹಾಬಿ ಹೇಳಿದರು: "ನಿಮ್ಮ ಸಹೋದರ ಸಹ ಕೊಲ್ಲಲ್ಪಟ್ಟರೆಂದು ದುಃಖದಿಂದ ಹೇಳುತ್ತೇನೆ." ಆಗ ಮಹಿಳೆ ಹೇಳಿದರು: "ನಾನು ನನ್ನ ಸಹೋದರನ ಬಗ್ಗೆ ವಿಚಾರಿಸಿಲ್ಲ. ನಾನು ಹಝ್ರತ್ ಪೈಗಂಬರರ(ಸ) ಬಗ್ಗೆ ಮಾತ್ರ ಕೇಳುತ್ತಿದ್ದೇನೆ." ಆಗ ಆ ಸಹಾಬಿ ಹೇಳಿದರು: "ನಿಮ್ಮ ಪುತ್ರ ಸಹ ಕೊಲ್ಲಲ್ಪಟ್ಟನು." ಆಗ ಆ ಮಹಿಳೆ ಆತಂಕ ಭರಿತಳಾಗಿ ಹೇಳಿದರು: "ನಾನು ನನ್ನ ಪುತ್ರನ ಬಗ್ಗೆ ಕೇಳಿಲ್ಲ. ನಾನು ಹಝ್ರತ್ ಪೈಗಂಬರರ(ಸ) ಬಗ್ಗೆ ಮಾತ್ರ ಕೇಳುತ್ತಿದ್ದೇನೆ– ಅವರು ಜೀವಿಸಿರುವರೋ ಎಂದು. ಆಗ ಆ ಸಹಾಬಿ ಹೇಳಿದರು – ಹಝ್ರತ್ ಪೈಗಂಬರರು ಕೊಲ್ಲಲ್ಪಟ್ಟರು ಎಂಬ ವದಂತಿಗಳು ಸುಳ್ಳು. ಅವರು ಜೀವಿಸಿರುವರು ಎಂದು. ಆಗ ಆ ಮಹಿಳೆ ಅತ್ಯಂತ ಸಮಾಧಾನಗೊಂಡು ಹೇಳಿದರು: "ನನ್ನ ಪ್ರೀತಿಯ ಯಜಮಾನರಾದ ಹಝ್ರತ್ ಪೈಗಂಬರರು(ಸ) ಜೀವಿಸಿರುವುದರಿಂದ ನನ್ನ ಕುಟುಂಬದ ಯಾರಾದರೂ ಮೃತರಾದ ಬಗ್ಗೆ ನಾನು ನೋವನ್ನಾಗಲೀ ದುಃಖವನ್ನಾಗಲೀ ಅನುಭವಿಸುವುದಿಲ್ಲ."

ಇದು ಆ ಕಾಲದ ಮುಸ್ಲಿಮ್ ಮಹಿಳೆಯರು ಹಝ್ರತ್ ಪೈಗಂಬರರ(ಸ) ಬಗ್ಗೆ ಹೊಂದಿದ್ದ ಪರಿಶುದ್ಧವಾದ ಪ್ರೀತಿ ಮತ್ತು ನಿಷ್ಠೆಯಾಗಿದೆ. ಆ ಮಹಿಳೆಯರು ಇಸ್ಲಾಮ್‌ಗೋಸ್ಕರ ಪ್ರತಿಯೊಂದು ರೀತಿಯ ಬಲಿದಾನ ನೀಡಲು ಸಿದ್ಧರಾಗಿದ್ದರು. ಅವರ ಹೆಸರುಗಳು ಚರಿತ್ರೆಯಲ್ಲಿ ದಾಖಲಿಸಲ್ಪಟ್ಟು ಮುಂದಿನ ಕಾಲದ ಮಹಿಳೆಯರಿಗೆ ಮಾದರಿಯಾಗಿವೆ.

ಇತ್ತೀಚೆಗೆ ಬೇರೆ ಒಂದು ದೇಶದಲ್ಲಿ ವಾಸಿಸುವ ಒಬ್ಬ ಅಹ್ಮದೀ ಮಹಿಳೆಯ ಬಗ್ಗೆ ನನ್ನೊಂದಿಗೆ ಹೀಗೆ ಹೇಳಲಾಯಿತು. ಲಜ್ನದ ಸಭೆಗಳಲ್ಲಿ "ಧರ್ಮಕ್ಕೋಸ್ಕರ ಮತ್ತು ದೇಶಕ್ಕೋಸ್ಕರ ನನ್ನ ಜೀವ, ಸಂಪತ್ತು ಮತ್ತು ಸಮಯ ಬಲಿದಾನವಾಗಿ ನೀಡಲು ನಾನು ಸಿದ್ಧಳಾಗಿದ್ದೇನೆ" ಎಂಬ ಪ್ರತಿಜ್ಞೆಯನ್ನು ಆ ಮಹಿಳೆ ಪುನರಾವರ್ತಿಸುತ್ತಿದ್ದು "ನನ್ನ ಮಕ್ಕಳನ್ನು ಬಲಿಯರ್ಪಿಸಲು ಸಿದ್ಧಳಾಗಿದ್ದೇನೆ" ಎಂಬ ಪ್ರತಿಜ್ಞೆಯ ಭಾಗ ಉಚ್ಚರಿಸುವಾಗ ಆ ಮಹಿಳೆ ಮೌನವಾಗಿರುತ್ತಾರೆ. ಏಕೆಂದರೆ ಆಕೆ ತನ್ನ ಮಕ್ಕಳನ್ನು ಬಲಿಯರ್ಪಿಸಲು ಎಂದೂ ಸಿದ್ಧಳಾಗಲಾರಳು.

ಇದು ಧರ್ಮದ ಬಗ್ಗೆ ವಿಶ್ವಾಸದಲ್ಲಿ ಬಲಹೀನತೆ ಸೂಚಿಸುತ್ತದೆ. ಅಂತಹ ವ್ಯಕ್ತಿಗಳು ಕೊನೆಗೆ ಹೆಚ್ಚು ಬಲಹೀನ ವಿಶ್ವಾಸ ಹೊಂದಿ ಜೀವವನ್ನಾಗಲಿ, ಸಂಪತ್ತನ್ನಾಗಲಿ, ಸಮಯವನ್ನಾಗಲಿ ಇಸ್ಲಾಮಿಗೋಸ್ಕರ ಬಲಿಯರ್ಪಿಸಲಾರರು. ನೀವು ನೆನಪಿಟ್ಟುಕೊಳ್ಳಿರಿ, ನಾವು ಬೈಅತ್ (ನಿಷ್ಠೆಯ ಪ್ರತಿಜ್ಞೆ) ಮಾಡುವಾಗ ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವ ಪ್ರತಿಜ್ಞೆ ಮಾಡುತ್ತೇವೆ. ಇದರ ಅರ್ಥವೇನೆಂದರೆ ಅಲ್ಲಾಹನ ಬಗ್ಗೆ ಪ್ರೀತಿ, ಇಸ್ಲಾಮಿನ ಪರಿಶುದ್ಧ ಪೈಗಂಬರರ(ಸ) ಬಗ್ಗೆ ಪ್ರೀತಿ ಮತ್ತು ನಮ್ಮ ಧರ್ಮದ ಬಗ್ಗೆ ಪ್ರೀತಿ ಬೇರೆ ಯಾವುದರ ಬಗ್ಗೆ ಅಥವಾ ಬೇರೆ ಯಾರ ಬಗ್ಗೆ ಇರುವ ಪ್ರೀತಿಗಿಂತಲೂ ಮಿಗಿಲಾಗಿರಬೇಕು.

ಇದಲ್ಲದೆ ಇಂದಿನ ಕಾಲಘಟ್ಟದಲ್ಲಿ ಹಝ್ರತ್ ವಾಗ್ದತ್ತ ಮಸೀಹರು(ಅ) ಅಲ್ಲಾಹನ ಬಗ್ಗೆ ಮತ್ತು ಅವನ ಪೈಗಂಬರರ(ಸ) ಬಗ್ಗೆ ನೈಜ ಪ್ರೀಯನ್ನು ಹೊಂದಿದ ನಂತರ ತನ್ನ ಅನುಯಾಯಿಗಳು ತನ್ನೊಂದಿಗೆ ಸಹ ಸ್ನೇಹದ ಸಂಬಂಧವನ್ನು ಸ್ಥಾಪಿಸಬೇಕೆಂದು ಹೇಳಿದ್ದಾರೆ. ಆದುದರಿಂದ ಹಝ್ರತ್ ವಾಗ್ದತ್ತ ಮಸೀಹರ(ಅ) ಜಮಾಅತಿನ ಭಾಗವಾಗಲು ಬಯಸುವವಾದರೆ ನಾವು ಅವರ ಬಗ್ಗೆ ನಮ್ಮ ಪ್ರೀತಿಯನ್ನು, ಬೈಅತ್ ಪ್ರತಿಜ್ಞೆಗಳನ್ನು ಈಡೇರಿಸುತ್ತಾ ಅವರ ಉಪದೇಶಗಳಿಗೆ ವಿಧೇಯರಾಗುತ್ತಾ ಪ್ರಕಟಿಸಬೇಕು.

ಹಝ್ರತ್ ವಾಗ್ದತ್ತ ಮಸೀಹರು ಹೀಗೆ ಹೇಳಿದರು: "ನಾನು ನನ್ನ ಜಮಾಅತ್‌ನಲ್ಲಿ ಎಂತಹ ಆಧ್ಯಾತ್ಮಿಕ ಪರಿವರ್ತನೆಯನ್ನು ಇಚ್ಛಿಸುತ್ತೇನೆಂದರೆ ಅದು ಅಹ್ಮದಿಯರ ಮತ್ತು ಇತರ ಮುಸ್ಲಿಮರ ಮಧ್ಯೆ ವ್ಯತ್ಯಾಸವನ್ನು ತೋರಿಸುವ ರೀತಿಯಲ್ಲಿರಬೇಕು. ನಾವು ಇತರ ಮುಸ್ಲಿಮರ ಹಾಗೆಯೇ ಇರುವುದಾದರೆ ಬೈಅತ್‌ನಿಂದ ಸಿಗುವ ಪ್ರಯೋಜನವೇನು? ನಾವು ಇತರ ಮುಸ್ಲಿಮರ ಹಾಗೆ ನಮಾಝ್ ಬಗ್ಗೆ ಬಲಹೀನತೆ ಮತ್ತು ಉದಾಸೀನತೆ ಹೊಂದಿರುವುದಾದರೆ ಬೈಅತ್‌ನಿಂದ ಪ್ರಯೋಜನವೇನು? ನಾವು ಖುರ್‌ಆನ್ ಪಠಿಸುವ ಬಗ್ಗೆ ಬಲಹೀನತೆ ಮತ್ತು ಉದಾಸೀನರಾಗಿದ್ದರೆ ಹಾಗೂ ನಾವು ಅದರ ಉಪದೇಶಗಳನ್ನು ಅನುಸರಿಸುವುದಿಲ್ಲವಾದರೆ ಬೈಅತ್‌ನಿಂದ ಪ್ರಯೋಜನವಾದರೂ ಏನು?

ಆದುದರಿಂದ ಪವಿತ್ರ ಖುರ್‌ಆನಿನ ಉಪದೇಶಗಳಿಗನುಸಾರವಾಗಿ ನೀವು ಆಡಂಬರವಿಲ್ಲದ ಪೋಷಾಕು ಧರಿಸುವುದಿಲ್ಲವಾದರೆ, ನೀವು ಪರದೆಯ ಆವಶ್ಯಕತೆಗಳನ್ನು ಈಡೇರಿಸುವುದಿಲ್ಲವಾದರೆ ನೀವು ಬೈಅತ್ ಮಾಡಿದುದರಿಂದ ಪ್ರಯೋಜನವಾದರೂ ಏನು? ನೀವು ನಿಮ್ಮ ಮನೆಗೆ ಸಂಬಂಧಿಸಿ ನಿಮ್ಮ ಹೊಣೆಗಾರಿಕೆಗಳನ್ನು ಈಡೇರಿಸುವುದಿಲ್ಲವಾದರೆ ನೀವು ಬೈಅತ್ ಮಾಡಿದುದರ ಪ್ರಯೋಜನವಾದರೂ ಏನು? ನೀವು ಇಸ್ಲಾಮಿನ ಉಪದೇಶಗಳನ್ನು ಪ್ರಾಯೋಗಿಕವಾಗಿ ಪ್ರಕಟಿಸುವುದಿಲ್ಲವಾದರೆ ಮತ್ತು ಅದನ್ನು ಪ್ರಚಾರ ಮಾಡಲು ಪ್ರಯತ್ನಿಸುವುದಿಲ್ಲವಾದರೆ ನೀವು ಬೈಅತ್ ಮಾಡಿ ಅಹ್ಮದಿಯಾದುದರ ಪ್ರಯೋಜನವಾದರೂ ಏನು? ಆದುದರಿಂದ ಪ್ರತಿಯೊಬ್ಬ ಅಹ್ಮದೀ ಮಹಿಳೆ ತಾನು ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವುದಾಗಿ ಮಾಡಿದ ಪ್ರತಿಜ್ಞೆ ಬಗ್ಗೆ ಚಿಂತಿಸಬೇಕು.

ನಿಮ್ಮ ಪೈಕಿ ಪ್ರತಿಯೊಬ್ಬರು ಚಿಂತಿಸಬೇಕು – ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಮಹಿಳೆಯರಾದ ಅನುಯಾಯಿಗಳು ಧಾರ್ಮಿಕ ಸೇವೆ ಮಾಡಲು ಹೊಂದಿದ್ದ ಉತ್ಸಾಹ ಮತ್ತು ನಿಷ್ಠೆ ನಿಮ್ಮಲ್ಲಿದೆಯೋ ಎಂದು. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಶಿಷ್ಯರು ಅಲ್ಲಾಹನ ಬಗ್ಗೆ ಮತ್ತು ಪೈಗಂಬರರ ಬಗ್ಗೆ ಹೊಂದಿದ್ದ ಪ್ರಾಮಾಣಿಕ ಪ್ರೀತಿ ನೀವು ಹೊಂದಿರುವಿರೋ ಎಂದು ನೀವು ನಿಮ್ಮನ್ನು ಪ್ರಶ್ನಿಸಬೇಕು. ನೀವು ನಿಮ್ಮ ಕರ್ತವ್ಯಗಳನ್ನು ಈಡೇರಿಸಲು ಆವಶ್ಯಕವಾದ ಧಾರ್ಮಿಕ ಜ್ಞಾನ ಮತ್ತು ಅಂತರ್ ದೃಷ್ಟಿಯನ್ನು ಹೊಂದಿರುವಿರೋ? ಎಂದು ಚಿಂತಿಸಬೇಕು. ನೀವು ನಿಮ್ಮ ಮಕ್ಕಳಿಗೆ ಅನುಕರಣೀಯ ಆದರ್ಶವಾಗಿರುವಿರೋ? ಎಂದೂ ಸಹಾಬರು ತಮ್ಮ ಮಕ್ಕಳಿಗೆ

ಸಾತ್ವಿಕರಾಗಲು ತರಬೇತಿ ನೀಡಿದ ಹಾಗೆ ನೀವು ತರಬೇತಿ ನೀಡುತ್ತಿರುವಿರೋ? ಎಂದು ಸಹ ಪರಿಶೋಧಿಸಬೇಕು.

ಈ ಪ್ರಶ್ನೆಗಳಿಗೆ ನಿಮ್ಮ ಉತ್ತರ **"ಇಲ್ಲ"** ಎಂದಾದರೆ ನೀವು ಬಹಳ ವ್ಯಾಕುಲಗೊಳ್ಳಬೇಕು ಮತ್ತು ಕಳವಳದಿಂದಿರಬೇಕು. ಅದು ಜಮಾಅತನ್ನು ಸಹ ಚಿಂತೆಗೀಡು ಮಾಡುವುದೂ ಆಗಿದೆ. ಅಹ್ಮದೀ ಮಹಿಳೆಯರು ಮತ್ತು ಬಾಲಿಕೆಯರು ಸ್ಪಷ್ಟವಾಗಿ ತಿಳಿಯಬೇಕಾದುದೇನೆಂದರೆ ನೀವು ಯಾವುದೇ ಉದ್ದೇಶಲಕ್ಷ್ಯವಿಲ್ಲದೆ ಜೀವಿಸುವವರಲ್ಲ. ನಿಮಗೆ ಅತ್ಯಂತ ದೊಡ್ಡ ಉದ್ದೇಶಲಕ್ಷ್ಯಗಳಿವೆ. ನೀವು ಅವುಗಳನ್ನು ಮನವರಿಕೆ ಮಾಡಿಕೊಂಡು ಈಡೇರಿಸುವಿರಿ ಎಂದು ನಾನು ಪ್ರತೀಕ್ಷಿಸುತ್ತೇನೆ ಮತ್ತು ಪ್ರಾರ್ಥಿಸುತ್ತೇನೆ.

ಈ ಕಾಲದಲ್ಲಿ ಅತ್ಯಂತ ಮುಖ್ಯವಾದುದು ತಬ್ಲೀಗ್ (ಧರ್ಮ ಪ್ರಚಾರ) ಮಾಡುವುದು ಮತ್ತು ಅದಕ್ಕಾಗಿ ನಿಮ್ಮನ್ನು ಮೊದಲು ಆಧ್ಯಾತ್ಮಿಕವಾಗಿ ಸುಧಾರಣೆ ಮಾಡುವುದಾಗಿದೆ. ನೀವು ವೈಯಕ್ತಿಕವಾಗಿ ಉತ್ತಮ ಮಾದರಿಯಾಗಬೇಕು. ನೀವು ನಿಮ್ಮ ಮಕ್ಕಳಿಗೆ ನೈತಿಕ ಶಿಕ್ಷಣ ನೀಡಬೇಕು. ಅವರಿಗೆ ಮಾರ್ಗದರ್ಶನ ನೀಡಿ ಜಮಾಅತ್‌ನೊಂದಿಗೆ ಸಂಬಂಧವನ್ನು ಚಿಕ್ಕ ವಯಸ್ಸಿನಿಂದಲೇ ಸ್ಥಾಪಿಸಬೇಕು. ಹಾಗೆ ಮಾಡಿದರೆ ಮಾತ್ರ ನೀವು ತಬ್ಲೀಗ್ ಮಾಡುವ ಹೊಣೆಗಾರಿಕೆಯನ್ನು ಈಡೇರಿಸುವವರಾಗುವಿರಿ.

ಇಂದಿನ ಕಾಲಘಟ್ಟದಲ್ಲಿ ನಮ್ಮ ಮಹಿಳೆಯರು ಇಸ್ಲಾಮಿನ ನೈಜ ತತ್ವಗಳನ್ನು ಚಿತ್ರೀಕರಿಸಿ ಅದನ್ನು ವಿಸ್ತಾರವಾಗಿ ಹರಡಬೇಕು. ನೀವು ಭಯಪಡದೆ, ಯಾವುದೇ ಹಿಂಜರಿಕೆಯಿಲ್ಲದೆ ಇಸ್ಲಾಮನ್ನು ಅನುಷ್ಠಾನಕ್ಕೆ ತಂದು ಇಸ್ಲಾಮಿನ ಪ್ರಚಾರ ಮಾಡಬೇಕು. ಇಸ್ಲಾಮ್ ಮಹಿಳೆಯರಿಗೆ ಸ್ವಾತಂತ್ರ್ಯ ನೀಡುವುದಿಲ್ಲ ಮತ್ತು ಅವರು ಪುರುಷರಿಂದ ದಮನಿಸಲ್ಪಡುತ್ತಾರೆ ಎಂದು ಯಾರಾದರೂ ವಾದಿಸುವರಾದರೆ ನಿಮಗೆ ಇಸ್ಲಾಮ್ ಸ್ವಾತಂತ್ರ್ಯ ನೀಡಿದೆ, ನೈಜ ವಿಮೋಚನೆ ಮತ್ತು ನೈಜ ಜ್ಞಾನ ನೀಡಿದೆ ಎಂದು ಲೋಕಕ್ಕೆ ತೋರಿಸಿಕೊಡುವುದು ನೀವು ಮಾಡಬೇಕಾದ ಕರ್ತವ್ಯವಾಗಿದೆ.

ಮಹಿಳೆಯರ ಮೇಲಿರುವ ಕೆಲವು ಪರಿಮಿತಿಗಳು ಅವರ ಮೇಲೆ ಬಲಾತ್ಕಾರದಿಂದ ಹೇರಿದವುಗಳಲ್ಲ; ಅವು ಮಹಿಳೆಯರು ಸ್ವತಃ ತಮ್ಮ ಇಷ್ಟಪ್ರಕಾರ ತಮ್ಮ ಮೇಲೆ ಅಳವಡಿಸಿದವುಗಳಾಗಿವೆ ಮತ್ತು ಇಸ್ಲಾಮ್ ಧರ್ಮದ ಭವ್ಯ ಉಪದೇಶಗಳು ಅನುಸರಿಸಲು ಯೋಗ್ಯವೆಂದು ಮಹಿಳೆಯರು ಗಣಿಸಿದ ಕಾರಣದಿಂದ ಎಂದು ಲೋಕಕ್ಕೆ ತೋರಿಸಿಕೊಡುವುದು ನಿಮ್ಮ ಕರ್ತವ್ಯವಾಗಿದೆ. ನೀವು ಪುರುಷರೊಂದಿಗೆ ಬೆರೆಯದಿರುವುದು ಅಥವಾ ಅವರ ಜೊತೆ ಕುಳಿತುಕೊಳ್ಳದಿರುವುದು ನಿಮ್ಮ ಇಚ್ಛೆ ಪ್ರಕಾರವೇ ಆಗಿದೆ. ಅದು ನಿಮ್ಮ ಗೌರವ, ಘನತೆಯನ್ನು ಸಂರಕ್ಷಿಸಲಿಕ್ಕೋಸ್ಕರವಾಗಿದೆ. ನೀವು ಪುರುಷರೊಂದಿಗೆ ಹಸ್ತಲಾಘವ ಮಾಡದಿರುವುದು ನಿಮ್ಮ ಹೃದಯ ಇಸ್ಲಾಮ್ ಧರ್ಮ ತತ್ವಗಳನ್ನು ಅನುಸರಿಸುವುದರಿಂದಾಗಿದೆ. ಇಸ್ಲಾಮ್ ಮಹಿಳೆಯರಿಗೆ ನೈಜ ಘನತೆಯನ್ನು ನೀಡುತ್ತದೆ. ನೀವು ಹಾಗೆ ಮಾಡುವುದು ಪುರುಷರು ಅದನ್ನು ಆವಶ್ಯಪಡುವುದರಿಂದಲ್ಲ. ಅದು ನೀವು ಹೊಂದಿರುವ ಸ್ವಾತಂತ್ರ್ಯದ ಕಾರಣದಿಂದಲೂ ನಿಮಗೆ ಸ್ವಯಂ ನಿರ್ಧಾರ ಮಾಡುವ ಸ್ವಾತಂತ್ರ್ಯವಿರುವುದರಿಂದಲೂ ಆಗಿದೆ. ಅದು ನೈಜ ಸ್ವಾತಂತ್ರ್ಯದ ಚಿಹ್ನೆಯಾಗಿದೆ.

ನೀವು ನೆನಪಿನಲ್ಲಿರಿಸಿಕೊಳ್ಳಿರಿ. ಗುಂಪನ್ನು ಅನುಸರಿಸಿ ಹೋಗುವುದು ಮತ್ತು ಸಮಾಜದ ಪ್ರಭಾವಗಳಿಗೆ ತಲೆಬಾಗುದು ಸ್ವಾತಂತ್ರ್ಯವಲ್ಲ. ನೈಜವಾದ ಸ್ವಾತಂತ್ರ್ಯ ನೀವು ನಿಮ್ಮ ನಂಬಿಕೆಗಳನ್ನು ಅನುಸರಿಸುವ ಶಕ್ತಿಯನ್ನು ಹೊಂದಿರುವುದರಲ್ಲಿ ಮತ್ತು ನಿಮ್ಮ ನಂಬಿಕೆ ಪ್ರಕಾರ ವರ್ತಿಸುವುದರಲ್ಲಿ ಅಡಕವಾಗಿದೆ. ಸರ್ವಶಕ್ತನಾದ ಅಲ್ಲಾಹನ ಬಗ್ಗೆ ಮತ್ತು ಅವನ ಸಂದೇಶವಾಹಕರ ಬಗ್ಗೆ ನಿಮ್ಮ ಹೃದಯದ ಧ್ವನಿ ಪರಿಶುದ್ಧ ಪ್ರೇಮವನ್ನು ಹೊರ ಸೂಸುವ ತನಕ, ಎಂದರೆ ಹಝ್ರತ್ ಉಮರ್[ರ]ರ ಸಹೋದರಿ ಮತ್ತು ತನ್ನ ಪತಿ, ಸಹೋದರ ಮತ್ತು ಪುತ್ರನನ್ನು ಕಳಕೊಂಡ ವೃದ್ಧ ವನಿತೆಯ ಹಾಗಿರುವ ಮನೋಭಾವ ಹೊಂದುವ ತನಕ ನಾವು ಲೋಕವನ್ನು ಪ್ರಭಾವಿಸಲಾರೆವು ಮತ್ತು ವಿಧಿಸಲ್ಪಟ್ಟಿರುವ ಕ್ರಾಂತಿಯನ್ನು ಸಂಭವಿಸುವಂತೆ ಮಾಡಲಾರೆವು.

ನಾನು ಇದರ ಮೊದಲು ಹೇಳಿದ ಹಾಗೆ ನಮ್ಮ ಮಹಿಳೆಯರು ಇಸ್ಲಾಮನ್ನು ಪ್ರಚಾರ ಮಾಡಬೇಕು. ಮಹಿಳೆಯರಿಗೆ ಸಂಬಂಧಿಸಿದ ವಿಷಯಗಳು ಚರ್ಚಿಸಲ್ಪಡುವಾಗ ಅವುಗಳ ಬಗ್ಗೆ ಮಹಿಳೆಯರ ಪರವಾಗಿ ಪುರುಷರು ಪ್ರತಿಕ್ರಿಯಿಸುವುದಕ್ಕಿಂತ ಮಹಿಳೆಯರೇ ಉತ್ತರ ನೀಡುವುದು ಸೂಕ್ತವಾಗಿದೆ. ಪ್ರತಿಯೊಬ್ಬ ಮಹಿಳೆ ಈ ವಿಷಯದ ಬಗ್ಗೆ ಚೆನ್ನಾಗಿ ಲಕ್ಷ್ಯ ನೀಡಬೇಕು; ತಮ್ಮ ಧರ್ಮದ ಬಗ್ಗೆ ಜ್ಞಾನ ಗಳಿಸಲು ಪ್ರಯತ್ನಿಸಬೇಕು; ಇಸ್ಲಾಮಿನ ವಿರುದ್ಧ ಮಾಡಲಾಗುವ ಆಪಾದನೆಗಳನ್ನು ಖಂಡಿಸಲು ಸಿದ್ಧರಾಗಬೇಕು ಮತ್ತು ತಮ್ಮ ಧರ್ಮಕ್ಕೋಸ್ಕರ ಪ್ರತಿಯೊಂದು ಬಲಿದಾನ ನೀಡಲು ಸಿದ್ಧಳಾಗಿರಬೇಕು.

ನೀವೆಲ್ಲರೂ ನಿಮ್ಮ ಹೊಣೆಗಾರಿಕೆಗಳನ್ನು ಅರಿತುಕೊಂಡು ಅವುಗಳನ್ನು ನಿರ್ವಹಿಸಬೇಕು ಮತ್ತು ನಿಮ್ಮ ಮಕ್ಕಳಿಗೆ ನೈತಿಕ ಮತ್ತು ಆಧ್ಯಾತ್ಮಿಕ ತರಬೇತಿ ನೀಡುವುದಾಗಿರುವ ನಿಮ್ಮ ಪ್ರತಿಜ್ಞೆ ಈಡೇರಿಸಿ ಅವರನ್ನು ಜಮಾಅತ್‌ನೊಂದಿಗೆ ಸಂಬಂಧ ಸ್ಥಾಪಿಸುವಂತೆ ಮಾಡಲು ಚೆನ್ನಾಗಿ ಪ್ರಯತ್ನಿಸಬೇಕು. ನೀವು ನೈಜ ಇಸ್ಲಾಮೀ ತತ್ವಗಳನ್ನು ನಿಮ್ಮ ವಲಯಗಳಲ್ಲಿ, ವಿಶಿಷ್ಟವಾಗಿ ಮಹಿಳೆಯರಿಗೆ ತಬ್ಲೀಗ್ ಮಾಡಲು ಯಾವಾಗಲೂ ಸಿದ್ಧರಾಗಿರಬೇಕು.

ನೀವು ನಿಮ್ಮ ಹೊಣೆಗಾರಿಕೆಗಳನ್ನು ಮನವರಿಕೆ ಮಾಡಿಕೊಂಡರೆ ನೀವು ಜಯಶಾಲಿ ಮಾತೆಯರಾಗುವಿರಿ ಮತ್ತು ಪ್ರತಿಯೊಂದು ಬಲಿದಾನ ನೀಡಲು ಸಿದ್ಧರಾದ ಅಹ್ಮದೀ ಮಹಿಳೆಯರಾಗುವಿರಿ. ನೀವು ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವವರಾಗುವಿರಿ.

ನೀವು ನಿಮ್ಮ ಕರ್ತವ್ಯಗಳನ್ನು ಮನವರಿಕೆ ಮಾಡುವಿರಾದರೆ ನೀವು ಇಸ್ಲಾಮ್ ಮತ್ತು ಅಹ್ಮದಿಯ್ಯತಿನ ಸಂದೇಶ ಎಲ್ಲೆಲ್ಲೂ ಹಬ್ಬಿಸುವುದರಲ್ಲಿ ಜಯಶಾಲಿಗಳಾಗುವಿರಿ ಎಂದು ನಾನು ದೃಢವಾಗಿ ನಂಬುತ್ತೇನೆ. ಹಾಗೆ ಮಾಡಿದರೆ ಮಾತ್ರ ನೀವು ಬೈಅತ್ ಪ್ರತಿಜ್ಞೆಗಳನ್ನೂ ಹೊಣೆಗಾರಿಕೆಗಳನ್ನೂ ಈಡೇರಿಸುವವರಾಗುವಿರಿ.

ಅಲ್ಲಾಹನು ನಿಮಗೆ ಹಾಗೆ ಮಾಡಲು ಭಾಗ್ಯ ನೀಡಲಿ. ಅಲ್ಲಾಹನು ಯು.ಕೆ. ಲಜ್‌ನ ಇಮಾಇಲ್ಲಾಹ್ ಮತ್ತು ಲೋಕದಾದ್ಯಂತ ಇರುವ ಲಜ್‌ನ ಸಂಘಟನೆಗಳನ್ನು ಅನುಗ್ರಹಿಸುವವನಾಗಲಿ – ಆಮೀನ್.

◆




# ಧರ್ಮ ಸ್ಥಾಪಕರನ್ನು ಗೌರವಿಸುವುದು

## ಜಾಗತಿಕ ಶಾಂತಿಗೆ ಬುನಾದಿ

ಮನುಷ್ಯನ ನೈತಿಕ ಮತ್ತು ಆಧ್ಯಾತ್ಮಿಕ ಅಭಿವೃದ್ಧಿಗಾಗಿ ಅಲ್ಲಾಹನು ಬೆಳಗಿಸಿದ ಸನ್ಮಾರ್ಗ ದೀಪದ ಪ್ರಥಮ ರೂಪ ಹಝ್‌ರತ್ ಆದಮ್‌ರ[ಅ] ಮೂಲಕ ಪ್ರಕಟಗೊಂಡಿತು. ಅದರ ಪ್ರಗತಿ ಇಹಪರ ಲೋಕಗಳ ಸರ್ದಾರ ಹಝ್‌ರತ್ ಮುಹಮ್ಮದ್‌ರ[ಸ] ನಿಯೋಗದ ಮೂಲಕ ತನ್ನ ಸೀಮೆಯನ್ನು ತಲುಪಿತು. ಈ ರೀತಿಯಲ್ಲಿ ಈ ಆಧ್ಯಾತ್ಮಿಕ ಅಧ್ಯಾಪನೆಗಳು ಆಗಿಂದಾಗ್ಗೆ ಒಂದು ಲಕ್ಷ ಇಪ್ಪತ್ತನಾಲ್ಕು ಸಾವಿರ ಪ್ರವಾದಿಗಳ ಒಂದುಗೂಡಿದ ಪ್ರಯತ್ನಗಳ ಫಲಸ್ವರೂಪವಾಗಿ ಪರಿಪೋಷಿಸಲ್ಪಟ್ಟಿತ್ತು. ಕೊನೆಗೆ ಪವಿತ್ರ ಖುರ್‌ಆನಿನ ವಚನ "ಈ ದಿನ ನಿಮ್ಮ ಧರ್ಮವನ್ನು ನಿಮಗೆ ನಾನು ಪರಿಪೂರ್ಣಗೊಳಿಸಿರುವೆನು; ನನ್ನ ಅನುಗ್ರಹವನ್ನು ನಿಮಗೆ ಸಂಪೂರ್ಣವಾಗಿ ದಯಪಾಲಿಸಿರುವೆನು ಹಾಗೂ ಇಸ್ಲಾಮನ್ನು ನಿಮಗೆ ಧರ್ಮವಾಗಿ ತೃಪ್ತಿಪಟ್ಟಿರುವೆನು."(5:4). ಎಂಬುದರ ಮೂಲಕ ತನ್ನ ಕೊನೆಯ ರೂಪ ಪಡೆದುಕೊಂಡು ಪರಿಪೂರ್ಣತೆಯ ಅಂತಿಮ ಘಟ್ಟವನ್ನು ತಲುಪಿತು.

ಪ್ರವಾದಿಗಳ ಮೂಲಕ ಅಲ್ಲಾಹನಿಂದ ಅವತೀರ್ಣವಾದ ಎಲ್ಲ ಆಧ್ಯಾತ್ಮಿಕ ಶಿಕ್ಷಣಗಳನ್ನು ಗೌರವ ಭಾವದಿಂದ ಕಾಣಲು ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಉಪದೇಶಿಸಿ ಅವರಲ್ಲಿ ನಂಬಿಕೆಯಿರಿಸಲು ಆಜ್ಞಾಪಿಸಿದ್ದಾನೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳುತ್ತಾನೆ:

"ಈ ಸಂದೇಶವಾಹಕ ತನ್ನ ಪ್ರಭುವಿನಿಂದ ತನಗೆ ಅವತೀರ್ಣಗೊಂಡದ್ದರಲ್ಲಿ ವಿಶ್ವಾಸವಿಟ್ಟಿರುತ್ತಾರೆ (ಹಾಗೆಯೇ ಇತರ) ಸತ್ಯವಿಶ್ವಾಸಿಗಳು ಸಹ. ಎಲ್ಲರೂ ಅಲ್ಲಾಹನಲ್ಲೂ ಅವನ ದೂತರಲ್ಲೂ ಅವನ ಗ್ರಂಥಗಳಲ್ಲೂ ಅವನ ಸಂದೇಶವಾಹಕರಲ್ಲೂ ವಿಶ್ವಾಸವಿಟ್ಟಿರುತ್ತಾರೆ. 'ಅಲ್ಲಾಹನ ಸಂದೇಶವಾಹಕರ ಮಧ್ಯೆ ನಾವು ವ್ಯತ್ಯಾಸವನ್ನೇನೂ ಕಲ್ಪಿಸುವುದಿಲ್ಲ. (ಎಂದು ಅವರು ಹೇಳುತ್ತಾರೆ.) ನಾವು (ಅಲ್ಲಾಹನ ಆಜ್ಞೆಯನ್ನು) ಕೇಳಿ (ಹೃತ್ಪೂರ್ವಕವಾಗಿ) ಅನುಸರಿಸಿದ್ದೇವೆ' ಎಂದು ಸಹ ಅವರು ಹೇಳುತ್ತಾರೆ" (2:286).

ಪವಿತ್ರ ಖುರ್‌ಆನಿನ ಈ ಸುವರ್ಣ ತತ್ವವನ್ನು ಲೋಕದಲ್ಲಿ ನೆಲೆಗೊಳಿಸುವುದು ಅನಿವಾರ್ಯವಾಗಿದೆ. ಇದೇ ಜಾಗತಿಕ ಶಾಂತಿ ಮತ್ತು ಭದ್ರತೆಗೆ ಆಧಾರ. ಇಂದಿನ ಕಾಲದಲ್ಲಿ ಹಲವರು ತಮ್ಮ ಧರ್ಮದಲ್ಲಿ ಬಂದ ಋಷಿ, ಮುನಿ, ಪ್ರವಾದಿಗಳನ್ನು ದೇವನಿಂದ ನಿಯೋಗಿತರೆಂದು ನಂಬುತ್ತಾರೆ. ಆದರೆ ತಮ್ಮ ಧರ್ಮದ ಹೊರಗೆ ಬಂದ ಪ್ರವಾದಿಗಳನ್ನು ದೇವನಿಂದ ನಿಯೋಗಿತರೆಂದು ನಂಬುವುದಿಲ್ಲ. ಮಾತ್ರವಲ್ಲ, ಅವರನ್ನು ಮಿಥ್ಯವಾದಿಗಳೆಂದು ಭಾವಿಸುತ್ತಾರೆ. ಇಂದು ವಿವಿಧ ಧರ್ಮಗಳ ಧಾರ್ಮಿಕ ಸ್ಥಾಪಕರನ್ನು ಅವಮಾನಿಸುವುದು ಮತ್ತು ಧಾರ್ಮಿಕ ಮಹಾತ್ಮರನ್ನು ಅಗೌರವದಿಂದ ಕಾಣುವುದು ಸಾಧಾರಣ ಸಂಗತಿಯಾಗಿ ಬಿಟ್ಟಿದೆ. ಕೆಲವೊಮ್ಮೆ ಹಝ್‌ರತ್ ಮುಹಮ್ಮದ್‌ರ[ಸ] ಕುರಿತು ವ್ಯಂಗ್ಯಚಿತ್ರ ರಚಿಸಲಾಗುತ್ತದೆ ಮತ್ತು ಅವರ ವಿರುದ್ಧ ಅವಹೇಳನಕಾರಿ ಪದಗಳನ್ನು ಬಳಸಲಾಗುತ್ತದೆ, ಕೆಲವೊಮ್ಮೆ ಫೇಸ್‌ಬುಕ್‌ನಲ್ಲಿ ಹಿಂದು ದೇವಿ–ದೇವತೆಗಳ, ಮಹಾತ್ಮರ ಮತ್ತು ಹಝ್‌ರತ್ ಈಸಾ ಮಸೀಹ್(ಯೇಸುಕ್ರಿಸ್ತ)ರ ವಿರುದ್ಧ, ಕೆಲವು ಸಾರಿ ಸಿಖ್ಖ್ ಧರ್ಮಗುರುಗಳ ವಿರುದ್ಧ ಅವಹೇಳನಕಾರಿ ಲೇಖನ ಅಥವಾ ಚಿತ್ರಗಳನ್ನು ರಚಿಸಿ ದೇಶದ ಶಾಂತಿ ಸಂಧಾನದ ವಾತಾವರಣವನ್ನು ಕೆಡಿಸಲು ಪ್ರಯತ್ನಿಸಲಾಗುತ್ತದೆ. ಇವು ಈ ಕಾಲದಲ್ಲಿ ವಾಕ್‌ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ

ಸ್ವಾತಂತ್ರ್ಯದ ಹೆಸರಿನಲ್ಲಿ ಸಾಧಾರಣ ವಿಷಯವಾಗುತ್ತಿವೆ.

ಪ್ರತಿಯೊಂದು ಸಮುದಾಯದಲ್ಲೂ ದೇವನ ಕಡೆಯಿಂದ ಮಾರ್ಗದರ್ಶಕರು ಆಗಮಿಸುತ್ತಾ ಇದ್ದರು ಎಂಬ ಪವಿತ್ರ ಖುರ್‌ಆನಿನ ಅಧ್ಯಾಪನೆಯಲ್ಲಿ ಎಲ್ಲ ಧರ್ಮದ ಜನರು ಮತ್ತು ಮುಸ್ಲಿಮರ ಎಲ್ಲ ಪಂಗಡದವರು ವಿಶ್ವಾಸವಿಡುವುದಾದರೆ, ಇದರ ಫಲಸ್ವರೂಪವಾಗಿ ಹಿಂದೂಗಳು ಮತ್ತು ಕ್ರೈಸ್ತರು ಹಝ್ರತ್ ಮುಹಮ್ಮದ್‌ರಲ್ಲಿ[ಸ] ನಂಬಿಕೆ ಹೊಂದುವವರು ಮತ್ತು ಮುಸ್ಲಿಮರು ಶ್ರೀಕೃಷ್ಣ ಮತ್ತು ಶ್ರೀರಾಮಚಂದ್ರರನ್ನು ದೇವನ ಸಂದೇಶವಾಹಕರೆಂದು ನಂಬುವವರು. ಪವಿತ್ರ ಖುರ್‌ಆನ್ ಇದರ ಕುರಿತು ಹೀಗೆ ಹೇಳುತ್ತದೆ: "ಓರ್ವ ಮುನ್ನೆಚ್ಚರಿಕೆಗಾರನು ಬಂದಿರದ ಯಾವುದೇ ಜನಾಂಗವಿಲ್ಲ." ( 35:25).

ಪವಿತ್ರ ಖುರ್‌ಆನಿನಲ್ಲಿ ಹೆಸರಿಸಲಾದ ಪ್ರವಾದಿಗಳನ್ನು ಮಾತ್ರ ನಂಬಬಹುದು ಆದರೆ ಪವಿತ್ರ ಖುರ್‌ಆನಿನಲ್ಲಿ ಹೆಸರಿಸಲಾಗದವರನ್ನು ದೇವನ ಕಡೆಯಿಂದ ಬಂದವರಲ್ಲ ಎಂಬ ಭಾವನೆ ಕೆಲವು ಮುಸ್ಲಿಮರಲ್ಲಿ ಸಹ ದುರದೃಷ್ಟದಿಂದ ಉಂಟಾಗಿದೆ. ಆದರೆ ಪವಿತ್ರ ಖುರ್‌ಆನ್ ವ್ಯಕ್ತವಾಗಿ ಹೀಗೆ ಹೇಳುತ್ತದೆ: "ನಿನಗಿಂತ ಮುಂಚೆ ಸಹ ನಾವು ಎಷ್ಟೋ ಸಂದೇಶವಾಹಕರನ್ನು ಕಳುಹಿಸಿದ್ದೆವು. ಅವರಲ್ಲಿ ಕೆಲವರ ಕುರಿತು ನಾವು ನಿನಗೆ ತಿಳಿಸಿದ್ದೇವೆ; ಕೆಲವರ ಕುರಿತು ನಾವು ನಿಮಗೆ ತಿಳಿಸಿಲ್ಲ." (40:79) ಬೇರೆ ಕಡೆಗಳಲ್ಲೂ ಮೂಲತವಾಗಿ ಎಲ್ಲ ಪ್ರವಾದಿಗಳಲ್ಲಿ ನಂಬಿಕೆಯಿಡಲು ಉಪದೇಶಿಸಲಾಗಿದೆ.

ಪವಿತ್ರ ಖುರ್‌ಆನಿನ ಈ ಉಪದೇಶದ ಬೆಳಕಿನಲ್ಲಿ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್[ಅ] ಹೇಳುತ್ತಾರೆ:

"ಈ ತತ್ವ ಅತ್ಯಂತ ಪ್ರಿಯ, ಶಾಂತಿದಾಯಕ, ಮೈತ್ರಿಗೆ ಅಡಿಪಾಯ ಹಾಕುವಂತಹದ್ದು ಮತ್ತು ನೈತಿಕ ಸ್ಥಿತಿಗೆ ಸಹಾಯಕವಾದುದಾಗಿದೆ. ಅದೇನೆಂದರೆ, ಲೋಕದಲ್ಲಿ ಆಗಮಿಸಿದ ಎಲ್ಲ ಪ್ರವಾದಿಗಳನ್ನು ಸತ್ಯವಂತರೆಂದು ಅರಿಯಬೇಕು. ಅವರು ಭಾರತದಲ್ಲಿ ಆಗಮಿಸಿದವರಾಗಿದ್ದರೂ ಪರ್ಶಿಯದಲ್ಲಾಗಿದ್ದರೂ ಚೀನಾದಲ್ಲಾಗಿದ್ದರೂ ಅಥವಾ ಬೇರೆ ಯಾವ ದೇಶದಲ್ಲಿ ಆಗಮಿಸಿದವರಾಗಿದ್ದರೂ ಸರಿ. ಕೋಟಿಗಟ್ಟಲೆ ಹೃದಯಗಳಲ್ಲಿ ಅಲ್ಲಾಹನು ಅವರ–(ಪ್ರವಾದಿಗಳ) ಮೇಲಿನ ಗೌರವಾದರಗಳನ್ನು ಇರಿಸಿದ್ದಾನೆ. ಅದೇ ರೀತಿ ಅವರ ಧರ್ಮದ ಬೇರನ್ನು ನೆಲೆನಿಲ್ಲಿಸಿದನು ಹಾಗೂ ಶತಮಾನಗಳಿಂದ ಆ ಧರ್ಮಗಳು ಜಾರಿಯಲ್ಲಿವೆ. ಪವಿತ್ರ ಖುರ್‌ಆನ್ ನಮಗೆ ಕಲಿಸಿಕೊಡುವ ತತ್ವ ಇದೇ ಆಗಿದೆ. ಈ ತತ್ವದ ಪ್ರಕಾರ ಮೇಲೆ ನಿರೂಪಿಸಿದಂತಹ ಜೀವನ ಚರಿತ್ರೆ ಇರುವ ಪ್ರತಿಯೊಂದು ಧರ್ಮಸ್ಥಾಪಕರನ್ನು ನಾವು ಗೌರವ ದೃಷ್ಟಿಯಿಂದ ಕಾಣುತ್ತೇವೆ. ಅವರು ಹಿಂದೂ ಧರ್ಮದ ಮಹಾತ್ಮರಾಗಿದ್ದರೂ, ಪಾರಸಿ ಧರ್ಮದ, ಚೀನಿಯರ, ಯಹೂದಿಯರ ಅಥವಾ ಕ್ರೈಸ್ತರ ಮಹಾತ್ಮರಾಗಿದ್ದರೂ ಸರಿ." (ತುಹ್‌ಫೆ ಕೈಸರಿಯ್ಯ– ಪುಟ 7)

ಧಾರ್ಮಿಕ ಮಹಾತ್ಮರ ಗೌರವಾದರಕ್ಕಾಗಿ ಮತ್ತು ಭಾರತದಲ್ಲಿ ಶಾಂತಿ ನೆಲೆನಿಲ್ಲಿಸಲು ಹಝ್ರತ್ ಮಿರ್ಝಾ ಗುಲಾಂ ಅಹ್ಮದ್‌ರು[ಅ] ತಮ್ಮ ನಿಧನಕ್ಕೆ ಕೆಲವು ದಿನಗಳ ಮುಂಚೆ 1908ರಲ್ಲಿ ಒಂದು ಉಪನ್ಯಾಸ ತಯಾರು ಮಾಡಿದರು. ಅದು ಅವರ ನಿಧನದ ನಂತರ 1908 ಜೂನ್ 21ರಂದು ಲಾಹೋರಿನ ಒಂದು ಮಹಾ ಸಭೆಯಲ್ಲಿ ಪಂಜಾಬಿನ ಚೀಫ್ ಕೋರ್ಟ್ ಜಡ್ಜ್ ಮಿಸ್ಟರ್ ಜಸ್ಟಿಸ್ ಪಿ.ಸಿ.ಚಟರ್‌ಜೀ ಸಾಹಿಬರ ಅಧ್ಯಕ್ಷತೆಯಲ್ಲಿ ಓದಲಾಯಿತು. **'ಪೈಗಾಮೆ ಸುಲ್‌ಹ್'** (ಮೈತ್ರಿ ಸಂದೇಶ) ಎಂಬ ಹೆಸರಿನಲ್ಲಿ ಪ್ರಕಟಿಸಲಾದ ಮತ್ತು ಹಲವು ಭಾಷೆಗಳಲ್ಲಿ ಭಾಷಾಂತರಿಸಲಾದ ಈ ಉಪನ್ಯಾಸದಲ್ಲಿ ಅವರು ಒಂದು ಕಡೆ ಹೀಗೆ ಬರೆಯುತ್ತಾರೆ:

"ಪ್ರಿಯ ಸಹೃದಯರೇ, ಒಂದು ಸಮುದಾಯವು ಅನ್ಯ ಸಮುದಾಯಗಳ ಪ್ರವಾದಿಗಳನ್ನೂ ಮಹಾತ್ಮರನ್ನೂ ನಿಂದಿಸುವುದೂ ಆಕ್ಷೇಪಿಸುವುದೂ ಕಾಲಾಂತರದಲ್ಲಿ ದೇಹಕ್ಕೆ ಮಾತ್ರವಲ್ಲ ಆತ್ಮಕ್ಕೆ ಸಹ ನಾಶವನ್ನುಂಟು ಮಾಡಿ ಧಾರ್ಮಿಕವೂ ಲೌಕಿಕವೂ ಆದ ಜೀವಿತಕ್ಕೇನೇ ಹಾನಿಯನ್ನುಂಟು ಮಾಡುವ ಒಂದು ಭಯಂಕರ ವಿಷವೆಂದು ಧೀರ್ಘಕಾಲದ ಅನುಭವಗಳೂ ವಿವಿಧ ಸಂದರ್ಭಗಳಲ್ಲಿ ನಡೆದ ಪರೀಕ್ಷಾ ಸಂಭವಗಳೂ ನಮಗೆ ಋಜುಪಡಿಸುತ್ತಿವೆ. ಅನ್ಯೋನ್ಯ ಮತಾಚಾರ್ಯರನ್ನು ಅವಹೇಳಿಸುವ ಮತ್ತು ಕುಂದುಕೊರತೆ ಎಣಿಸುವ ದೇಶನಿವಾಸಿಗಳು ಶಾಂತಿಯಿಂದ ನೆಲೆಸಲು ಅಸಾಧ್ಯ. ಒಂದು ಸಮುದಾಯ ಮತ್ತೊಂದು ಸಮುದಾಯದ

ಪ್ರವಾದಿಗಳನ್ನು ಅಥವಾ ಎರಡು ಸಮುದಾಯಗಳು ಅನ್ಯೋನ್ಯ ಪ್ರವಾದಿಗಳನ್ನೂ ಋಷಿಗಳನ್ನೂ ಅವತಾರ ಪುರುಷರನ್ನೂ ಆಕ್ಷೇಪಿಸುವುದಾದರೆ, ದೂಷಿಸುವುದಾದರೆ ಆ ಸಮುದಾಯಗಳೆಡೆಯಲ್ಲಿ ಎಂದಿಗೂ ನೈಜ ಐಕ್ಯ ಮತ್ತು ಮೈತ್ರಿಯೇರ್ಪಡಲಾರದು. ತಾನು ನಂಬಿ ಆದರಿಸುವ ಪ್ರವಾದಿ ಅಥವಾ ಮತಾಚಾರ್ಯರ ಕುರಿತು ಅವಹೇಳನಕಾರಿ ಮಾತು ಕೇಳಿ ಯಾರಿಗೆ ತಾನೇ ರೋಷ ಉಂಟಾಗಲಾರದು? .......... ನೀವು ವೇದವನ್ನೂ ವೇದ ಋಷಿಗಳನ್ನೂ ಸತ್ಯ ಹೃದಯದೊಂದಿಗೆ ದೇವನ ಕಡೆಯಿಂದ ಬಂದವರೆಂದು ಅಂಗೀಕರಿಸುವಾಗ, ಹಾಗೆಯೇ ಹಿಂದೂಗಳು ಅವರ ಸಂಕುಚಿತ ಮನೋಭಾವಗಳನ್ನು ಬಿಟ್ಟು ನಮ್ಮ ಪ್ರವಾದಿಶ್ರೇಷ್ಠರಾದ ಹಝ್ರತ್ ಮುಹಮ್ಮದ್ ಮುಸ್ತಫಾರವರ[ಸ] ಪ್ರವಾದಿತ್ವಕ್ಕೆ ದೃಢೀಕರಣ ನೀಡುವಾಗ ಮಾತ್ರ ಯಥಾರ್ಥವಾದ ಶುದ್ಧಿ ಎಂದು ಹೇಳಬಹುದಾದ ಹೃದಯ ಶುದ್ಧಿ ಉಂಟಾಗುವುದು. ನಿಮ್ಮಲ್ಲಿ ಮತ್ತು ಹಿಂದೂ ಸಹೋದರರೆಡೆಯಲ್ಲಿ ನೈಜ ಮೈತ್ರಿ ಉಂಟಾಗಲು ಏಕಮಾತ್ರ ತತ್ವ ಇದೇ ಆಗಿದೆ. ಈ ನೀರು ಮಾತ್ರವೇ ಮಾಲಿನ್ಯವನ್ನು ಹೋಗಲಾಡಿಸುವುದು."(ಮೈತ್ರಿ ಸಂದೇಶ)

ಅಹ್ಮದಿಯಾ ಜಮಾಅತಿನ ಸ್ಥಾಪಕ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್‌ರ[ಅ] ಮಹತ್ತರವಾದ ಉಪನ್ಯಾಸವನ್ನು ವಿವೇಕಿಗಳು ಕೇಳಿದಾಗ ಅವರು ಅದನ್ನು ಪ್ರಶಂಸಿಸಿದರು. ಅವುಗಳನ್ನು ಉಲ್ಲೇಖಿಸುತ್ತಾ ಆ ಕಾಲದ ಪತ್ರಿಕೆಗಳು ಬರೆದುದನ್ನು ನಿಮ್ಮ ಮುಂದಿರಿಸಲಾಗುತ್ತಿದೆ:

"HINDU PATRIOT, MADRAS" ಎಂಬ ಪತ್ರಿಕೆ ಬರೆಯಿತು: "ಖಾದಿಯಾನಿನ ಆ ಮಹಾತ್ಮರ ಅಂತಿಮ ಸಂದೇಶದಿಂದ ಪ್ರಕಟವಾಗುತ್ತಿರುವ ಮಹತ್ತಾದ ಶಕ್ತಿ ಮತ್ತು ಉನ್ನತ ಮಟ್ಟದ ಸಹಾನುಭೂತಿಯಿಂದ ನಿಶ್ಚಯವಾಗಿಯೂ ಒಂದು ಪ್ರತ್ಯೇಕವಾದ ವಿಶೇಷತೆಯೊಂದಿಗೆ ಅವರು ಮಹಾನ್ ವ್ಯಕ್ತಿಯೆಂದು ಸಾಬೀತಾಗುತ್ತದೆ. ಇವರಂತಹ ಮಹಾನ್ ವ್ಯಕ್ತಿಯಿಂದ ಬಂದ ಇಂತಹ ಮನವಿಯನ್ನು ವ್ಯರ್ಥಗೊಳಿಸಬಾರದು. ನಿರ್ದೇಶಿಸಲ್ಪಟ್ಟ ಮೈತ್ರಿಯನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸಬೇಕು ಎಂಬ ಉದ್ದೇಶವನ್ನು ಪ್ರತಿಯೊಬ್ಬ ದೇಶಪ್ರೇಮಿಯಾದ ಭಾರತೀಯನು ಹೊಂದಿರಬೇಕು." (ತಾರೀಖೆ ಅಹ್ಮದಯ್ಯತ್– ಭಾಗ 2 ಪುಟ 536)

ಇದೇ ರೀತಿ 'FRONTIER MAIL' ಎಂಬ ವಾರ್ತಾಪತ್ರಿಕೆ ಅದರ ಡಿಸೆಂಬರ್22, 1948ರ ಸಂಚಿಕೆಯಲ್ಲಿ ಮಿಸ್ಟರ್ ಬ್ರಹ್ಮದತ್ ಡೆಹ್ರಡೂನ್‌ರ ಹೇಳಿಕೆಯನ್ನು ಹೀಗೆ ಪ್ರಕಟಿಸಿದೆ:

"ನಲ್ವತ್ತು ವರ್ಷಗಳ ಮುಂಚೆ, ಅಂದರೆ ಮಹಾತ್ಮ ಗಾಂಧಿ ಹಿಂದೂಸ್ಥಾನದ ರಾಜಕೀಯ ದಿಗಂತದಲ್ಲಿ ಉದಯಿಸಿರದ ಕಾಲಘಟ್ಟ, ಆಗ ಮಿರ್ಝಾ ಗುಲಾಂ ಅಹ್ಮದ್[ಅ] 1899ರಲ್ಲಿ ಮಸೀಹಿಯತ್‌ನ ವಾದ ಮಾಡಿ ತನ್ನ ನಿರ್ದೇಶಗಳನ್ನು ತಮ್ಮ ಪತ್ರಿಕೆಯಲ್ಲಿ ಮೈತ್ರಿ ಸಂದೇಶ ರೂಪದಲ್ಲಿ ಪ್ರಕಟಿಸಿದರು. ಅವುಗಳ ಪ್ರಕಾರ ನಡೆದರೆ ದೇಶದ ವಿವಿಧ ಸಮುದಾಯಗಳ ನಡುವೆ ಒಗ್ಗಟ್ಟು, ಐಕ್ಯ, ಪ್ರೇಮ ಮತ್ತು ಸಹಬಾಳ್ವೆ ಉಂಟಾಗುವುದು. ಜನರಲ್ಲಿ ಹೃದಯ ವೈಶಾಲ್ಯ, ಸಾಹೋದರ್ಯ ಮತ್ತು ಪ್ರೀತಿಯ ಚೈತನ್ಯ ಉಂಟಾಗಬೇಕೆಂದು ಅವರು ಅತಿಯಾಗಿ ಆಶಿಸಿದ್ದರು. ನಿಸ್ಸಂಶಯವಾಗಿಯೂ ಅವರ ವ್ಯಕ್ತಿತ್ವ ಪ್ರಶಂಸನೀಯ ಮತ್ತು ಗಣನೀಯವಾದುದಾಗಿದೆ. ಏಕೆಂದರೆ ಅವರ ದೃಷ್ಟಿ ದೂರದ ಭವಿಷ್ಯತ್ ಕಾಲದ ದಟ್ಟ ಮರೆಯನ್ನು ಹಾದು ಹೋಯಿತು ಮತ್ತು ಸರಿಯಾದ ಕಡೆಗೆ ಮಾರ್ಗದರ್ಶನ ಮಾಡಿತು." (ತಾರೀಖೆ ಅಹ್ಮದಿಯ್ಯತ್–ಭಾಗ–2– ಪುಟ – 536)

ಪ್ರತಿಯೊಂದು ಧರ್ಮದ ನಾಯಕರು ಅನ್ಯ ಧರ್ಮದ ಕೊರತೆಗಳನ್ನು ಮತ್ತು ಕೆಡುಕುಗಳನ್ನು ಹೊರತರಲು ಪ್ರಯತ್ನಿಸುವ ಬದಲಾಗಿ ಲೇಖನಗಳಲ್ಲಿ ಮತ್ತು ಭಾಷಣಗಳಲ್ಲಿ ತಮ್ಮ ತಮ್ಮ ಧರ್ಮದ ವೈಶಿಷ್ಟ್ಯಗಳನ್ನು ವ್ಯಕ್ತಮಾಡಲಿ ಎಂದು ಹಝ್ರತ್ ಮಿರ್ಝಾ ಗುಲಾಂ ಅಹ್ಮದ್‌ರು[ಅ] ಉಪದೇಶಿಸಿದರು.

ಈ ಉದ್ದೇಶಕ್ಕಾಗಿ ಅಹ್ಮದಿಯಾ ಜಮಾಅತಿನ 2ನೇ ಖಲೀಫ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್‌ರು[ರ] 1928ರಿಂದ ಸರ್ವ ಧರ್ಮ ಸಮ್ಮೇಳನದ ಪರಂಪರೆ ಪ್ರಾರಂಭಿಸಿದರು. ಹೀಗೆ 1928ರಿಂದ ಪ್ರತಿ ವರ್ಷ ಜಾಗತಿಕ ಅಹ್ಮದಿಯಾ ಜಮಾಅತ್ ಲೋಕದಲ್ಲೆಲ್ಲ ಧರ್ಮ ಸ್ಥಾಪಕರ ಗೌರವಾದರಕ್ಕಾಗಿ ಸರ್ವಧರ್ಮ ಸಮ್ಮೇಳನವನ್ನು ಸಂಘಟಿಸುತ್ತಿದೆ. ಅವುಗಳಲ್ಲಿ ಪ್ರತಿಯೊಂದು ಧರ್ಮದ ನೇತಾರರು ತಮ್ಮ ತಮ್ಮ

ಧರ್ಮದ ಸ್ಥಾಪಕರ ಮತ್ತು ಮಹಾತ್ಮರ ಪರಿಶುದ್ಧ ಜೀವನ ಚರಿತ್ರೆ ಹಾಗೂ ಅವರ ಅಧ್ಯಾಪನೆ ಬಗ್ಗೆ ಪ್ರಸ್ತಾಪಿಸುತ್ತಾರೆ. ಈ ರೀತಿಯಲ್ಲಿ ಒಂದೇ ವೇದಿಕೆಯಲ್ಲಿ ವಿವಿಧ ಹೂವುಗಳ ಒಂದು ಪುಷ್ಪಗುಚ್ಛ ಅಲಂಕರಿಸಲ್ಪಡುತ್ತದೆ. ಈಗ ಅಹ್ಮದಿಯಾ ಜಮಾಅತಿನ ಈಗಿನ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್‌ರು[ಅಯ್ಯದಹುಲ್ಲಾಹ್] ಪವಿತ್ರ ಖುರ್‌ಆನಿನ ಈ ಸುವರ್ಣ ಅಧ್ಯಾಪನೆಗಳನ್ನು ಯುರೋಪ್, ಅಮೇರಿಕದ ಸಂಸದ್ ಭವನಗಳಲ್ಲಿ ಸಹ ತಲುಪಿಸುವ ಪರಂಪರೆ ಪ್ರಾರಂಭಿಸಿದ್ದಾರೆ.

ಅವರ ಈ ಅಮೂಲ್ಯವಾದ ಚಿಂತನೆಗಳು ಅವರ **'ಜಾಗತಿಕ ಬಿಕ್ಕಟ್ಟು ಮತ್ತು ಶಾಂತಿ ಮಾರ್ಗ'** ಎಂಬ ಪುಸ್ತಕದ ಮೂಲಕ ಪ್ರತಿಯೊಂದು ವ್ಯಕ್ತಿಗೂ ವ್ಯಕ್ತವಾಗುವುದು. ಅದನ್ನು ಅಧ್ಯಯನ ಮಾಡುವುದು ಮತ್ತು ಕಾರ್ಯರೂಪಕ್ಕೆ ತರುವುದು ಲೋಕದಲ್ಲಿ ಶಾಂತಿ ಸ್ಥಾಪಿಸಲು ಅತ್ಯಗತ್ಯವಾದುದಾಗಿದೆ.

ನಾವೆಲ್ಲರೂ ಪರಸ್ಪರ ಧರ್ಮ ಸ್ಥಾಪಕರನ್ನು ಗೌರವಿಸುವವರಾಗಿ, ನಮ್ಮ ನಾಡು ಶಾಂತಿ ಸಂಧಾನದ ತೊಟ್ಟಿಲಾಗಿ, ಯಥಾರ್ಥ ಸಂತೋಷ ಮತ್ತು ಸುಖ ಲಭಿಸುವಂತೆ ಅಲ್ಲಾಹನು ಮಾಡಲಿ – ಆಮೀನ್.


Loyalty Peace
Freedom Respect
Equality

**Contact Details:**
**Ahmadiyya Muslim Jama'at India**
**Head Office**
**Nazarat Dawat-e-Ilallah**
**Qadian, Dist-Gurdaspur, Punjab - 143516**

**Branch Office**

**Darussalam, Near Railway level crossing, Pandeshwar, Mangalore - 575001**

**No.1,3rd Cross, Wilson Garden, Bangalore - 560027**

**www.alislam.org**
**www.ahmadiyyamuslimjamaat.in**
Feedback **www.ahmadiyyamuslimjamaat.in/feedback**
National Toll Free Number: **1800 3010 2131**
**MUSLIM TELEVISION AHMADIYYA INTERNATIONAL**
**www.mta.tv**
Satellite: Asia sat 7s, Degree: 105.5 East, Frequency 3760 Symbol Rate: 26000 FEC: Auto / C.Band 4 Feet Dish Antenna
EutelsatE70B,Degree:70° East,Frequency:11211,SymbolRate:5111,Polarization-HorizontalQPSK-1/2,KU Band 2 feet Dish Antenna

# ತನ್ನ ಮರಣದ ಬಗ್ಗೆ ಹಝ್ರತ್ ಈಸಾ ಮಸೀಹರ(ಅ) ಸ್ವತಃ ಹೇಳಿಕೆ

ಹಝ್ರತ್ ಈಸಾ ಮಸೀಹ್(ಅ) ಮೃತರಾಗಿರುವರೆಂದು ಮೊದಲು ಉಲ್ಲೇಖಿಸಿದ ಪವಿತ್ರ ಖುರ್‌ಆನ್ ವಚನಗಳಿಂದ ಸ್ಪಷ್ಟವಾಗಿ ತಿಳಿಯುತ್ತದೆ. ಇದರ ಬಗ್ಗೆ ಅಲ್ಲಾಹನು ಸ್ವತಃ ನೀಡಿದ ಸಾಕ್ಷ್ಯ ಮುಂಚೆ ಉಲ್ಲೇಖಿಸಲಾಗಿದೆ. ವಿರೋಧದ ಪಟ್ಟಿಯನ್ನು ಬಿಚ್ಚಿ ಕಣ್ಣು ತೆರೆದು ನೋಡುವುದಾದರೆ ಹಝ್ರತ್ ಈಸಾ ಮಸೀಹ್(ಅ) ಮೃತರಾದುದು ಸ್ಪಷ್ಟವಾಗಿ ಮನವರಿಕೆಯಾಗುತ್ತದೆ. ಯಾವುದೇ ಸಂಶಯವು ಬಾಕಿಯಾಗಿ ಉಳಿಯಲಾರದು. ಆದರೆ ಯಾರು ಹೀಗೆ ನಂಬಬಾರದೆಂದು ನಿರ್ಧರಿಸಿರುವರೋ ಅವರು ಸತ್ಯವನ್ನು ನಂಬಲಾರರು. ಹಝ್ರತ್ ಈಸಾ ಮಸೀಹ್(ಅ) ಸ್ವತಃ ತಾನು ಮೃತನಾಗಿರುವುದಾಗಿ ಹೇಳಿದ ಸಾಕ್ಷ್ಯವನ್ನು ನಿಮ್ಮ ಮುಂದೆ ಇರಿಸುತ್ತೇನೆ. ಅಲ್ಲಾಹನು ನೀಡಿದ ಸಾಕ್ಷ್ಯದಿಂದ ಪ್ರಾಯಶಃ ಪೂರ್ಣ ಸಮಾಧಾನವಾಗಿರದಿದ್ದರೆ ಹಝ್ರತ್ ಈಸಾ ಮಸೀಹ್(ಅ) ಸ್ವತಃ ನೀಡಿದ ಸಾಕ್ಷ್ಯ ದಾರಿತಪ್ಪಿದ ಯಾರಿಗಾದರೂ ಮಾರ್ಗದರ್ಶನವೂ ಸಮಾಧಾನವೂ ನೀಡುವಂತಾಗಲಿ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

(ಪುನರುತ್ಥಾನ ದಿನದಂದು) ಅಲ್ಲಾಹನು: "ಎಲೈ ಮರ್ಯಮ್ ಪುತ್ರ ಈಸಾ, 'ನನ್ನನ್ನೂ ನನ್ನ ತಾಯಿಯನ್ನೂ ಅಲ್ಲಾಹನ ಹೊರತಾಗಿ ಇಬ್ಬರು ದೇವರುಗಳನ್ನಾಗಿ ಅಂಗೀಕರಿಸಿರಿ' ಎಂದು ನೀನು ಜನರೊಡನೆ ಹೇಳಿರುವಿಯಾ?" ಎಂದು ಕೇಳುವನು. ಆಗ ಅವರು (ಈಸಾ) ಹೇಳುವರು: "ನೀನು ಪರಿಶುದ್ಧನು. ನನಗೆ ಅಧಿಕಾರವಿಲ್ಲದುದನ್ನು ಹೇಳುವುದು ನನಗೆ ಉಚಿತವಲ್ಲ. ನಾನು ಹಾಗೇನಾದರೂ ಹೇಳಿದ್ದರೆ ನೀನು ಅದನ್ನು ಖಂಡಿತವಾಗಿಯೂ ತಿಳಿಯುತ್ತಿದ್ದೆ. ನನ್ನ ಮನಸ್ಸಿನಲ್ಲಿರುವುದನ್ನು ನೀನು ಬಲ್ಲೆ. ಆದರೆ ನಿನ್ನ ಮನಸ್ಸಿನಲ್ಲಿರುವುದನ್ನು ನಾನು ತಿಳಿಯಲಾರೆ. ನಿಶ್ಚಯವಾಗಿಯೂ ನೀನು ಅಗೋಚರ ಸಂಗತಿಗಳನ್ನು ತಿಳಿಯುವವನಾಗಿರುವೆ.

"ನೀನು ಆಜ್ಞಾಪಿಸಿದ ಪ್ರಕಾರವಲ್ಲದೆ, ಅಂದರೆ, 'ನನ್ನ ಪ್ರಭುವೂ ನಿಮ್ಮ ಪ್ರಭುವೂ ಆದ ಅಲ್ಲಾಹನನ್ನು ಮಾತ್ರ ಆರಾಧಿಸಿರಿ' ಎಂದು ಹೊರತು ಬೇರೇನೂ ನಾನು ಅವರೊಡನೆ ಹೇಳಿಲ್ಲ. ನಾನು ಅವರೊಂದಿಗೆ ಇದ್ದ ಕಾಲದ ವರೆಗೆ ನಾನು ಅವರಿಗೆ ಸಾಕ್ಷಿಯಾಗಿದ್ದೆ. ಆದರೆ ನೀನು ನನ್ನನ್ನು ಮೃತಪಡಿಸಿದಾಗ ಅವರ ಮೇಲ್ನೋಟಗಾರನು ನೀನೇ ಆದೆ. ನೀನು ಸರ್ವಸಂಗತಿಗಳಿಗೂ ಸಾಕ್ಷಿಯಾಗಿರುವೆ." (5:117,118).

ಪವಿತ್ರ ಖುರ್‌ಆನಿನ ಈ ವಚನ ಹಝ್ರತ್ ಈಸಾ ಮಸೀಹ್(ಅ) ಮೃತರಾಗಿರುವರೆಂಬ ಬಗ್ಗೆ ಸಾಕ್ಷ್ಯಾಧಾರದ ಒಂದು ಸೂರ್ಯನನ್ನು ಬೆಳಗಿಸುತ್ತದೆ. "ನಾನು ಅವರೊಂದಿಗೆ ಇದ್ದ ಕಾಲದವರೆಗೆ ನಾನು ಅವರಿಗೆ ಸಾಕ್ಷಿಯಾಗಿದ್ದೆ. ಆದರೆ ನೀನು ನನ್ನನ್ನು ಮೃತಪಡಿಸಿದಾಗ ಅವರ ಮೇಲ್ನೋಟಗಾರ ನೀನೇ ಆದೆ"– ಈ ಮಾತಿನಲ್ಲಿ ಹಝ್ರತ್ ಈಸಾ ಮಸೀಹ್(ಅ) ಕೇವಲ ಎರಡು ಕಾಲಘಟ್ಟಗಳ ಬಗ್ಗೆ ಮಾತ್ರ ಪ್ರಸ್ತಾಪಿಸುತ್ತಾರೆ. ಮೊದಲನೆಯದು, ಅವರು ತನ್ನ ಶಿಷ್ಯರೊಂದಿಗೆ ಇದ್ದ ಕಾಲ. ಇನ್ನೊಂದು, ಅವರು ಮೃತರಾದ ಕಾಲ. ಈ ಎರಡು ಕಾಲಗಳು ಒಂದು ಇನ್ನೊಂದರೊಂದಿಗೆ ಜೊತೆಗೂಡಿರುವುದಾಗಿದೆ. ಹಝ್ರತ್ ಈಸಾ ಮಸೀಹ್(ಅ) ಆಕಾಶವನ್ನೇರಿ ಹೋಗಿದ್ದರೆ ಅವರು, "ನನ್ನನ್ನು ಜೀವಂತವಾಗಿ ಆಕಾಶಕ್ಕೆ ನೀನು ಎತ್ತಿಕೊಂಡಾಗ" ಎಂದು ಹೇಳಬೇಕಾಗಿತ್ತು. ಆದರೆ ಹಝ್ರತ್ ಈಸಾ ಮಸೀಹ್(ಅ) ಹಾಗೆ ಹೇಳಲಿಲ್ಲ. ಹಝ್ರತ್ ಈಸಾ ಮಸೀಹ್(ಅ) ತಾನು ಶಿಷ್ಯರೊಂದಿಗೆ ಇದ್ದ ಮೊದಲ ಕಾಲದ ನಂತರ ತಾನು ಮೃತನಾದ ಎರಡನೆಯ ಕಾಲದ ಬಗ್ಗೆ ಮಾತ್ರ ಪ್ರಸ್ತಾಪಿಸಿದ್ದಾರೆ. ಆದುದರಿಂದ ಹಝ್ರತ್ ಈಸಾ ಮಸೀಹ್(ಅ) ಆಕಾಶಕ್ಕೆತ್ತಲ್ಪಡಲಿಲ್ಲವೆಂದು ಸಾಬೀತಾಗುತ್ತದೆ. ಇತರ ಮನುಷ್ಯರು ಮೃತರಾಗುವ ರೀತಿಯಲ್ಲಿಯೇ ಅವರು ಸಹ ಮೃತರಾಗಿರುವರು. ಈ ವಚನದ ಶಬ್ದಗಳು ಸ್ಪಷ್ಟವಾಗಿ ತಿಳಿಸುವುದೇನೆಂದರೆ, ಹಝ್ರತ್ ಈಸಾ ಮಸೀಹ್(ಅ) ತನ್ನ ಶಿಷ್ಯರೊಂದಿಗೆ ಇದ್ದ ಕಾಲವನ್ನು ಮುಕ್ತಾಯಗೊಳಿಸಿ ಹೊಸ ಕಾಲಘಟ್ಟ ಪ್ರಾರಂಭವಾಗುವುದು ಅವರು ಮೃತನಾದ ನಂತರವಾಗಿವೆ. ಹಝ್ರತ್ ಈಸಾ ಮಸೀಹ್ ತಾನು ಶಿಷ್ಯರೊಂದಿಗೆ ಇದ್ದ ಕಾಲವನ್ನು ಮುಕ್ತಾಯಗೊಳಿಸಿದುದು ತಾನು ಆಕಾಶಕ್ಕೇರಿ ಹೋದುದಾಗಿದ್ದರೆ ಅವರು ಹೇಳಿದ ಈ ಉತ್ತರ ತಪ್ಪಾಗುವುದು.

ಈ ವಚನ ಹಝ್ರತ್ ಈಸಾ ಮಸೀಹ್(ಅ) ಮೃತರಾದುದು ಯಾವಾಗ ಎಂದು ಸಹ ತಿಳಿಸುತ್ತದೆ. ಅವರು, "ನನ್ನ ಪ್ರಭುವೂ ನಿಮ್ಮ ಪ್ರಭುವೂ ಆದ ಅಲ್ಲಾಹನನ್ನು ಮಾತ್ರ ಆರಾಧಿಸಿರಿ" ಎಂದು ಮಾತ್ರ ತನ್ನ ಶಿಷ್ಯರೊಂದಿಗೆ ಹೇಳಿದ್ದರೆಂದೂ "ನಾನು ಅವರೊಂದಿಗೆ ಇದ್ದ ಕಾಲದವರೆಗೆ ನಾನು ಅವರಿಗೆ ಸಾಕ್ಷಿಯಾಗಿದ್ದೆ" ಎಂದೂ ಹೇಳುತ್ತಾರೆ. ಇದರಿಂದ ತಿಳಿಯುವುದೇನೆಂದರೆ, "ನಾನು ಅವರೊಂದಿಗೆ ಇದ್ದಾಗ ಅವರು ದಾರಿ ತಪ್ಪಿ ಹೋಗದಂತೆ ಮಾಡಿದೆನು" ಎಂದು ಹೇಳಿದುದರಿಂದ ಅವರು ತನ್ನ ಅನುಯಾಯಿಗಳು ದಾರಿ ತಪ್ಪಿಹೋದ ಬಗ್ಗೆ ತನಗೆ ತಿಳಿದಿಲ್ಲ ಎಂದು ಸೂಚಿಸುತ್ತಾರೆ. ಇದರ ಅರ್ಥ, ಹಝ್ರತ್ ಈಸಾ ಮಸೀಹ್(ಅ) ಮೃತರಾದ ನಂತರ ಅವರ ಅನುಯಾಯಿಗಳು ದಾರಿ ತಪ್ಪಿ ಹೋದರೆಂದಾಗಿದೆ.

ನಮಗೆ ಪವಿತ್ರ ಖುರ್‌ಆನ್‌ನಿಂದ ಹೀಗೆ ತಿಳಿಯುತ್ತದೆ: ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲದಲ್ಲಿ ಸಹ ಹಝ್ರತ್ ಈಸಾ ಮಸೀಹರ(ಅ) ಅನುಯಾಯಿಗಳು ನೇರವಾರ್ಗದಿಂದ ದೂರ ಸರಿದು ದಾರಿತಪ್ಪಿದವರಾಗಿದ್ದರು. ಪವಿತ್ರ ಖುರ್‌ಆನಿನ ಈ ವಚನ ನೋಡಿರಿ: **ಲಖದ್ ಕಫರಲ್ಲದೀನ ಖಾಲೂ ಇನ್ನಲಾಹ ಸಾಲಿಸು ಸಲಾಸತಿನ್** – 'ಖಂಡಿತವಾಗಿಯೂ ಅಲ್ಲಾಹನು ಮೂವರಲ್ಲಿ ಒಬ್ಬನು' ಎಂದು ಹೇಳುವವರು ನಿಸ್ಸಂದೇಹವಾಗಿಯೂ ಅವಿಶ್ವಾಸಿಗಳಾಗಿದ್ದಾರೆ. (5:74).

ಇದರಿಂದ ತಿಳಿಯುವುದೇನೆಂದರೆ, ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲಕ್ಕಿಂತ ಮೊದಲೇ ಹಝ್ರತ್ ಈಸಾ ಮಸೀಹ್(ಅ) ನಿಧನ ಹೊಂದಿರುವರು.

ನೀವು ಹಝ್ರತ್ ಈಸಾ ಮಸೀಹ್[ಅ] ಅಲ್ಲಾಹನೊಂದಿಗೆ ಹೇಳಿದ ಮಾತುಗಳ ಬಗ್ಗೆ ಚೆನ್ನಾಗಿ ಯೋಚಿಸಿರಿ. ಅವರ ಮಾತು ಸ್ಪಷ್ಟವಾಗಿ ಸಾಕ್ಷ್ಯ ನೀಡುವುದೇನೆಂದರೆ, ಅವರ ಅನುಯಾಯಿಗಳು ಅವರು ಮೃತರಾದ ನಂತರ ಬಿಗಡಾಯಿಸಿದರು. ಇಲ್ಲಿ ಪ್ರಶ್ನೆ ಏನೆಂದರೆ ಹಝ್ರತ್ ಈಸಾ ಮಸೀಹರ[ಅ] ಅನುಯಾಯಿಗಳು ಬಿಗಡಾಯಿಸಿರುವರೋ ಇಲ್ಲವೋ ಎಂದಾಗಿದೆ. ಅವರು ಬಿಗಡಾಯಿಸಿಲ್ಲವಾದರೆ ಪ್ರಾಯಶಃ ಹಝ್ರತ್ ಈಸಾ ಮಸೀಹ್[ಅ] ಜೀವದಿಂದಿರಬಹುದು. ಆದರೆ ಅವರು ಖಂಡಿತವಾಗಿಯೂ ಬಿಗಡಾಯಿಸಿರುವುದರಿಂದ ಹಝ್ರತ್ ಈಸಾ ಮಸೀಹ್[ಅ] ಮೃತರಾಗಿರುವರೆಂದು ನಂಬದೆ ಇರಲು ಸಾಧ್ಯವೇ ಇಲ್ಲ.

ಹಝ್ರತ್ ಈಸಾ ಮಸೀಹ್[ಅ] ಈಗ ಸಹ ಆಕಾಶದಲ್ಲಿ ಜೀವಿಸಿರುವರೆಂದು ನಂಬುವುದಾದರೆ ಮತ್ತು ಅವರು ಲೋಕದ ಅಂತಿಮ ಕಾಲಘಟ್ಟದಲ್ಲಿ ಇಳಿದು ಬರುವರೆಂದೂ ನಂಬುವುದಾದರೆ ಅದರೊಂದಿಗೆ ಹೀಗೆ ಸಹ ನಂಬಬೇಕಾಗುತ್ತದೆ: ತನ್ನ ಅನುಯಾಯಿಗಳು ದಾರಿತಪ್ಪಿದ ಬಗ್ಗೆ ಹಝ್ರತ್ ಈಸಾ ಮಸೀಹರಿಗೆ ಖಿಯಾಮತ್‌ಗೆ ಮೊದಲೇ ತಿಳಿದಿರುವುದು. ತನ್ನ ಸಮುದಾಯ ತನ್ನನ್ನು ದೇವನನ್ನಾಗಿ ಮಾಡಿಕೊಂಡಿದ್ದು ತಿಳಿಯುವುದು. ಹೀಗಿರುವಾಗ ಅವರು ಅಲ್ಲಾಹನೊಂದಿಗೆ ಅದರ ಬಗ್ಗೆ ನನಗೆ ತಿಳಿದಿಲ್ಲ ಎಂದು ಹೇಳುವುದಾದರೂ ಹೇಗೆ? ಅವರು ತಿಳಿದೂ ತಿಳಿದೂ ಸುಳ್ಳು ಹೇಳಿದಂತೆ ಆಗುವುದು. (ನಊದುಬಿಲ್ಲಾಹ್) ಒಬ್ಬ ಅತ್ಯಂತ ಕೆಟ್ಟ ಮನುಷ್ಯ ಕೂಡ ಅಲ್ಲಾಹನ ಮುಂದೆ ಇಂತಹ ಸಂಪೂರ್ಣ ಸುಳ್ಳು ಹೇಳಲು ಧೈರ್ಯಗೊಳ್ಳಲಾರ. ಹೀಗಿರುವಾಗ ಅಲ್ಲಾಹನ ಪ್ರಿಯ ದಾಸನೂ ಸಂದೇಶವಾಹಕನೂ ಆಗಿರುವ ಹಝ್ರತ್ ಈಸಾ ಮಸೀಹ್[ಅ] ಇಂತಹ ಸ್ಪಷ್ಟವಾದ ಸುಳ್ಳು ಹೇಗೆ ತಾನೆ ಹೇಳಲು ಸಾಧ್ಯ?

**ಫಫಹಿಮ್ ವ ತದಬ್ಬರ್ ವಲಾ ತಕುನ್ ಮಿನಲ್ ಮುಮ್ತರೀನ್** – ನೀವು ಮನವರಿಕೆ ಮಾಡಿಕೊಳ್ಳಿರಿ. ಯೋಚಿಸಿರಿ, ಸಂಶಯ ಪಡುವವರಾಗಬೇಡಿರಿ.

## ಹದೀಸಿನಲ್ಲಿ ಪವಿತ್ರ ಖುರ್‌ಆನಿನ ಈ ವಚನದ ವ್ಯಾಖ್ಯಾನ

ಒಂದು ಹದೀಸು ಈ ವಚನದ ಅರ್ಥವನ್ನು ಹಗಲು ಬೆಳಕಿನಂತೆ ವಿಶದೀಕರಿಸುತ್ತದೆ. ಆ ಹದೀಸು ಹೀಗಿದೆ:

> ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನಾನು ಪುನರುತ್ಥಾನದ ದಿನ ಹೌಝುಲ್ ಕೌಸರ್ ಸಮೀಪ ನಿಂತುಕೊಂಡು ಆ ಪವಿತ್ರ ಕಾರಂಜಿಯ ನೀರನ್ನು ನನ್ನ ಅನುಯಾಯಿಗಳಿಗೆ ಹಂಚುತ್ತಾ ಇರುವಾಗ ಅಚಾನಕವಾಗಿ ಜನರ ಒಂದು ಗುಂಪು ನನ್ನ ಮುಂದೆ ಬರುವುದು. ಅವರನ್ನು ದೇವದೂತರು ಬೇರೆ ಕಡೆಗೆ ತಳ್ಳುತ್ತಾ ಹೋಗುವರು. ಆಗ ನಾನು ಉಚ್ಚಸ್ವರದಲ್ಲಿ ಹೇಳುವೆನು: "ಅವರು ನನ್ನ ಶಿಷ್ಯರು, ಅವರು ನನ್ನ ಶಿಷ್ಯರು." ಆಗ ದೇವದೂತರು ಹೇಳುವರು: ನಿಮ್ಮ ನಂತರ ಈ ಜನರು ಏನೆಲ್ಲ ಮಾಡಿದರೆಂದು ನಿಮಗೆ ತಿಳಿದಿಲ್ಲ. ಅವರು ತಮ್ಮ ಹಿಮ್ಮಡಿಗಳ ಕಡೆಗೆ ತಿರುಗಿದವರಾಗಿದ್ದರು. ಆಗ ನಾನು ಅಲ್ಲಾಹನ ಸಾತ್ವಿಕ ದಾಸನಾದ ಈಸಬ್ನು ಮರ್‌ಯಮ್ ಹೇಳಿದ ಮಾತುಗಳನ್ನು ಹೇಳುವೆನು: ನಾನು ಅವರೊಂದಿಗೆ ಇದ್ದ ಕಾಲದವರೆಗೆ ನಾನು ಅವರಿಗೆ ಸಾಕ್ಷಿಯಾಗಿದ್ದೆ. ಆದರೆ ನೀನು ನನ್ನನ್ನು ಮೃತಪಡಿಸಿದಾಗ ಅವರ ಮೇಲ್ನೋಟಗಾರನು ನೀನೇ ಆದೆ.

**(ಬುಖಾರಿ ಕಿತಾಬುತ್ತಫ್‌ಸೀರ್).**

ನೀವು ನೋಡಿರಿ ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಹಝ್ರತ್ ಈಸಾ ಮಸೀಹ್[ಅ] ಹೇಳಿದ ಮಾತುಗಳನ್ನೇ ತಾನು ಆಡುವುದಾಗಿ ಹೇಳಿದರು. ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಆಕಾಶಕ್ಕೇರಿಸಲ್ಪಡಲಿಲ್ಲ. ಅವರು ಮೃತರಾಗಿಯೇ ತಮ್ಮ ಅನುಯಾಯಿಗಳಿಂದ ಅಗಲಿ ಹೋದರು. ಇದೇ ಅರ್ಥವನ್ನು ಹಝ್ರತ್ ಈಸಾ ಮಸೀಹರ[ಅ] ಬಗ್ಗೆಯೂ ಹೇಳಬೇಕಾಗಿದೆ. ಇನ್ನೊಂದು ವಿಷಯವನ್ನೂ ಯೋಚಿಸಿರಿ. ಹಝ್ರತ್ ಮುಹಮ್ಮದ್ ಪೈಗಂಬರ್[ಸ] ತನ್ನ ಸ್ಥಿತಿಯನ್ನು ಹಝ್ರತ್ ಈಸಾ ಮಸೀಹರ[ಅ] ಸ್ಥಿತಿಗೆ ಹೋಲುತ್ತದೆ ಎಂದು ಹೇಳಿದರು. ಹಝ್ರತ್ ಪೈಗಂಬರರು[ಸ] ಹೇಳಿದರು: ಹಝ್ರತ್ ಈಸಾ ಮಸೀಹ್[ಅ] ತನ್ನ ಸಮುದಾಯಕ್ಕೆ ಅನಂತರ ಸಂಭವಿಸಿದ ಸ್ಥಿತಿಯ ಬಗ್ಗೆ ತಿಳಿದಿಲ್ಲ ಎಂದು ಹೇಳಿದ ಹಾಗೆ ನಾನು ಸಹ ನನ್ನ ಸಮುದಾಯಕ್ಕೆ ನನ್ನ ನಂತರ ಸಂಭವಿಸಿದ ಸ್ಥಿತಿಯ ಬಗ್ಗೆ ಅಜ್ಞತೆಯನ್ನು ಪ್ರಕಟಿಸುವೆನು. ನಾವು ಇದರ ಮೊದಲು ಬರೆದ ಹಾಗೆ ಹಝ್ರತ್ ಈಸಾ ಮಸೀಹ್[ಅ] ಲೋಕದ ಅಂತಿಮ ಕಾಲಘಟ್ಟದಲ್ಲಿ ಆಕಾಶದಿಂದ ಇಳಿದು ಬರುವರಾದರೆ ಅವರು ತನ್ನ ಸಮುದಾಯ ಬಿಗಡಾಯಿಸಿದ ಬಗ್ಗೆ ಖಿಯಾಮತ್‌ಗೆ ಮೊದಲೇ ತಿಳಿದಿರುತ್ತಾರೆ. ಹೀಗಿರುವಾಗ ಖಿಯಾಮತ್ ದಿನದಂದು ಅಲ್ಲಾಹನೊಂದಿಗೆ, ಅವರ ಬಗ್ಗೆ ತಿಳಿದಿಲ್ಲ ಎಂದು ಹೇಳುವುದು ಎಂತಹ ಸುಳ್ಳು ಎಂದರೆ ಹಝ್ರತ್ ಈಸಾ ಮಸೀಹರ[ಅ] ಅನುಯಾಯಿಗಳಲ್ಲಿ ಯಾರಾದರೊಬ್ಬನು ಆಗ ಎದ್ದು ನಿಂತು "ಹೇ ದೇವಾ, ನಿನ್ನ ಸಂದೇಶವಾಹಕ ಎಂತಹ ಸುಳ್ಳು ಹೇಳುವ ಧೈರ್ಯ ತೋರಿಸಿದ್ದಾನೆಂದರೆ ಅದು ಆಕಾಶ ಮತ್ತು ಭೂಮಿ ಬಿರುಕು ಬೀಳುವಷ್ಟು ಗುರುತರವಾಗಿದೆ. ಅವರು ಲೋಕದ ಅಂತಿಮ ಕಾಲಘಟ್ಟದಲ್ಲಿ ಲೋಕಕ್ಕೆ ಬಂದು ನಾವು ಅವರನ್ನು ದೇವನೆಂದು ಆರಾಧಿಸುವುದನ್ನು ಮತ್ತು ಜನರಿಗೆ ಹೇಳಿಕೊಡುವುದನ್ನು ನೋಡಿದರು. ಆ ಕಾರಣದಿಂದ ನಮ್ಮ ವಿರುದ್ಧ ಯುದ್ಧ ಮಾಡಿದರು. ನಲ್ವತ್ತು ವರ್ಷಗಳ ಕಾಲ ಅವರು ಲೋಕದಲ್ಲಿ ಕೋಲಾಹಲ ಉಂಟುಮಾಡಿದರು. ಅವರ ಮಾತುಗಳನ್ನು ನಿರಾಕರಿಸಿದವರನ್ನು ಹತ್ಯೆಮಾಡಿ ಮುಗಿಸುವ ತನಕ ಅವರು ತನ್ನ ಖಡ್ಗವನ್ನು ಒರೆಯೊಳಗೆ ಇಡಲಿಲ್ಲ. ಆದರೆ ಅವರು ಈಗ ತಮ್ಮ ಅಜ್ಞತೆಯ ಬಗ್ಗೆ ದೇವನೊಂದಿಗೆ ಹೇಳುತ್ತಿದ್ದಾರೆ."

ವಿಷಾದಕರವಾದುದೇನೆಂದರೆ, ಅಹ್ಮದಿಯಾ ಜಮಾಅತಿನ ಸ್ಥಾಪಕರನ್ನು ವಿರೋಧಿಸುವವರು ಎಷ್ಟು ಅಂಧರಾಗಿರುವರೆಂದರೆ ಅಲ್ಲಾಹನ ಒಬ್ಬ ವೈಭವಶಾಲಿ ಪ್ರವಾದಿಯ ಬಗ್ಗೆ ದೋಷಾರೋಪ ಮಾಡಲು ಅವರು ಹಿಂಜರಿಯುವುದಿಲ್ಲ. ಅವರು ಹಝ್ರತ್

ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರನ್ನು ಸತ್ಯವಂತರೆಂದು ಅಂಗೀಕರಿಸಲು ಲಕ್ಷ್ಯ ನೀಡಲಿಲ್ಲ. ಪವಿತ್ರ ಖುರ್‌ಆನ್ ಜನರ ಈ ನಡವಳಿಕೆ ಬಗ್ಗೆ ಎಷ್ಟು ಚೆನ್ನಾಗಿ ಹೀಗೆ ಹೇಳುತ್ತದೆ:

"ಹಾ ಮನುಷ್ಯರ ದುರದೃಷ್ಟವೇ! ಅವರ ಅಪಹಾಸ್ಯಕ್ಕೆ ಗುರಿಯಾಗದ ಯಾವ ಪ್ರವಾದಿಯೂ ಅವರ ಬಳಿಗೆ ಬರುವುದಿಲ್ಲ." (36: 31).

ಹಝ್ರತ್ ಮುಹಮ್ಮದ್ ಪೈಗಂಬರ್[ಸ] **ಫಲಮ್ಮಾ ತವಫ್ಫಯ್‌ತನೀ** (ನೀನು ನನ್ನನ್ನು ಮೃತಪಡಿಸಿದಾಗ) ಎಂಬ ಪದಗಳನ್ನು ತಾನು ಬಳಸುವುದಾಗಿ ಮೇಲೆ ಉಲ್ಲೇಖಿಸಿದ ಹದೀಸಿನಲ್ಲಿ ಹೇಳಿರುವುದರಿಂದ ಹಝ್ರತ್ ಪೈಗಂಬರ್[ಸ] ಈ ಪದಗಳನ್ನು ಮೃತಪಡಿಸುವ ಅರ್ಥದಲ್ಲಿ ಬಳಸಿದ್ದಾರೆಂದು ಸ್ಪಷ್ಟವಾಗುತ್ತದೆ. ಈ ಪದಗಳ ಅರ್ಥ ಆಕಾಶಕ್ಕೆ ಎತ್ತಲ್ಪಡುವುದೆಂದಾಗಿದ್ದರೆ ಹಝ್ರತ್ ಪೈಗಂಬರರು[ಸ] ಈ ಪದಗಳನ್ನು ಖಂಡಿತವಾಗಿಯೂ ಉಪಯೋಗಿಸುತ್ತಿರಲಿಲ್ಲ. ಏಕೆಂದರೆ ಹಝ್ರತ್ ಪೈಗಂಬರರು[ಸ] ಆಕಾಶಕ್ಕೆತ್ತಲ್ಪಡಲಿಲ್ಲ. ಅವರು ಬೇರೆ ಮನುಷ್ಯರ ಹಾಗೆ ಭೂಮಿಯಲ್ಲಿಯೇ ಮೃತರಾದರು.

## ಹಝ್ರತ್ ಈಸಾ ಮಸೀಹ್ ದೇವನೆಂದು ಊಹಿಸಲ್ಪಟ್ಟರೂ ಮೃತ್ಯುವಿನಿಂದ ಮುಕ್ತರಾಗಲಾರರು

ಇದುವರೆಗೆ ಹಝ್ರತ್ ಈಸಾ ಮಸೀಹರನ್ನು[ಅ] ಮನುಷ್ಯನೆಂಬ ನೆಲೆಯಲ್ಲಿ ವಿವರಿಸಲಾಗಿದೆ. ಪವಿತ್ರ ಖುರ್‌ಆನ್ ಸಮಗ್ರ ಗ್ರಂಥವಾಗಿದ್ದು ಒಂದು ವಿಷಯದ ಯಾವುದೇ ಪಾರ್ಶ್ವವನ್ನು ವಿವರಿಸದೆ ಬಿಡುವುದಿಲ್ಲ. ಇಂದು ಲೋಕದ ಬಹಳ ದೊಡ್ಡದಾದೊಂದು ಜನವಿಭಾಗ ಹಝ್ರತ್ ಈಸಾ ಮಸೀಹರನ್ನು[ಅ] ದೇವನೆಂದು ನಂಬುತ್ತದೆ. ಆದುದರಿಂದ ಆ ಗಣನೆಯ ನೆಲೆಯಲ್ಲಿ ಪವಿತ್ರ ಖುರ್‌ಆನ್ ಹಝ್ರತ್ ಈಸಾ ಮಸೀಹರನ್ನು[ಅ] ಮೃತರೆಂದು ಘೋಷಿಸುತ್ತದೆ. ಈ ರೀತಿ ಎಲ್ಲ ರೀತಿಗಳಲ್ಲೂ ಸಾಕ್ಷ್ಯಾಧಾರಗಳು ಪೂರ್ಣವಾಗುತ್ತವೆ. ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ನೋಡಿರಿ:

"ಅಲ್ಲಾಹನನ್ನು ಬಿಟ್ಟು ಅವರು ಯಾರನ್ನು ಕರೆದು ಪ್ರಾರ್ಥಿಸುತ್ತಾರೋ, ಅವರು ಏನನ್ನೂ ಸೃಷ್ಟಿಸಿರುವುದಿಲ್ಲ. ವಾಸ್ತವದಲ್ಲಿ ಅವರೇ ಸೃಷ್ಟಿಸಲ್ಪಟ್ಟವರು. ಅವರು ಮೃತರು; ಜೀವಂತರಲ್ಲ. ತಮ್ಮನ್ನು ಯಾವಾಗ ಎಬ್ಬಿಸಲಾಗುವುದೆಂದು ಕೂಡ ಅವರಿಗೆ ಗೊತ್ತಿಲ್ಲ." (16: 21,22).

ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಜೀವಿತ ಕಾಲದಲ್ಲಿ ದೇವನೆಂದು ಪೂಜಿಸಲ್ಪಡುತ್ತಿದ್ದ ಎಲ್ಲರೂ ಮೃತರಾಗಿದ್ದರೆಂದು ಮೇಲಿನ ವಚನ ಸೂಚಿಸುತ್ತದೆ. ಹಝ್ರತ್ ಈಸಾ ಮಸೀಹ್[ಅ] ಹೀಗೆ ಜನರಿಂದ ದೇವನೆಂದು ಆರಾಧಿಸಲ್ಪಡುವವರಲ್ಲಿ ಒಬ್ಬರಾಗಿದ್ದರು. ಕೆಲವು ಜನರು ಹೀಗೆ ಆಕ್ಷೇಪಿಸುತ್ತಾರೆ: "ಈ ವಚನದಲ್ಲಿ ವಿಗ್ರಹಗಳ ಬಗ್ಗೆ ಹೇಳಲಾಗಿದೆ. ಮನುಷ್ಯರನ್ನು ದೇವನೆಂದು ಆರಾಧಿಸುವ ಬಗ್ಗೆ ಈ ವಚನದಲ್ಲಿ ಹೇಳಿಲ್ಲ." ಈ ಆಕ್ಷೇಪ ಬಹಳ ದೊಡ್ಡ ತಪ್ಪು ಗ್ರಹಿಕೆಯಾಗಿದೆ. ಏಕೆಂದರೆ ಈ ವಚನದಲ್ಲಿ ಅಲ್ಲಾಹನು ಸ್ಪಷ್ಟವಾಗಿ **ವಮಾಯಶ್‌ಅರೂನ ಅಯ್ಯಾನ ಯುಬ್‌ಅಸೂನ್** (ತಮ್ಮನ್ನು ಯಾವಾಗ ಎಬ್ಬಿಸಲಾಗುವುದೆಂದು ಕೂಡ ಅವರಿಗೆ ಗೊತ್ತಿಲ್ಲ) ಎಂದು ಹೇಳಿದ್ದಾನೆ. ಸ್ಪಷ್ಟವಾದ ವಿಷಯವೇನೆಂದರೆ, ವಿಗ್ರಹಗಳು ಎಬ್ಬಿಸಲ್ಪಡಲಾರವು. ಮನುಷ್ಯನನ್ನೇ ಅವನು ಮೃತರಾದ ನಂತರ ಎಬ್ಬಿಸಲಾಗುವುದು. ಇನ್ನೊಂದು ವಿಷಯವೇನೆಂದರೆ, ಈ ವಚನದಲ್ಲಿ "ಅಲ್ಲಧೀನ" ಎಂಬ ಪದ ಬಳಸಲಾಗಿದೆ. ಈ ಪದವನ್ನು ನಿರ್ಜೀವ ವಸ್ತುಗಳ ಬಗ್ಗೆ ಅರಬಿ ವ್ಯಾಕರಣ ನಿಯಮಗಳ ಪ್ರಕಾರ ಬಳಸುವುದಿಲ್ಲ. ಮಾತ್ರವಲ್ಲ, ಜೀವಂತ ಬುದ್ಧಿಯುಳ್ಳವರಿಗೋಸ್ಕರ ಮಾತ್ರ ಬಳಸಲಾಗುತ್ತಿದೆ. ಆದುದರಿಂದ ಮೂರ್ತಿ ಮೊದಲಾದುವುಗಳು ಇದರಲ್ಲಿ ಸೇರುವುದಿಲ್ಲ.

ಆದುದರಿಂದ ಪವಿತ್ರ ಖುರ್‌ಆನಿನ ಮೇಲೆ ಉಲ್ಲೇಖಿಸಿದ ವಚನದಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಕಾಲದಲ್ಲಿ ದೇವನೆಂದು ಪೂಜಿಸಲ್ಪಡುವ ಮನುಷ್ಯರ ಬಗ್ಗೆಯೇ ಪ್ರಸ್ತಾಪಿಸಲಾಗಿದೆ. ಇಂತಹ ಆರಾಧಿಸಲ್ಪಡುವ ಮನುಷ್ಯರಲ್ಲಿ ಹಝ್ರತ್ ಈಸಾ ಮಸೀಹ್[ಅ] ಸಹ ಸೇರಿದ್ದಾರೆ. ಹಝ್ರತ್ ಈಸಾ ಮಸೀಹ್[ಅ] ಹಝ್ರತ್ ಪೈಗಂಬರರ[ಸ] ಜೀವಿತ ಕಾಲಕ್ಕೆ ಇತರ ಪ್ರವಾದಿಗಳಿಗಿಂತ ಹೆಚ್ಚು ಸಮೀಪ ಕಾಲದಲ್ಲಿ ಜನಿಸಿದವರಾಗಿದ್ದರು, ದೇವನೆಂದು ಪೂಜಿಸಲ್ಪಡುವ ಮನುಷ್ಯರಲ್ಲಿ ಅವರು ಹೆಚ್ಚು ಹೆಚ್ಚಾಗಿ ಪೂಜಿಸಲ್ಪಡುವವರಾಗಿದ್ದರು. ದೇವನೆಂದು ಪೂಜಿಸಲ್ಪಡುವ ಮನುಷ್ಯನ ಪಟ್ಟಿಯಲ್ಲಿ ಪ್ರಥಮ ಸ್ಥಾನದಲ್ಲಿ ಹಝ್ರತ್ ಈಸಾ ಮಸೀಹ್[ಅ] ಇದ್ದಾರೆ. ಆದುದರಿಂದ ಯಾರ ಬಗ್ಗೆ ಅಲ್ಲಾಹನು "ಅವರು ಮೃತರು; ಜೀವಂತರಲ್ಲ. ತಮ್ಮನ್ನು ಯಾವಾಗ ಎಬ್ಬಿಸಲಾಗುವುದೆಂದು ಕೂಡ ಅವರಿಗೆ ತಿಳಿದಿಲ್ಲ" ಎಂದು ಹೇಳಿರುವನೋ ಆ ಜನರಲ್ಲಿ ಹಝ್ರತ್ ಈಸಾ ಮಸೀಹ್[ಅ] ವಿಶೇಷವಾಗಿ ಸೇರುತ್ತಾರೆ. ♦

**ಇನ್‌ಸಾನಿಯತ್ ಝಿಂದಾಬಾದ್**

**ಮಾನವೀಯತೆ ಚಿರಕಾಲ ಬಾಳಲಿ**

# ರಮಝಾನ್ ಮತ್ತು ತಖ್ವ (ಭಯ ಭಕ್ತಿ)

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ

**'ಬೈತುಲ್ ಫುತೂಹ್'**ಮಸೀದಿಯಲ್ಲಿ **18-05-2018** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ)**

**ಯಾ ಅಯ್ಯುಹಲ್ಲಧೀನ ಆಮನೂ ಕುತಿಬ ಅಲೈಕುಮುಸ್ಸಿಯಾಮು ಕಮಾ ಕುತಿಬ ಅಲಲ್ಲಧೀನ ಮಿನ್ ಕಬ್‌ಲಿಕುಮ್ ಲಅಲ್ಲಕುಮ್ ತತ್ತಖೂನ್.**

ಎಲೈ ವಿಶ್ವಾಸಿಗಳೇ, ನಿಮ್ಮ ಪೂರ್ವಜರಿಗೆ ವಿಧಿಸಲಾದಂತೆ ನಿಮಗೆ ಸಹ ಉಪವಾಸ ವ್ರತವನ್ನು ವಿಧಿಸಲಾಗಿದೆ – ನೀವು (ನೈತಿಕ ಮತ್ತು ಆಧ್ಯಾತ್ಮಿಕ ನ್ಯೂನತೆಗಳಿಂದ ಸುರಕ್ಷಿತರಾಗುವಂತೆ) ದೋಷಬಾಧೆಯ ಬಗ್ಗೆ ಜಾಗರೂಕರಾಗಲಿಕ್ಕೋಸ್ಕರ. (ಪವಿತ್ರ ಖುರ್‌ಆನ್ 2:184).

ಅಲ್ಲಾಹನ ಅನುಗ್ರಹದಿಂದ ಇನ್ನೊಂದು ರಮಝಾನ್ ತಿಂಗಳನ್ನು ದಾಟಿ ಹೋಗುವ ಭಾಗ್ಯ ನಮಗೆ ಲಭಿಸುತ್ತಿದೆ. ಈ ತಿಂಗಳಲ್ಲಿ ಮುಸ್ಲಿಮರಲ್ಲಿ ಬಹುಸಂಖ್ಯೆಯ ಜನರು ಉಪವಾಸ ವ್ರತ ಅನುಷ್ಠಿಸುವರಲ್ಲದೆ ನಮಾಝ್‌ಗೋಸ್ಕರ ಮತ್ತು ತರಾವೀಹ್‌ಗೋಸ್ಕರ ಮಸ್‌ಜಿದ್‌ಗೆ ಹೋಗುತ್ತಾರೆ. ಅವುಗಳ ಬಗ್ಗೆ ಲಕ್ಷ್ಯ ನೀಡುತ್ತಾರೆ. ನಮ್ಮ ಮಸ್‌ಜಿದ್‌ಗಳಲ್ಲಿಯೂ ಈ ದಿನಗಳಲ್ಲಿ ಸಾಮಾನ್ಯ ದಿನಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಜನರು ಜಮಾಯಿಸುತ್ತಾರೆ. ಕಡ್ಡಾಯವಾಗಿ ಅನುಷ್ಠಿಸಬೇಕಾದ ಉಪವಾಸ ವ್ರತಾಚರಣೆಯ ಉದ್ದೇಶಲಕ್ಷ್ಯ ತಖ್ವ ಆಗಿದೆ. ಇಸ್ಲಾಮ್ ಶಾಶ್ವತ ಧರ್ಮವಾಗಿದೆ. ಅದು ಖಿಯಾಮತ್ ತನಕ ಜಾರಿಯಲ್ಲಿರುವ ಧರ್ಮವಾಗಿದೆ. ಅದರ ಉಪದೇಶಗಳು ಶಾಶ್ವತವಾಗಿವೆ. ಪವಿತ್ರ ಖುರ್‌ಆನ್ ಲೋಕದ ಪ್ರತಿಯೊಂದು ಮೂಲೆಯಲ್ಲಿಯೂ ತನ್ನ ಮೂಲ ರೂಪದಲ್ಲಿ ಸುರಕ್ಷಿತವಾಗಿದೆ. ಅದು ತಖ್ವದ ಪ್ರಕಾರ ನಡೆಯುವವರಿಗೆ ಮಾರ್ಗದರ್ಶನ ನೀಡುತ್ತದೆ. ಆಖಿರ್ ಝಮಾನದಲ್ಲಿ ನಮ್ಮ ಸುಧಾರಣೆಗೆ, ಪವಿತ್ರ ಖುರ್‌ಆನಿನ ಪ್ರಚಾರಕ್ಕೆ ಮತ್ತು ಅದರ ಉಪದೇಶಗಳನ್ನು ಅನುಷ್ಠಾನಕ್ಕೆ ತರಲು ಗಮನ ಹರಿಸಲಿಕ್ಕೋಸ್ಕರ ಮತ್ತು ಮಾರ್ಗ ತೋರಿಸಲಿಕ್ಕೋಸ್ಕರ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕಳುಹಿಸಿದನು ಮತ್ತು ಅವರನ್ನು ನಂಬುವ ಭಾಗ್ಯ ನಮಗೆ ದಯಪಾಲಿಸಿದನು. ಆದುದರಿಂದ ಉಪವಾಸ ಅನುಷ್ಠಾನದ ವಾಸ್ತವಿಕತೆಯನ್ನು ಮನವರಿಕೆ ಮಾಡಿಕೊಂಡು ಅದರ ಉದ್ದೇಶಲಕ್ಷ್ಯವನ್ನು ಗಳಿಸಲು ಪ್ರಯತ್ನ ಮಾಡುವುದು ಅಹ್ಮದಿಯರಾದ ನಮಗಿರುವ ಬಹಳ ದೊಡ್ಡ ಹೊಣೆಗಾರಿಕೆಯಾಗಿದೆ. ರಮಝಾನಿನ ಉದ್ದೇಶಲಕ್ಷ್ಯ ನಮ್ಮಲ್ಲಿ ತಖ್ವವನ್ನು ಹುಟ್ಟಿಸುವುದು ಮತ್ತು ತಖ್ವದಲ್ಲಿ ಅಭಿವೃದ್ಧಿ ಗಳಿಸುವುದಾಗಿದೆ. ಆದುದರಿಂದ ನಾವು ರಮಝಾನ್‌ನಲ್ಲಿ ತಖ್ವವನ್ನು ಗಳಿಸಲು ಪ್ರಯತ್ನ ಮಾಡುತ್ತೇವೆ ಅಥವಾ ಪ್ರಯತ್ನ ಮಾಡುವವರಾಗುವಾಗ ನಮ್ಮ ಆರಾಧನಾ ಕರ್ಮಗಳ ಕಡೆಗೆ ನಾವು ಲಕ್ಷ್ಯ ನೀಡುವೆವು. ನಾವು ತಖ್ವದಲ್ಲಿ ಚಲಿಸಲು ಪ್ರಯತ್ನಿಸುತ್ತಾ ಉಪವಾಸ ಅನುಷ್ಠಾನ ಮಾಡುವವರಾದರೆ ಕೆಟ್ಟ ಕೆಲಸಗಳಿಂದ ರಕ್ಷಿಸಿಕೊಳ್ಳುವ ಬಗ್ಗೆ ನಮ್ಮ ಶ್ರದ್ಧೆ ಹರಿಯುವುದು. ಅಲ್ಲಾಹನ ಆಜ್ಞೆಗಳು ಯಾವುವು ಎಂದು ಅನ್ವೇಷಿಸಿ ಅವುಗಳನ್ನು ಅನುಷ್ಠಾನಕ್ಕೆ ತರುವ ಬಗ್ಗೆ ನಮ್ಮಲ್ಲಿ ಶ್ರದ್ಧೆ ಉಂಟಾಗುವುದು.

ನಾವು ಕೆಡುಕುಗಳಿಂದ ನಮ್ಮನ್ನು ರಕ್ಷಿಸಿಕೊಳ್ಳುವುದಿಲ್ಲವಾದರೆ ಉಪವಾಸದ ಉದ್ದೇಶಲಕ್ಷ್ಯ ಈಡೇರುವುದಿಲ್ಲ. ನಾವು ಉಪವಾಸ ಅನುಷ್ಠಿಸುವಾಗಲೂ ನಮ್ಮಲ್ಲಿ ಅಹಂಭಾವವಿದ್ದರೆ, ನಮ್ಮ ಕೆಲಸಗಳ ಬಗ್ಗೆ ಮತ್ತು ನಮ್ಮ ಮಾತುಗಳ ಬಗ್ಗೆ ಅನಾವಶ್ಯಕ ಹೆಮ್ಮೆ ಇರುವುದಾದರೆ, ಸ್ವಂತ ಇಷ್ಟಾನುಸಾರ ವರ್ತಿಸುವ ಸ್ವಭಾವವಿದ್ದರೆ, ಜನರಿಂದ ಹೊಗಳಿಕೆ ಗಳಿಸುವ ಅಭಿಲಾಷೆ ಇದ್ದರೆ, ನಮ್ಮ ಅಧೀನದಲ್ಲಿರುವವರು ನಮ್ಮನ್ನು ಮೆಚ್ಚಿಸುವಂತೆ ವರ್ತಿಸಬೇಕೆಂಬುದನ್ನು ಇಷ್ಟಪಡುವುದಾದರೆ, ನಮ್ಮನ್ನು ಹೊಗಳಿದಾಗ ಬಹಳ ಸಂತೋಷಪಡುವುದಾದರೆ ಅಥವಾ ನಾವು ಹೊಗಳಿಕೆ ಬಗ್ಗೆ ಆಶಿಸುವುದಾದರೆ, ಅದು ತಖ್ವಕ್ಕೆ ಅನುಯೋಜ್ಯವಲ್ಲ. ಉಪವಾಸ ಅನುಷ್ಠಿಸುವಾಗ, ಜಗಳ, ಸುಳ್ಳು, ಪಿತೂರಿ ಮೊದಲಾದವುಗಳಿಂದ ನಾವು ನಮ್ಮನ್ನು ರಕ್ಷಿಸಿಕೊಳ್ಳುವುದಿಲ್ಲವಾದರೆ ಅದು ಸಹ ತಖ್ವಕ್ಕೆ ಅನುಯೋಜ್ಯವಲ್ಲ. ಉಪವಾಸ ಅನುಷ್ಠಿಸುವಾಗ ಆರಾಧನೆಗಳಲ್ಲಿಯೂ ದುಆಗಳಲ್ಲಿಯೂ ಒಳ್ಳೆಯ ಕೆಲಸ ಮಾಡುವುದರಲ್ಲಿಯೂ ನಾವು ನಿರತರಾಗುವುದಿಲ್ಲವಾದರೆ ಅದು ಸಹ ತಖ್ವಕ್ಕೆ ಅನುಯೋಜ್ಯವಾಗಲಾರದು. ಆಗ ನಾವು ತಖ್ವದ ಉದ್ದೇಶಲಕ್ಷ್ಯವನ್ನು ಈಡೇರಿಸಿದವರಾಗುವುದಿಲ್ಲ. ಆದುದರಿಂದ ರಮಝಾನಿನಲ್ಲಿ ಕೆಡುಕುಗಳನ್ನು ತ್ಯಜಿಸುವುದು ಮತ್ತು ಒಳಿತುಗಳನ್ನು ಮಾಡುವುದು ಇವುಗಳೇ ಉಪವಾಸದ ಉದ್ದೇಶ ಲಕ್ಷ್ಯವನ್ನು ಈಡೇರಿಸುತ್ತವೆ. ಮನುಷ್ಯನು ಹೀಗೆ ಮಾಡುವುದರಲ್ಲಿ ಸ್ಥಿರತೆಯಿಂದ ವರ್ತಿಸುವನಾದರೆ ಅವನು ವಾಸ್ತವಿಕವಾಗಿ ಉಪವಾಸ ಅನುಷ್ಠಾನದ ಉದ್ದೇಶಲಕ್ಷ್ಯವನ್ನು ಗಳಿಸುವವನಾಗುತ್ತಾನೆ. ಹಾಗೆ ಮಾಡುವುದಿಲ್ಲವಾದರೆ ಅವನು ಕೇವಲ ಹಸಿದಿರುವವನಾಗುತ್ತಾನೆ. ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿರುವರು: ನೀವು ಉಪವಾಸ ಅನುಷ್ಠಾನದ ಉದ್ದೇಶ ಲಕ್ಷ್ಯವನ್ನು ಗಳಿಸುವುದಿಲ್ಲವಾದರೆ ಅಲ್ಲಾಹನಿಗೆ ನೀವು ಕೇವಲ ಹಸಿದಿರುವುದು ಬೇಕಾಗಿಲ್ಲ.

ಕೆಲವು ಜನರು ಉಪವಾಸದ ಹೆಸರಲ್ಲಿಯೂ ಮೋಸ ಮಾಡುತ್ತಾರೆ. ಅವರು ಹಸಿದಿರುವುದೂ ಇಲ್ಲ. ಅವರು ಉಪವಾಸ ಅನುಷ್ಠಿಸುತ್ತಾ ಇಲ್ಲವಾದರೂ ತಾವು ಉಪವಾಸ ಇದ್ದೇವೆಂದು ಹೇಳುತ್ತಾರೆ. ಇಂತಹ ಜನರು ತಮ್ಮ ಆಹಾರ ಪಾನೀಯಗಳಲ್ಲಿ ಸಹ ನಿಯಂತ್ರಣ ಇಲ್ಲದವರಾಗಿದ್ದಾರೆ. ಅವರು ಅಲ್ಲಾಹನಿಗೋಸ್ಕರ ಕೆಲವು ಗಂಟೆಗಳ ಕಾಲ ತಮ್ಮನ್ನು ತಿನ್ನುವುದರಿಂದಲೂ ಕುಡಿಯುವುದರಿಂದಲೂ ತಡೆದಿರಿಸದವರಾಗಿದ್ದಾರೆ. ಇನ್ನು ಕೆಲವರು ಇಡೀ ದಿನ ಹಸಿವೆಯಿಂದ ಇದ್ದರೂ ನಮಾಝ್ ಮತ್ತು ಇತರ ಆರಾಧನೆಗಳ ಬಗ್ಗೆ ಲಕ್ಷ್ಯ ನೀಡದವರಾಗಿದ್ದಾರೆ. ಅಲ್ಪ ಸ್ವಲ್ಪ ನಮಾಝ್ ಅನುಷ್ಠಿಸಿ ಅಲ್ಲಿಗೆ ಮುಗಿಸುತ್ತಾರೆ. ಅಲ್ಲಾಹನು ಮಾಡಬೇಕೆಂದು ಹೇಳಿದ ಆಜ್ಞೆಗಳ ಬಗ್ಗೆ ಮತ್ತು ಮಾಡಬಾರದೆಂದು ಹೇಳಿದ ಆಜ್ಞೆಗಳ ಬಗ್ಗೆ ಯಾವ ಶ್ರದ್ಧೆಯೂ ಅವರಿಗಿರುವುದಿಲ್ಲ. ಅಲ್ಲಾಹನು ತಖ್ವವುಳ್ಳವರಾಗಿರಿ ಎಂದು ಹೇಳಿದ ಉದ್ದೇಶವನ್ನು ಅವರು ಈಡೇರಿಸದವರಾಗಿದ್ದಾರೆ. ಆದುದರಿಂದ ಅಹ್ಮದಿಯರಾದ ನಮಗೆ ಬಹಳ ದೊಡ್ಡ ಹೊಣೆಗಾರಿಕೆ ಇದೆ. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿದ ನಂತರ, ಅಲ್ಲಾಹನು ಉಪವಾಸದ ಹಕ್ಕುಗಳನ್ನು ಹೇಗೆ ಈಡೇರಿಸಬೇಕೆಂದು ಆಜ್ಞಾಪಿಸಿರುವನೋ ಅದೇ ರೀತಿ ಆ ಹಕ್ಕುಗಳನ್ನು

ಈಡೇರಿಸಲು ಪ್ರಯತ್ನಿಸಬೇಕು. ತಖ್ವಾ ಎಂದರೆ ಏನು? ಅದನ್ನು ನಾವು ಯಾವ ರೀತಿಯಲ್ಲಿ ಮೈಗೂಡಿಸಿದ್ದೇವೆ ಎಂದು ಮನವರಿಕೆ ಮಾಡಲು ಪ್ರಯತ್ನಿಸಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ವಿವಿಧ ಸಂದರ್ಭಗಳಲ್ಲಿ ತಖ್ವಾದ ಬಗ್ಗೆ ನಮಗೆ ತಿಳಿಸಿ ಮುತ್ತಖಿ (ಧರ್ಮನಿಷ್ಠ) ಯಾರೆಂದು ವಿವರಿಸಿದ್ದಾರೆ. ವಾಸ್ತವಿಕ ಸುಖ ಮತ್ತು ರಸಾನುಭೂತಿ ತಖ್ವಾದಿಂದಲೇ ಲಭಿಸುತ್ತದೆ. ಲೋಕದ ರಸಾನುಭೂತಿಗಳಿಂದಲ್ಲ. ಮನುಷ್ಯನು ನೈಜ ಸತ್ಯವಿಶ್ವಾಸಿಯಾಗಲು ತನ್ನ ಪ್ರತಿಯೊಂದು ಕೆಲಸ ಅಲ್ಲಾಹನ ಇಷ್ಟಪ್ರಕಾರ ಮಾಡಿ ಅವನ ಸಂಪ್ರೀತಿ ಗಳಿಸಬೇಕಾಗಿದೆ. ಇದುವೇ ಮೂಮಿನ್ (ವಿಶ್ವಾಸಿ) ಮತ್ತು ಕಾಫಿರ್ (ಅವಿಶ್ವಾಸಿ) ಮಧ್ಯೆ ಇರುವ ವ್ಯತ್ಯಾಸವಾಗಿದೆ. ನಾವು ಅಲ್ಲಾಹನ ಬಗ್ಗೆ ಸೂಕ್ಷ್ಮಜ್ಞಾನ ಗಳಿಸುವುದರಲ್ಲಿ ಸಹ ಅಭಿವೃದ್ಧಿ ಗಳಿಸಬೇಕೆಂದು ಸಹ ಅವರು ಹೇಳಿದ್ದಾರೆ. ಪ್ರತಿಯೊಂದು ಬರಲಿರುವ ದಿನ ನಮ್ಮನ್ನು ಅಲ್ಲಾಹನ ಜ್ಞಾನದಲ್ಲಿ ಮುಂದೆ ಸಾಗುವವರನ್ನಾಗಿ ಮಾಡಬೇಕು. ಈಗ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕೆಲವು ಉದ್ಧರಣೆಗಳನ್ನು ನಿಮ್ಮ ಮುಂದಿರಿಸುವೆನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅನೇಕ ಸಾರಿ ನನಗೆ ಅಲ್ಲಾಹನಿಂದ ಇಲ್‌ಹಾಮ್ ಅವತೀರ್ಣವಾಗಿದೆ, ನೀವು ಮುತ್ತಖಿಗಳಾಗುವುದಾದರೆ ತಖ್ವಾದ ಸೂಕ್ಷ್ಮ ಮಾರ್ಗಗಳಲ್ಲಿ ಚಲಿಸುವವರಾದರೆ ಅಲ್ಲಾಹನು ನಿಮ್ಮ ಜೊತೆಗಿರುವನು ಎಂದು. ನನ್ನ ಹೃದಯದಲ್ಲಿ ಬಹಳ ನೋವುಂಟಾಗುತ್ತದೆ – ನಮ್ಮ ಜಮಾಅತ್ ಸತ್ಯವಾದ ತಖ್ವಾ ಮತ್ತು ಪರಿಶುದ್ಧತೆಯನ್ನು ತಮ್ಮಲ್ಲಿ ಅಳವಡಿಸುವಂತೆ ಮಾಡಲು ನಾನು ಏನು ಮಾಡಬೇಕೆಂದು. ನಾನು ಎಷ್ಟು ದುಆ ಮಾಡುತ್ತೇನೆಂದರೆ ದುಆ ಮಾಡುತ್ತಾ ಮಾಡುತ್ತಾ ನನಗೆ ಬಲಹೀನತೆ ಉಂಟಾಗುತ್ತದೆ. ಕೆಲವು ಸಾರಿ ಪ್ರಜ್ಞಾಶೂನ್ಯತೆ ಮತ್ತು ನಾಶೋನ್ಮುಖತೆ ತನಕ ತಲಪುತ್ತದೆ. ಒಂದು ಜಮಾಅತ್ ಅಲ್ಲಾಹನ ದೃಷ್ಟಿಯಲ್ಲಿ ಮುತ್ತಖಿಯಾಗುವ ತನಕ ಅಲ್ಲಾಹನ ಸಹಾಯ ಅದಕ್ಕೆ ದೊರಕಲಾರದು. ಹಿಂದಿನ ಕಾಲದ ಎಲ್ಲ ಪವಿತ್ರ ಗ್ರಂಥಗಳ, ತೌರಾತ್ ಮತ್ತು ಇಂಜೀಲಿನ ಉಪದೇಶಗಳ ಸಾರಾಂಶ ಇದೇ ಆಗಿದೆ. ಪವಿತ್ರ ಖುರ್‌ಆನ್ ಒಂದೇ ಒಂದು ಶಬ್ದದ ಮೂಲಕ ಅಲ್ಲಾಹನ ಈ ವೈಭವಶಾಲಿ ಇಚ್ಛೆ ಮತ್ತು ಸಂಪೂರ್ಣ ಸಂಪ್ರೀತಿಯನ್ನು ಪ್ರಕಟಿಸಿದೆ. ಎಂದರೆ ತಖ್ವಾ ಎಂಬ ಶಬ್ದದ ಮೂಲಕ. ನಾನು ಹೀಗೆ ಚಿಂತಿಸುತ್ತಿದ್ದೇನೆ: ನಮ್ಮ ಜಮಾಅತಿನಲ್ಲಿರುವ ನೈಜ ಮುತ್ತಖಿಗಳನ್ನು, ಧರ್ಮ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವವರನ್ನು ಮತ್ತು ಲೋಕದಿಂದ ಸಂಬಂಧ ವಿಚ್ಛೇದಿಸಿ ಅಲ್ಲಾಹನ ಕಡೆಗೆ ಸಾಗುವವರನ್ನು ಪ್ರತ್ಯೇಕಿಸಿ ಅವರಿಗೆ ಕೆಲವು ಧಾರ್ಮಿಕ ಕೆಲಸಗಳನ್ನು ವಹಿಸಿಕೊಡಬೇಕೆಂದು. ಅನಂತರ ನಾನು ಲೌಕಿಕ ಕಾರ್ಯಗಳಲ್ಲಿ ಮಾತ್ರ ನಿರತರಾಗುವವರನ್ನು, ರಾತ್ರಿ ಹಗಲು ಶವ ಸದೃಶ ಲೋಕವನ್ನು ಆಶಿಸುವುದರಲ್ಲಿ ಜೀವ ನೀಡುವವರನ್ನು ಪರಿಗಣಿಸಲಾರೆನು.

ಒಟ್ಟಿನಲ್ಲಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗಿದ್ದ ನೋವು, ಜಮಾಅತಿನ ಪ್ರತಿಯೊಬ್ಬ ವ್ಯಕ್ತಿಯೂ ತಖ್ವಾದಲ್ಲಿ ಚಲಿಸುವವನಾಗಬೇಕೆಂದು ಆಗಿತ್ತು. ಲೋಕದ ಚಿಂತೆಯೇ ಸದಾಸಮಯ ಅವನನ್ನು ತಿಂದು ಹಾಕಬಾರದೆಂದು ಆಗಿತ್ತು. ತಖ್ವಾದಲ್ಲಿ ಚಲಿಸುವುದೇ ಶರೀಅತಿನ ಸಾರಾಂಶವೆಂದೂ ದುಆಗಳು ಅಲ್ಲಾಹನಿಂದ ಅಂಗೀಕಾರ ಪಡೆಯಲು ಇಚ್ಛಿಸುವುದಾದರೆ ತಖ್ವಾದಲ್ಲಿ ಚಲಿಸಬೇಕೆಂದೂ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅವರು ತಖ್ವಾದ ಮಾರ್ಗವನ್ನು ಅವಲಂಬಿಸಬೇಕು. ಏಕೆಂದರೆ ತಖ್ವಾವನ್ನು ಶರೀಅತಿನ ಸಾರಾಂಶ ಎಂದು ಹೇಳಬಹುದಾಗಿದೆ. ಶರೀಅತನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ ಶರೀಅತಿನ ತಿರುಳು ತಖ್ವಾವೇ ಆಗಿದೆ. ತಖ್ವಾದ ಅನೇಕ ಅಂತಸ್ತುಗಳಿವೆ. ಆದರೆ ಸತ್ಯಾನ್ವೇಷಿಯಾಗಿ ತಖ್ವಾದ ಆರಂಭದ ಹಂತವನ್ನು ಸ್ಥಿರತೆಯಿಂದಲೂ ನಿಷ್ಠೆಯಿಂದಲೂ ದಾಟಿಹೋಗುವುದಾದರೆ ಅಂತಹ ವ್ಯಕ್ತಿ ಸತ್ಯ ಮತ್ತು ಸತ್ಯಾನ್ವೇಷಣೆಯ ಕಾರಣದಿಂದ ಉನ್ನತ ಪದವಿ ಪಡೆಯುತ್ತಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳಿದ್ದಾನೆ: **ಇನ್ನಮಾ ಯತಖಬ್ಬಲುಲ್ಲಾಹು ಮಿನಲ್ ಮುತ್ತಖೀನ್**– ಅಲ್ಲಾಹನು ಮುತ್ತಖಿಗಳ ದುಆಗಳನ್ನು ಸ್ವೀಕರಿಸುತ್ತಾನೆ. ಇದು ಅಲ್ಲಾಹನ ವಾಗ್ದಾನವಾಗಿದೆ. ಅವನ ವಾಗ್ದಾನ ವ್ಯತ್ಯಾಸವಾಗಲಾರದು. **ಇನ್ನಲ್ಲಾಹ ಲಾ ಯುಖ್‌ಲಿಫುಲ್ ಮೀಆದ್**– ಅಲ್ಲಾಹನು ಖಂಡಿತವಾಗಿಯೂ ವಾಗ್ದಾನವನ್ನು ಉಲ್ಲಂಘಿಸುವುದಿಲ್ಲ. ತಖ್ವಾ ಎಂಬುದು ದುಆಗಳ ಸ್ವೀಕಾರ ಪಡೆಯಲು ಅನಿವಾರ್ಯ ಶರತ್ತಾಗಿದೆ. ಅದು ಮೂಲಭೂತ ಶರತ್ತಾಗಿದೆ. ಒಬ್ಬನು ತಖ್ವಾದ ಬಗ್ಗೆ ನಿರ್ಲಕ್ಷಿಸಿ ದಾರಿತಪ್ಪಿದವನಾಗಿ ದುಆ ಸ್ವೀಕರಿಸಲ್ಪಡಬೇಕೆಂದು ಬಯಸುವನಾದರೆ ಅವನು ಅವಿವೇಕಿಯೂ ಮೂರ್ಖನೂ ಆಗುವುದಿಲ್ಲವೇ? ಆದುದರಿಂದ ನಮ್ಮ ಜಮಾಅತಿಗೆ ಕಡ್ಡಾಯವಾಗಿದೆ – ಪ್ರತಿಯೊಬ್ಬನು ಸಾಧ್ಯವಿರುವಷ್ಟು ಮಟ್ಟಿಗೆ ತಖ್ವಾದ ಮಾರ್ಗದಲ್ಲಿ ಚಲಿಸಬೇಕು. ಆ ಮೂಲಕ ದುಆಗಳ ಸ್ವೀಕಾರದ ಭಾಗ್ಯ ಗಳಿಸಿ ವಿಶ್ವಾಸದಲ್ಲಿ ವರ್ಧನೆಯನ್ನು ಪಡೆಯಬೇಕು.

ರಮಝಾನ್‌ನಿಂದ ಲಾಭ ಪಡೆಯಲು ಮೂಲಭೂತ ಆವಶ್ಯಕತೆ ಏನೆಂದರೆ ನಮ್ಮ ಉಪವಾಸ ಮತ್ತು ನಮ್ಮ ಪ್ರತಿಯೊಂದು ಕೆಲಸ ತಖ್ವಾವನ್ನು ಗಳಿಸಲಿಕ್ಕೋಸ್ಕರವಾಗಬೇಕು. ಅನೇಕ ಜನರು ಹೇಳುತ್ತಾರೆ – ನಾವು ಬಹಳ ದುಆಗಳನ್ನು ಮಾಡಿದೆವು; ಆದರೆ ನಮ್ಮ ದುಆಗಳು ಸ್ವೀಕರಿಸಲ್ಪಡುವುದಿಲ್ಲ ಎಂದು. ಅಂತಹ ಜನರು ತಮ್ಮೊಳಗೆ ನೋಡಬೇಕು – ಅವರೊಳಗೆ ಧರ್ಮ ಜಯಗಳಿಸಿದೆಯೋ ಎಂದು. ಅವರು ತಖ್ವಾದಲ್ಲಿ ಚಲಿಸುವವರೋ ಎಂದು. ಅಥವಾ ಲೌಕಿಕ ಕಾರ್ಯಗಳಲ್ಲಿ ಮಗ್ನತೆ ಹೆಚ್ಚಾಗಿದೆಯೋ ಎಂದು. ದುಆ ಸ್ವೀಕರಿಸಲ್ಪಡಲು ತಖ್ವಾ ಶರತ್ತಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮುತ್ತಖಿಗಳಿಗೆ ದೊಡ್ಡ ದೊಡ್ಡ ವಾಗ್ದಾನಗಳಿವೆ. ಅಲ್ಲಾಹನು ಮುತ್ತಖಿಗಳ ವಲಿ (ಸ್ನೇಹಿತ) ಆಗಿರುತ್ತಾನೆ ಎಂಬುದಕ್ಕಿಂತ ಹೆಚ್ಚಾಗಿ ಇನ್ನೇನು ಬೇಕಾಗಿದೆ? ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ: **ವಮನ್ ಯತ್ತಖಿಲ್ಲಾಹ ಯಜ್‌ಅಲ್ಲಹೂ ಮಖ್‌ರಜನ್ ವಯರ್‌ಝುಖುಹೂ ಮಿನ್ ಹೈಸು ಲಾ ಯಹ್‌ತಸಿಬ್**– ಅಲ್ಲಾಹನು ಮುತ್ತಖಿಗೆ ಪ್ರತಿಯೊಂದು ಕಷ್ಟದಲ್ಲಿಯೂ ಅದರಿಂದ ಹೊರಗೆ ಹೋಗುವ ಒಂದು ದಾರಿ ತೆರೆದು ಕೊಡುತ್ತಾನೆ. ಅವನಿಗೆ ಕಷ್ಟದಿಂದ ಮುಕ್ತಿ ದೊರಕಲು ಅದೃಶ್ಯದಿಂದ ಸಹಾಯ ತಲಪಿಸುತ್ತಾನೆ. ಅವನಿಗೆ ಹೇಗೆ ಆಹಾರ ಒದಗಿಸುತ್ತಾನೆಂದರೆ ಅವನಿಗೆ ಅದರ ಬಗ್ಗೆ ತಿಳಿದಿರುವುದೇ ಇಲ್ಲ. ಇದನ್ನು ಯಾವಾಗಲೂ ನೆನಪಿನಲ್ಲಿರಿಸಿದರೆ ತಖ್ವಾದಲ್ಲಿ ಚಲಿಸುವ ಕಡೆಗೆ ಶ್ರದ್ಧೆ ಸಹ ಹರಿಯುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮನುಷ್ಯನ ಅತ್ಯಂತ ದೊಡ್ಡ ಆಶೆ ಲೋಕದಲ್ಲಿ ಅವನಿಗೆ ಸುಖಸೌಖ್ಯ ಸಿಗಬೇಕೆಂಬುದಾಗಿದೆ. ಅದಕ್ಕೋಸ್ಕರ ಅಲ್ಲಾಹನು ಒಂದೇ ಮಾರ್ಗವನ್ನು

ನಿಶ್ಚಯಿಸಿದ್ದಾನೆ. ಅದು ತಖ್ವದ ಮಾರ್ಗವಾಗಿದೆ. ಬೇರೆ ಶಬ್ದಗಳಲ್ಲಿ ಅದನ್ನು ಪವಿತ್ರ ಖುರ್‌ಆನಿನ ಮಾರ್ಗ ಎಂದು ಹೇಳಬಹುದು. ಅಥವಾ ಸಿರಾತೆ ಮುಸ್ತಖೀಮ್ ಎಂದು ಹೆಸರಿಸಬಹುದು. ಅವಿಶ್ವಾಸಿಗಳ ಬಳಿ ಸಹ ಸಂಪತ್ತು ಇದೆ; ಅವರು ತಮ್ಮ ಭೋಗಲಾಲಸೆಯಲ್ಲಿ ಮಗ್ನರಾಗಿದ್ದಾರೆ ಎಂದು ಯಾರಾದರೂ ಹೇಳಬಹುದು. ನಾನು ಸತ್ಯವಾಗಿ ಹೇಳುತ್ತೇನೆ, ಅವರು ತುಚ್ಛ ಲೌಕಿಕದ ಮತ್ತು ಬಾಹ್ಯ ಪೂಜಕರ ದೃಷ್ಟಿಯಲ್ಲಿ ಸಂತೋಷ ಭರಿತರಾಗಿ ಕಾಣುತ್ತಾರೆ. ಆದರೆ ವಾಸ್ತವಿಕವಾಗಿ ಅವರು ಒಂದು ಉರಿಯಲ್ಲಿಯೂ ದುಃಖದಲ್ಲಿಯೂ ಮುಳುಗಿರುತ್ತಾರೆ. ನೀವು ಅವರ ಬಾಹ್ಯರೂಪ ನೋಡುತ್ತಿರುವಿರಿ. ನಾನು ಅವರ ಹೃದಯದ ಮೇಲೆ ದೃಷ್ಟಿ ಇರಿಸಿದ್ದೇನೆ. ಅವರು ಅಗ್ನಿಯಲ್ಲೂ ಸಂಕೋಲೆಗಳಲ್ಲೂ ಬಂಧಿತರಾಗಿದ್ದಾರೆ. ಅಲ್ಲಾಹನು ಹೇಳಿದ್ದಾನೆ: **ಇನ್ನಾ ಅಅ್‌ತದ್‌ನಾ ಲಿಲ್ ಕಾಫಿರೀನ ಸಲಾಸಿಲ ವ ಅಗ್‌ಲಾಲನ್ ವ ಸಈರ** – ನಾವು ಅವಿಶ್ವಾಸಿಗಳಿಗೆ ಸಂಕೋಲೆಗಳನ್ನೂ, ನೊಗಗಳನ್ನೂ, ನರಕವನ್ನೂ ಸಿದ್ಧಪಡಿಸಿದ್ದೇವೆ. ಮುತ್ತಖಿಯಾದವನು ಒಂದು ಗುಡಿಸಿಲಿನಲ್ಲಿ ಸಹ ಸುಖದಿಂದಿರುತ್ತಾನೆ. ಲೌಕಿಕವಾದಿಗಳಾದ, ನಿರಾಶೆ ಮತ್ತು ಅಸೂಯೆಭರಿತರಾದವರಿಗೆ ವೈಭವಶಾಲಿ ಮಹಲುಗಳಲ್ಲಿ ಸಹ ಅಂತಹ ಸುಖ ಲಭಿಸಲಾರದು.

ಖಿನಾಅತ್ (ಇದ್ದುದರಲ್ಲಿ ತೃಪ್ತಿ) ಇರಬೇಕು. ತಖ್ವ ಇರಬೇಕು. ಅಲ್ಲಾಹನ ಸಂಪ್ರೀತಿ ಗಳಿಸುವುದು ಉದ್ದೇಶವಾಗಿರಬೇಕು. ಹಾಗಿದ್ದಲ್ಲಿ ಕಡಿಮೆ ಸ್ಥಿತಿಯಲ್ಲೂ ಮನುಷ್ಯನು ಸುಖವಾಗಿ ಜೀವಿಸಲು ಸಾಧ್ಯವಿದೆ. ದೊಡ್ಡ ದೊಡ್ಡ ಶ್ರೀಮಂತರಿಗೂ ಅಂತಹ ರಸಾನುಭೂತಿ ಲಭಿಸುವುದಿಲ್ಲ. ಎಷ್ಟು ಹೆಚ್ಚು ಲೌಕಿಕ ಲಾಭ ದೊರಕುತ್ತದೆಯೋ ಅಷ್ಟೇ ಹೆಚ್ಚಿನ ಮಟ್ಟದಲ್ಲಿ ವಿಪತ್ತು ಸಹ ಎದುರಿಗೆ ಬರುತ್ತದೆ. ವಾಸ್ತವಿಕ ಸುಖ ಮತ್ತು ರಸಾನುಭೂತಿ ಲೌಕಿಕ ವಾದಿಗಳಿಗೆ ಲಭಿಸುವುದಿಲ್ಲ. ಧಾರಾಳ ಸಂಪತ್ತು, ಉತ್ತಮ ಬಟ್ಟೆ ಬರೆಗಳು ಮತ್ತು ಉತ್ತಮ ಆಹಾರ ಸಂತೋಷದಾಯಕವಾಗಬಹುದು ಎಂದು ಭಾವಿಸಬೇಡಿರಿ. ಖಂಡಿತವಾಗಿ ಹಾಗೆ ಆಗದು. ಸುಖವು ತಖ್ವವನ್ನು ಅವಲಂಬಿಸಿದೆ. ಸತ್ಯವಾದ ತಖ್ವವಿಲ್ಲದೆ ಯಾವುದೇ ಸುಖ ಸಿಗದು ಎಂದು ತಿಳಿದ ನಂತರ ತಖ್ವಕ್ಕೆ ಅನೇಕ ವಿಭಾಗಗಳಿವೆ ಎಂದು ತಿಳಿದುಕೊಳ್ಳಬೇಕು. ಅವು ಜೇಡನ ಬಲೆಯ ಹಾಗೆ ಹರಡಿ ಕೊಂಡಿರುತ್ತವೆ. ಮನುಷ್ಯನ ಎಲ್ಲ ಅಂಗಾಂಗಳು, ಅವನ ನಂಬಿಕೆಗಳು, ನಾಲಗೆ, ಸ್ವಭಾವ ಗುಣಗಳು ಮೊದಲಾದುವುಗಳೆಲ್ಲ ತಖ್ವಕ್ಕೆ ಸಂಬಂಧಿಸಿವೆ. ನಂಬಿಕೆಗಳಿಗೆ ಸಂಬಂಧಿಸಿ ತಖ್ವವಿರಬೇಕು. ನಾಲಗೆಯಲ್ಲೂ ತಖ್ವವಿರಬೇಕು. ಸ್ವಭಾವಗಳಲ್ಲೂ ತಖ್ವವಿರಬೇಕು. ನಾಲಗೆಯನ್ನು ಅನ್ಯರಿಗೆ ಕಷ್ಟ ನೀಡಲು ಬಳಸಬಾರದೆಂದು ಮಾತ್ರವಲ್ಲ ಆಜ್ಞಾಪಿಸಿರುವುದು. ಆತ್ಮಪ್ರಶಂಸೆ, ಬಡಾಯಿ ಕೊಚ್ಚುವುದು, ತೋರಿಕೆ ಮೊದಲಾದುವು ತಖ್ವದಿಂದ ದೂರ ಸರಿಸುವವುಗಳಾಗಿವೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೋಡಿರಿ, **ಇಯ್ಯಾಕ ನಅ್‌ಬುದು**– ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ ಎಂಬ ಉಪದೇಶ ನೀಡಲಾಗಿದೆ. ಆಗ ಮನುಷ್ಯನು ತನ್ನ ಶಕ್ತಿ ಬಗ್ಗೆ ಭರವಸೆ ಇರಿಸಿ ಅಲ್ಲಾಹನಿಂದ ದೂರ ಸರಿಯಲು ಸಾಧ್ಯವಿತ್ತು. ಆದುದರಿಂದ ಅದರ ಜೊತೆಗೆಯೇ **ಇಯ್ಯಾಕ ನಸ್ತಈನ್** – ನಾವು ನಿನ್ನಿಂದ ಮಾತ್ರ ಸಹಾಯ ಯಾಚಿಸುತ್ತೇವೆ ಎಂದು ಬೇಡಿಕೊಳ್ಳಲು ಉಪದೇಶಿಸಲಾಗಿದೆ. ನೀವು ಮಾಡುವ ಆರಾಧನೆ ನಿಮ್ಮ ಶಕ್ತಿ ಸಾಮರ್ಥ್ಯದಿಂದ ಮಾಡುತ್ತಿರುವಿರಿ ಎಂದು ಭಾವಿಸಬೇಡಿರಿ. ಅಲ್ಲಾಹನ ಸಹಾಯ ಎಂದಿನ ತನಕ ಇರುವುದಿಲ್ಲವೋ, ಅವನು ಶಕ್ತಿ ಮತ್ತು ಭಾಗ್ಯ ನೀಡದಿದ್ದರೆ ಏನನ್ನೂ ಮಾಡಲು ಸಾಧ್ಯವಾಗದು. ನಾಲಗೆಯ ಮೂಲಕವೂ ಮನುಷ್ಯನು ತಖ್ವದಿಂದ ದೂರ ಹೋಗುತ್ತಾನೆ. ಹದೀಸಿನಲ್ಲಿ ಹೀಗೆ ವರದಿಯಾಗಿದೆ, ಯಾವ ವ್ಯಕ್ತಿ ತನ್ನ ನಾಭಿಯ ಕೆಳಗಿರುವ ಅಂಗವನ್ನೂ ನಾಲಗೆಯನ್ನೂ ಕೆಡುಕಿನಿಂದ ರಕ್ಷಿಸುತ್ತಾನೋ ಅವನಿಗೆ ಸ್ವರ್ಗ ಲಭಿಸುವುದರ ಹೊಣೆಗಾರಿಕೆ ನನಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೀವು ನಿಮ್ಮ ನಾಲಗೆಯ ಮೇಲೆ ಅಧಿಕಾರ ಚಲಾಯಿಸಿರಿ. ನಾಲಗೆ ನಿಮ್ಮ ಮೇಲೆ ಅಧಿಕಾರ ಚಲಾಯಿಸದಿರಲಿ. ನೀವು ಅನಾವಶ್ಯಕವಾಗಿ ಮಾತನಾಡಬೇಡಿರಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮನುಷ್ಯನು ತನ್ನ ಸ್ವಂತ ಅಭಿಲಾಷೆಗಳನ್ನು ಬಿಟ್ಟು ಅಲ್ಲಾಹನ ನಿರ್ಧಾರಗಳ ಬಳಿಗೆ ಹೋಗುವವನಾದರೆ ಅವನು ಯಾವುದೇ ನಿಷಿದ್ಧ ಕೆಲಸ ಮಾಡಲಾರ. ಅವನ ಎಲ್ಲ ಕೆಲಸ ಅಲ್ಲಾಹನ ಇಚ್ಛೆಗನುಸಾರವಾಗಿರುತ್ತದೆ. ಜನರು ಪರೀಕ್ಷೆಗೆ ಗುರಿಯಾಗುವಾಗ ಅಲ್ಲಿ ಯಾವಾಗಲೂ ಆಗುವುದೇನೆಂದರೆ ಅವರ ಕೆಲಸ ಅಲ್ಲಾಹನ ನಿರ್ಧಾರಕ್ಕೆ ಅನುಸಾರವಾಗಿರುವುದಿಲ್ಲ. ಅವರು ತಮ್ಮ ಭಾವೋದ್ವೇಗಗಳಿಗೆ ಅಧೀನರಾಗಿ ಚಲಿಸುತ್ತಾರೆ. ಉದಾಹರಣೆಗೆ ಸಿಟ್ಟು. ಆಗ ಅವರು ಎಂತಹ ಕೆಲಸ ಮಾಡುತ್ತಾರೆ ಎಂದರೆ ಮೊಕದ್ದಮೆಗಳು ಪ್ರಾರಂಭವಾಗುತ್ತವೆ. ಅಪರಾಧಗಳು ಸಂಭವಿಸುತ್ತವೆ. ಆದರೆ ಯಾರಾದರೂ ಪವಿತ್ರ ಖುರ್‌ಆನಿನ ಸಲಹೆ ಪಡೆಯದೆ ಏನೂ ಮಾಡುವುದಿಲ್ಲ ಎಂದು ನಿರ್ಧರಿಸುವುದಾದರೆ ಪವಿತ್ರ ಖುರ್‌ಆನ್ ಅವನಿಗೆ ಖಂಡಿತವಾಗಿಯೂ ಸಲಹೆ ನೀಡುವುದು.

ನಾವು ನಮ್ಮ ಜೀವಿತವನ್ನು ಬಡತನದಲ್ಲಿ ಕಳೆಯಬೇಕೆಂದು ಉಪದೇಶಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ತಖ್ವವುಳ್ಳವರು ನಿರಾಡಂಬರ ಹಾಗೂ ಬಡತನದ ಜೀವನ ನಡೆಸಬೇಕು. ಇದು ತಖ್ವದ ಒಂದು ಭಾಗವಾಗಿದೆ. ಅದರಿಂದ ಅನಾವಶ್ಯಕ ಕೋಪವನ್ನು ಎದುರಿಸಬಹುದಾಗಿದೆ. ದೊಡ್ಡ ಜ್ಞಾನಿಗಳಿಗೂ ಸಾದಿಖ್ (ಸತ್ಯಸಂಧ)ರಿಗೂ ಕೊನೆಯ ಕಷ್ಟದ ಹಂತ ಕೋಪದಿಂದ ರಕ್ಷಿಸಿಕೊಳ್ಳುವುದಾಗಿದೆ. ದುರಹಂಕಾರ ಸಿಟ್ಟಿನಿಂದ ಹುಟ್ಟುತ್ತದೆ. ನನ್ನ ಜಮಾಅತಿನವರು ಪರಸ್ಪರ ದೊಡ್ಡವರು, ಚಿಕ್ಕವರು ಎಂದು ಭಾವಿಸಬಾರದು ಎಂದು ನಾನು ಇಚ್ಛಿಸುತ್ತೇನೆ. ಪರಸ್ಪರ ಗರ್ವದಿಂದಲೂ ಕೀಳು ದೃಷ್ಟಿಯಿಂದಲೂ ನೋಡಬಾರದು. ದೊಡ್ಡವನು ಯಾರು, ಚಿಕ್ಕವನು ಯಾರು ಎಂದು ಅಲ್ಲಾಹನಿಗೆ ತಿಳಿದಿದೆ. ಇದು ಒಂದು ರೀತಿಯ ಅಪಮಾನಿಸುವಿಕೆಯಾಗಿದೆ. ನೀವು ಸಿಟ್ಟಿನಿಂದ ಪರಸ್ಪರ ಹೆಸರು ಹೇಳಬೇಡಿರಿ. ಇದು ಧರ್ಮ ಭ್ರಷ್ಟರ ಕೆಲಸವಾಗಿದೆ. ಯಾರಾದರೂ ಒಬ್ಬನನ್ನು ಉದ್ರೇಕಿಸುವುದಾದರೆ ಅವನು ಅದೇ ರೀತಿಯ ಅನುಭವ ಗಳಿಸದೆ ಸಾಯಲಾರನು. ನೀವು ನಿಮ್ಮ ಸಹೋದರರನ್ನು ಕೆಳಮಟ್ಟದವರೆಂದು ಗಣಿಸಬೇಡಿರಿ. ಒಂದೇ ಒರತೆಯಿಂದ ನೀರು ಕುಡಿಯುವಾಗ ಯಾರಿಗೆ ಹೆಚ್ಚು ನೀರು ಲಭಿಸಿದೆ ಎಂದು ತಿಳಿಯಲು ಹೇಗೆ ತಾನೆ ಸಾಧ್ಯ. ಯಾರಾದರೂ ಗೌರವಾರ್ಹನಾಗುವುದು ಲೌಕಿಕ ತತ್ವಗಳಿಂದಲ್ಲ. ಅಲ್ಲಾಹನ ದೃಷ್ಟಿಯಲ್ಲಿ ತಖ್ವವುಳ್ಳವನೇ ದೊಡ್ಡವನು. **ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್** – ಮುತ್ತಖಿಯೇ ಗೌರವಾರ್ಹನಾಗಿದ್ದಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಸತ್ಯವಿಶ್ವಾಸಿಯಾದವನು ಕಷ್ಟದ ಸ್ಥಿತಿಯಲ್ಲಿಯೂ ಅಲ್ಲಾಹನ ಬಗ್ಗೆ ತಪ್ಪಾಗಿ ಯೋಚಿಸಲಾರ. ಅವನು ಅದನ್ನು ತನ್ನ ತಪ್ಪಿನ ಕಾರಣದಿಂದ ಕಷ್ಟ ಸಂಭವಿಸಿದೆಯೆಂದು ಭಾವಿಸಿ ಅಲ್ಲಾಹನಿಂದ ಕರುಣೆಯನ್ನೂ

ಅನುಗ್ರಹವನ್ನೂ ಬೇಡುತ್ತಾನೆ. ಅವನ ಕಷ್ಟಕಾಲ ದಾಟಿ ಹೋಗುತ್ತದೆ. ಅವನ ಪ್ರಾರ್ಥನೆಗಳು ಫಲಕಾರಿಯಾಗುತ್ತವೆ. ಆಗ ಅವನು ತನ್ನ ಬಲಹೀನತೆಯ ಕಾಲವನ್ನು ಮರೆತು ಬಿಡುವುದಿಲ್ಲ. ಅವನು ಅದನ್ನು ನೆನಪಿಡುತ್ತಾನೆ. ತಖ್ವಾವನ್ನು ಅವಲಂಬಿಸುವವನು ಅಲ್ಲಾಹನ ಸಹಾಯ ಪಡೆಯುವವನಾಗುತ್ತಾನೆ. ನಾವು ಈ ಜಮಾಅತಿನಲ್ಲಿ ಸೇರಿದೆವು ಎಂಬುದರಿಂದ ಮಾತ್ರ ತೃಪ್ತರಾಗಬಾರದು. ಸತ್ಯವಾದ ತಖ್ವಾ ಇದ್ದರೆ ಮಾತ್ರ ಅಲ್ಲಾಹನ ಸಹಾಯ ದೊರಕುವುದು. ಅದರೊಂದಿಗೆ ಒಳಿತುಗಳು ಇರಬೇಕು. ಅಲ್ಲಾಹನು ಮನುಷ್ಯನ ಕರ್ಮಗಳ ದಾಖಲೆ ಇರಿಸುತ್ತಾನೆ. ಮನುಷ್ಯನು ಸಹ ತನ್ನ ಕೃತ್ಯಗಳ ದಾಖಲೆ ಇರಿಸಬೇಕು. ಆ ಮೇಲೆ ತಾನು ಒಳಿತುಗಳನ್ನು ಮಾಡುವುದರಲ್ಲಿ ಹೆಜ್ಜೆ ಮುಂದೆ ಇರಿಸಿರುವೆನೋ ಎಂದು ನೋಡಬೇಕು.

ಅಲ್ಲಾಹನು ನಮಗೆ ಈ ರಮಝಾನಿನಲ್ಲಿ ತಖ್ವಾದೊಂದಿಗೆ ಉಪವಾಸ ಅನುಷ್ಠಿಸಲು, ಆರಾಧನೆ ಮಾಡಲು ಮತ್ತು ಉಳಿದ ಕರ್ತವ್ಯಗಳನ್ನು ನಿರ್ವಹಿಸಲು ಭಾಗ್ಯ ನೀಡಲಿ. ಈ ರಮಝಾನ್ ನಮ್ಮ ಜಮಾಅತಿಗೂ ಮುಸ್ಲಿಮರಿಗೂ ಎಲ್ಲ ರೀತಿಯಲ್ಲೂ ಅನುಗ್ರಹದಾಯಕವಾಗಲಿ. ಲೋಕಕ್ಕೋಸ್ಕರ ವಿಶಿಷ್ಟವಾಗಿ ಪ್ರಾರ್ಥಿಸಿರಿ. ಪಾಕಿಸ್ಥಾನದಲ್ಲಿ ಜಮಾಅತಿನ ಮೇಲೆ ದಿನಂಪ್ರತಿ ಕಠಿಣವಾಗಿ ಹಿಂಸೆ ನಡೆಯುತ್ತಿದೆ. ಅಲ್ಲಾಹನು ಕರುಣೆ ತೋರಿಸುವಂತಾಗಲಿ. ನಾವು ಉಪವಾಸ ಅನುಷ್ಠಿಸುವವರೂ ತಖ್ವಾ ಹೊಂದಿದವರೂ ಹಕ್ಕುಗಳನ್ನು ಈಡೇರಿಸುವವರೂ ಆಗಲಿ. ದುಆಗಳ ಬಗ್ಗೆ ಗಮನಿಸುವವರಾಗಲಿ. ಅಲ್ಲಾಹನು ಮುಸ್ಲಿಮರ ಮೇಲೆ ಕರುಣೆ ದೋರಲಿ. ಅವರ ನಾಯಕರಿಗೆ ಮತ್ತು ಮತಪಂಡಿತರಿಗೆ ಬುದ್ಧಿ ನೀಡಲಿ. ಅವರು ಈ ಕಾಲಘಟ್ಟದ ಇಮಾಮರನ್ನು ನಂಬುವವರಾಗಲಿ. ಲೋಕವು ಯುದ್ಧದ ಕಡೆಗೆ ಎಷ್ಟು ವೇಗವಾಗಿ ಚಲಿಸುತ್ತಿದೆಯೋ ಅದಕ್ಕೆ ಸಂಬಂಧಿಸಿ ಯಾವ ತಡೆಯೂ ಸಂಭವಿಸಿದುದಾಗಿ ಈಗ ಕಾಣುವುದಿಲ್ಲ. ಅಲ್ಲಾಹನು ಮುಸ್ಲಿಮರನ್ನೂ ಅಹ್ಮದಿಯರನ್ನೂ ಈ ಯುದ್ಧಗಳ ಕೆಟ್ಟ ಪರಿಣಾಮಗಳಿಂದ ರಕ್ಷಿಸಲಿ. ಮನುಷ್ಯಕುಲವನ್ನೂ ಅಲ್ಲಾಹನು ರಕ್ಷಿಸುವವನಾಗಲಿ. ಅಲ್ಲಾಹನ ದೃಷ್ಟಿಯಲ್ಲಿ ಅವರ ಸುಧಾರಣೆ ಆಗಬಹುದಾಗಿದ್ದಲ್ಲಿ ಮತ್ತು ಯಾವುದಾದರೂ ಮಾರ್ಗ ತೆರೆಯಬಹುದಾದರೆ ಅವರ ಸುಧಾರಣೆ ಆಗುವಂತಾಗಲಿ. ಅವರು ಅಲ್ಲಾಹನನ್ನು ಗುರುತಿಸುವವರಾಗಲಿ. ಅವರು ಅಲ್ಲಾಹನನ್ನು ಗುರುತಿಸಿ ನಾಶದಿಂದ ರಕ್ಷಿಸಲ್ಪಡುವ ಸ್ಥಿತಿಯನ್ನು ಅಲ್ಲಾಹನು ಉಂಟುಮಾಡಲಿ – ಆಮೀನ್.

♦

**5ನೇ ಪುಟದಿಂದ**

**ಮಾನವರಿಗೆ ಸೇವೆ**

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋಚ್ಚ ನಾಯಕ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಹೇಳುತ್ತಾರೆ:

"ನಷ್ಟಕ್ಕೊಳಗಾದವರ, ನಿರಾಶೆಯಿಂದ ನೋವನ್ನು ಅನುಭವಿಸುವವರ ಮತ್ತು ದುರ್ಬಲರ ಕಣ್ಣೀರನ್ನು ಒರಸಲು ಸಿದ್ಧರಾಗಿರಿ."

ಕಷ್ಟಪಡುವವರಿಗೆ ಸಾಂತ್ವನ ನೀಡಬೇಕಾದುದು ಪ್ರತಿಯೊಬ್ಬ ಮುಸ್ಲಿಮನ ಪ್ರಥಮ ಕರ್ತವ್ಯವಾಗಿದೆ. ಎಲ್ಲಿಯಾದರೂ ಜನರು ಕಷ್ಟಪಡುತ್ತಾ ಇದ್ದು ಯಾವುದಾದರೂ ಅನುಕೂಲತೆಯಿಂದ ವಂಚಿತರಾಗಿದ್ದರೆ ನಾವು ಅವರಿಗೆ ಸಹಾಯವನ್ನು ಒದಗಿಸಿಕೊಡಬೇಕು.

ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಅವಶ್ಯಕವಾದುದೇನೆಂದರೆ ಗಾಯಗೊಂಡವರ ಗಾಯಗಳಿಗೆ ನಾವು ಪಟ್ಟಿ ಕಟ್ಟಿ ಅವರ ನೋವನ್ನು ನಿವಾರಿಸಬೇಕು. ಯಾತನೆಯಿಂದ ಬಳಲುವವರ ಆತಂಕಗಳನ್ನು ನಿವಾರಿಸಬೇಕು. ನಾವು ಯಾವುದೇ ಕೃತಜ್ಞತೆಯನ್ನಾಗಲಿ, ಪ್ರತಿಫಲವನ್ನಾಗಲಿ ಆಶಿಸದೆ ಪ್ರೀತಿಯನ್ನೂ ಕಾರುಣ್ಯವನ್ನೂ ಅವರಿಗೆ ತೋರಿಸಬೇಕು.

ನಾವು ಸದಾ ನಮ್ಮ ಶಕ್ತಿ ಸಾಮರ್ಥ್ಯಗಳನ್ನೂ ನಮ್ಮ ನೈಪುಣ್ಯಗಳನ್ನೂ ನಿಷ್ಕಳಂಕ ಜನರ ಕಷ್ಟಗಳನ್ನು ನಿವಾರಿಸಲು ಮತ್ತು ದುಃಖದಿಂದ ಬಳಲುವವರಿಗೆ ಸಾಂತ್ವನ ನೀಡಲು ಅತ್ಯಧಿಕವಾಗಿ ಬಳಸಬೇಕು.

ಅಹ್ಮದಿಯಾ ಜಮಾಅತ್ ಸ್ಥಾಪಕರೂ ವಾಗ್ದತ್ತ ಮಸೀಹರೂ ಆಗಿರುವ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್(ಅ) ಒಮ್ಮೆ ಹೀಗೆ ಹೇಳಿದರು: "ನನ್ನ ಉದ್ದೇಶ, ನನ್ನ ಅಭಿಲಾಷೆ ಮತ್ತು ಹೃತ್ಪೂರ್ವಕ ಆಶೆ ಮಾನವರ ಸೇವೆ ಮಾಡುವುದಾಗಿದೆ. ಇದು ನನ್ನ ಕೆಲಸ, ಇದು ನನ್ನ ಧರ್ಮ, ಇದು ನನ್ನ ಅಭ್ಯಾಸ ಮತ್ತು ಇದು ನನ್ನ ಜೀವಿತ ಧ್ಯೇಯವಾಗಿದೆ." ♦

## LOVE FOR HONESTY AND HATRED FOR DISHONESTY

## ಪ್ರಾಮಾಣಿಕತೆಯೊಂದಿಗೆ ಪ್ರೀತಿ ಮತ್ತು ಅಪ್ರಾಮಾಣಿಕತೆಯೊಂದಿಗೆ ದ್ವೇಷ

# ನ್ಯೂಝಿಲೇಂಡ್ ಆಕ್ರಮಣ ಖಂಡನೀಯ

# ಪ್ರಧಾನ ಮಂತ್ರಿಯ ಕರ್ಮಧೀರತೆ ಆದರ್ಶನೀಯ

– ಹಝ್ರತ್ ಖಲೀಫತುಲ್ ಮಸೀಹ್

ನ್ಯೂಝಿಲೇಂಡ್ ಕ್ರೈಸ್ಟ್ ಚರ್ಚ್ ನಗರದಲ್ಲಿ ನಡೆದ ಮಸ್ಜಿದ್ ಆಕ್ರಮಣವನ್ನು ಅಹ್ಮದಿಯಾ ಮುಸ್ಲಿಂ ಜಮಾಅತಿನ ಖಲೀಫ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಖಂಡಿಸಿದ್ದಾರೆ. ಆಕ್ರಮಣದ ನಂತರ ನ್ಯೂಝಿಲೇಂಡ್ ಪ್ರಧಾನಮಂತ್ರಿ ಜಸಿಂದ ಆರ್ಡರ್ನ್ ಮತ್ತು ನ್ಯೂಝಿಲೇಂಡ್ ಜನತೆಯ ವರ್ತನೆ ಅನುಕರಣೀಯವೆಂದು ವರ್ಣಿಸುತ್ತಾ ಖಲೀಫರು ಅಭಿನಂದಿಸಿದರು. ಲಂಡನಿನಲ್ಲಿ ಶುಕ್ರವಾರ ಪ್ರವಚನದ ಕೊನೆಯಲ್ಲಿ ಆಕ್ರಮಣದ ಬಗ್ಗೆ ತನ್ನ ದುಃಖವನ್ನು ಅವರು ಸೂಚಿಸಿದರು. ಅವರು ಹೇಳಿದರು: "ಮಕ್ಕಳ ಸಹಿತ ಅನೇಕ ನಿರಪರಾಧಿಗಳಾದ ಜನರು ಧಾರ್ಮಿಕ ಮತ್ತು ವಂಶೀಯ ವಿದ್ವೇಷದಿಂದ ಕೊಲ್ಲಲ್ಪಟ್ಟರು. ಅಲ್ಲಾಹನ ಕಾರುಣ್ಯ ಅವರೆಲ್ಲರ ಮೇಲೆ ವರ್ಷಿಸಲಿ. ಸಂತಪ್ತ ಕುಟುಂಬಗಳಿಗೆ ಅಲ್ಲಾಹು ಸಹನೆಯನ್ನು ದಯಪಾಲಿಸಲಿ."

ನ್ಯೂಝಿಲೇಂಡ್ ಸರಕಾರ ಕೂಡಲೇ ಪ್ರಕಟಿಸಿದ ಸಹಾನುಭೂತಿ ಮತ್ತು ಅವರ ಉತ್ತರವಾದಿತ್ವ ಪ್ರಜ್ಞೆಯನ್ನು ಪ್ರಶಂಸಿಸಿ ಖಲೀಫ ಹೇಳಿದರು: ಮುಸ್ಲಿಂ ಸರಕಾರಗಳು ನ್ಯೂಝಿಲೇಂಡ್ ಸರಕಾರದ ನೇತಾರರ ಮಾದರಿಯಿಂದ ಕಲಿಯಲಿ ಮತ್ತು ಚಿಂತನೆ ಮಾಡಲಿ. ಅವರು ಹೀಗೆ ನುಡಿದರು: "ನ್ಯೂಝಿಲೇಂಡ್ ಸರಕಾರ, ಮುಖ್ಯವಾಗಿ ಅವರ ಪ್ರಧಾನಮಂತ್ರಿ ಅತಿ ಉತ್ತಮ ಹಾಗೂ ಧಾರ್ಮಿಕವಾಗಿ ಉನ್ನತವೂ ಆದ ರೀತಿಯಲ್ಲಿ ದಾಳಿಯ ಬಗ್ಗೆ ಸ್ಪಂದಿಸಿದ್ದಾರೆ. ಮುಸ್ಲಿಂ ರಾಷ್ಟ್ರಗಳು ಈ ಮಾದರಿಯಿಂದ ಕಲಿಯಬೇಕೆಂದು ನಾನು ಅವರೊಡನೆ ವಿನಂತಿಸುತ್ತೇನೆ."

ಎಲ್ಲರೂ ಎಲ್ಲ ವಿಧ ದ್ವೇಷದ ರೂಪಗಳನ್ನು ಮೂಲೋತ್ಪಾಟನೆ ಮಾಡಲು ಅವರವರ ಕರ್ತವ್ಯಗಳನ್ನು ನಿರ್ವಹಿಸಬೇಕೆಂದೂ ಖಲೀಫ ಅಪೇಕ್ಷಿಸಿದರು. ಅವರು ಹೇಳಿದರು: "ನ್ಯೂಝಿಲೇಂಡಿನ ಜನಸಾಮಾನ್ಯರು ಪೀಡಿತರಿಗೆ ಅವರ ಪೂರ್ಣ ಬೆಂಬಲವನ್ನು ವಾಗ್ದಾನ ಮಾಡಿದರು. ನ್ಯೂಝಿಲೇಂಡಿನ ರೇಡಿಯೋ ಮತ್ತು ಟಿ.ವಿ. ಮುಸ್ಲಿಮರೊಂದಿಗೆ ಐಕ್ಯವನ್ನು ಪ್ರಕಟಿಸುತ್ತಾ ಅವರ ಪ್ರಾರ್ಥನೆಗೋಸ್ಕರ ಅಧ಼ಾನ್ ಕರೆಯನ್ನು ಪ್ರಸಾರ ಮಾಡಿದವು. ಹಲವು ಕ್ರಿಸ್ತೀಯ ಮಹಿಳೆಯರು ಮುಸ್ಲಿಂ ಮಹಿಳೆಯರೊಂದಿಗೆ ಅನುಕಂಪ ಮತ್ತು ಬೆಂಬಲ ಪ್ರಕಟಿಸುತ್ತಾ ಶಿರೋವಸ್ತ್ರ ಧರಿಸಿದರು. ಅಲ್ಲಾಹು ಅವರ ಸಾತ್ವಿಕವಾದ ವರ್ತನೆಗಳನ್ನು ಸ್ವೀಕರಿಸಲಿ."

ಮುಸ್ಲಿಂ ಉಗ್ರವಾದಿಗಳು ಇದಕ್ಕೆ ಪ್ರತಿಕಾರ ಮಾಡುವ ಆಹ್ವಾನವನ್ನು ಅವರು ಖಂಡಿಸಿದರು. ಅವರು ಹೇಳಿದರು: "ಹಗೆ ಸಾಧಿಸುವುದರಿಂದ ವಿದ್ವೇಷ ಮತ್ತು ಶತ್ರುತೆಯ ಎಂದಿಗೂ ಕೊನೆಗೊಳ್ಳದ ಒಂದು ವಿಷ ವೃತ್ತವನ್ನು ಸೃಷ್ಟಿಸಲು ಮಾತ್ರವೇ ಸಾಧ್ಯವಾಗುವುದು. ಅಂತಹ ಉಗ್ರವಾದಿ ಗುಂಪುಗಳನ್ನು ಅಲ್ಲಾಹು ಲೋಕದಿಂದ ನಿರ್ಮೂಲನ ಮಾಡಿ ಲೋಕದಲ್ಲಿ ಇಸ್ಲಾಮಿನ ಯಥಾರ್ಥವಾದ ಶಾಂತಿಪೂರ್ಣವಾದ ಅಧ್ಯಾಪನೆಗಳು ಪ್ರಚಾರಗೊಳ್ಳಲಿ."

# ಮಳೆಗಾಗಿ ವಿಶೇಷ ನಮಾಝ್, ಪ್ರಾರ್ಥನೆ

ಮಂಗಳೂರು: ಮೇ 17ರಂದು ಪಾಂಡೇಶ್ವರದಲ್ಲಿರುವ ಅಹ್ಮದಿಯಾ ಮುಸ್ಲಿಂ ಮಸೀದಿಯಲ್ಲಿ ಶುಕ್ರವಾರ ಜುಮಾ ನಮಾಝಿನ ನಂತರ ಮಳೆಗಾಗಿ ವಿಶೇಷ ನಮಾಝ್ ಮತ್ತು ಪ್ರಾರ್ಥನೆ ಮಾಡಲಾಯಿತು. ಮೌಲವಿ ಅಬ್ದುಲ್ ಬಾಸಿತ್ ಸಾಹಿಬ್ ನಮಾಝ್‌ನ ನೇತೃತ್ವ ವಹಿಸಿದರು. ಪುರುಷರೂ ಮಹಿಳೆಯರೂ ಭಾಗವಹಿಸಿದರು.

# ಹ್ಯುಮಾನಿಟಿ ಫಸ್ಟ್ ಇಂಡಿಯಾದಿಂದ ಕುಡಿಯುವ ನೀರಿನ ಕೊಡುಗೆ

ಮಡಿಕೇರಿ, ಏ. 26: ಹ್ಯುಮಾನಿಟಿ ಫಸ್ಟ್ ಇಂಡಿಯಾ ಸಂಸ್ಥೆ ವತಿಯಿಂದ ನಗರದ ಹೊರ ವಲಯದ ಕರ್ಣಂಗೇರಿ ಗ್ರಾಮದಲ್ಲಿ ಕೊರೆಯಲಾದ ಕುಡಿಯುವ ನೀರಿನ ಕೊಳವೆ ಬಾವಿ ಹಾಗೂ ನೀರಿನ ಟ್ಯಾಂಕ್ ಅನ್ನು ಸಾರ್ವಜನಿಕ ಬಳಕೆಗೆ ಲೋಕಾರ್ಪಣೆ ಮಾಡಲಾಯಿತು.

ಈ ಸಂಬಂಧ ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ ಹ್ಯುಮಾನಿಟಿ ಫಸ್ಟ್ ಇಂಡಿಯಾ ಸಂಸ್ಥೆಯ ದಕ್ಷಿಣ ಕರ್ನಾಟಕ ವಲಯದ ಉಸ್ತುವಾರಿ ಜೆ.ಎಂ. ಮುಹಮ್ಮದ್ ಶರೀಫ್ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಹ್ಯುಮಾನಿಟಿ ಫಸ್ಟ್ ಇಂಡಿಯಾ ಸಂಸ್ಥೆಯು ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಸಹೋದರ ಸಂಸ್ಥೆಯಾಗಿದ್ದು, ಭಾರತದಲ್ಲೂ ಇದು ನೋಂದಾಯಿತ ಸಂಸ್ಥೆಯಾಗಿದೆ. ಈ ಸಂಸ್ಥೆಯ ಮುಖ್ಯ ಉದ್ದೇಶ ಪ್ರಕೃತಿ ವಿಕೋಪದ ಸಂತ್ರಸ್ತರಿಗೆ ಸಹಾಯ ಹಾಗೂ ಪರಿಹಾರವನ್ನು ಯಾವುದೇ ಜಾತಿ, ಧರ್ಮ, ಬಣ್ಣ ಹಾಗೂ ರಾಜಕೀಯದ ಭೇದಭಾವವಿಲ್ಲದೆ ಒದಗಿಸುವುದಾಗಿದೆ. ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವುದು, ಆರೋಗ್ಯ ಹಾಗೂ ಪ್ರಾಣ ರಕ್ಷಣೆ, ಕುಡಿಯುವ ನೀರಿನ ವ್ಯವಸ್ಥೆ, ಬಡತನ ನಿರ್ಮೂಲನೆ ಇವುಗಳು ನಮ್ಮ ಸಂಸ್ಥೆಯ ಇನ್ನಿತರ ಮುಖ್ಯ ಕೆಲಸ ಕಾರ್ಯವಾಗಿದೆ ಎಂದು ಹೇಳಿದರು.

ಕಳೆದ ಆಗಸ್ಟ್‌ನಲ್ಲಿ ಕೊಡಗಿನಲ್ಲಿ ನಡೆದ ಭೀಕರ ಪ್ರಕೃತಿ ದುರಂತದ ಸಂದರ್ಭದಲ್ಲಿ ಸಂಸ್ಥೆಯ ವತಿಯಿಂದ ಮಡಿಕೇರಿಯ ಕೂರ್ಗ್ ಕಮ್ಯುನಿಟಿ ಹಾಲ್‌ನಲ್ಲಿ ನಿರಾಶ್ರಿತರಿಗೆ ಪರಿಹಾರ ಕೇಂದ್ರ ತೆರೆದು 250ಕ್ಕೂ ಅಧಿಕ ನಿರಾಶ್ರಿತರಿಗೆ 14 ದಿನಗಳ ಕಾಲ ಊಟ, ವಸತಿ ಹಾಗೂ ಪರಿಹಾರ ಒದಗಿಸಿದ ಬಗ್ಗೆ ಹಾಗೂ ಮಡಿಕೇರಿ ನಗರದಲ್ಲಿ ಕುಸಿದ 15ಕ್ಕೂ ಅಧಿಕ ಮನೆಗಳನ್ನು ಸಂಸ್ಥೆಯ ವತಿಯಿಂದ ದುರಸ್ಥಿ ಮಾಡಿದ ಬಗ್ಗೆ ವಿವರಿಸಿದರು.

ಕೆ. ನಿಡುಗಣೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ರೀಟಾ ಮುತ್ತಣ್ಣ ಮಾತನಾಡಿ, ಮಾನವರಲ್ಲಿ ಎರಡೇ ಜಾತಿ; ಒಂದು ಹೆಣ್ಣು ಇನ್ನೊಂದು ಗಂಡು. ಆರಾಧನೆ ಯಾವ ರೀತಿ ಮಾಡಿದರೂ ತಲಪುವುದು ಒಂದೇ ಭಗವಂತನಿಗೆ. ಕುಡಿಯುವ ನೀರು ಒದಗಿಸುವುದಕ್ಕಿಂತ ಶ್ರೇಷ್ಠ ಕೆಲಸ ಬೇರೆ ಇಲ್ಲ. ಹ್ಯುಮಾನಿಟಿ ಫಸ್ಟ್ ಇಂಡಿಯಾ ಸಂಸ್ಥೆಯ ವತಿಯಿಂದ ಮಾಡುತ್ತಿರುವ ಈ ಕೆಲಸ ಬಹಳ ಉತ್ತಮವಾದ ಕೆಲಸ; ಇದನ್ನು ಮುಂದುವರಿಸಿಕೊಂಡು ಹೋಗುವಂತೆ ಹೇಳಿದರು. ಗ್ರಾಮ ಪಂಚಾಯಿತಿ ಸದಸ್ಯ ಜಾನ್‌ಸನ್ ಪಿಂಟೋ ಮಾತನಾಡಿ, ಕಳೆದ ವರ್ಷ ಆದ ಪ್ರಾಕೃತಿಕ ದುರಂತದಿಂದ ನೀರಿನ ಮೂಲಗಳು ಬದಲಾವಣೆಗೊಂಡು ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿದೆ. ದಾನಿಗಳಾದ ವಿ.ಜೆ ನಜೀರ್ ಅಹ್ಮದ್ ಅವರು ಹ್ಯುಮಾನಿಟಿ ಫಸ್ಟ್ ಇಂಡಿಯಾ ಸಂಸ್ಥೆಯ ಮುಖಾಂತರ ಮಾಡುತ್ತಿರುವ ಈ ಕೆಲಸ ಬಹಳ ಉತ್ತಮವಾಗಿದ್ದು, ಇನ್ನಷ್ಟು ದಾನಿಗಳು ಕುಡಿಯುವ ನೀರಿನ ಬವಣೆ ನೀಗಿಸಲು ಮುಂದೆ ಬರಲೆಂದು ಆಶಿಸಿದರು.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಅಧ್ಯಕ್ಷ ಎಂ.ಬಿ. ಝುಹೀರ್ ಅಹ್ಮದ್ ಮಾತನಾಡಿ, ಕೊಡಗಿನಲ್ಲಿ ನಡೆದ ಪ್ರಕೃತಿ ದುರಂತದ ಸಂದರ್ಭದಲ್ಲಿ ಸಂಸ್ಥೆಯ ವತಿಯಿಂದ ಕೈಗೊಂಡ ಪರಿಹಾರ ಕಾರ್ಯವನ್ನು ನೆನಪಿಸಿದರು. ಇಂತಹ ಕುಡಿಯುವ ನೀರಿನ ಘಟಕ ಇನ್ನಷ್ಟು ಮಾಡಲು ಸಾಧ್ಯವಾಗಲಿ ಎಂದು ಆಶಿಸಿದರು.

ನಂತರ ರಿಬ್ಬನ್ ಕಟ್‌ಮಾಡಿ ಮಹಿಳೆಯೊಬ್ಬರಿಗೆ ಬಿಂದಿಗೆ ನೀರನ್ನು ಕೊಡುವ ಮುಖಾಂತರ ಸಾರ್ವಜನಿಕ ಬಳಕೆಗೆ ಬಿಟ್ಟುಕೊಡಲಾಯಿತು. ಈ ಸಂದರ್ಭ ಗ್ರಾ.ಪಂ. ಸದಸ್ಯರಾದ ದೇವಕಿ ದಿನೇಶ್, ಪ್ರೇಮ್ ಕುಮಾರ್, ಸಂಸ್ಥೆಯ ಕಾರ್ಯಕರ್ತರು, ಗ್ರಾಮಸ್ಥರು ಹಾಜರಿದ್ದರು. ಕೆ.ಎಂ. ಇಬ್ರಾಹಿಂ ನಿರೂಪಿಸಿದರು.

**(ಶಕ್ತಿ 27–4–2019)**

# ದೇವನ ಅನುಗ್ರಹ ಪ್ರಾಪ್ತಿಗೆ ಪ್ರಾರ್ಥನೆ ಅತ್ಯುತ್ತಮ ಮಾರ್ಗ

**ಸಂ.ಕ. ಸಮಾಚಾರ ಕಲಬುರಗಿ**

ಸಕಲ ಸೃಷ್ಟಿಗಳ ಕರ್ತನಾದ ಅಲ್ಲಾಹನ ಅನುಗ್ರಹ ಪ್ರಾಪ್ತಿಗಾಗಿ ಪ್ರಾರ್ಥನೆ ಅತ್ಯುತ್ತಮ ಮಾರ್ಗವಾಗಿದೆ ಎಂದು ಮೌಲ್ವಿ ನೂರುಲ್ ಹಕ್ ಹೇಳಿದರು. ಇಲ್ಲಿನ ತಾರಫೈಲ್ ಬಡಾವಣೆಯ ರಹ್‌ಮತ್ ನಗರದ (ದಾರ್ ಉಲ್ ಝಿಕರ್) ಅಹ್ಮದಿಯಾ ಮುಸ್ಲಿಮ್ ಸಮಾಜದ ಮಿಷನ್ ಹೌಸ್‌ನಲ್ಲಿ ಆಯೋಜಿಸಿದ್ದ ಮಸೀಹ್ ಮೌಊದ್ (ವಾಗ್ದತ್ತ ಮಸೀಹ್) ದಿನಾಚರಣೆಯಲ್ಲಿ ಮಾತನಾಡಿದ ಅವರು, ಭಕ್ತ ದಾಸರ ಪ್ರಾರ್ಥನೆಗಳು ಸ್ವೀಕೃತವಾಗಲು ಪ್ರವಾದಿ ಮುಹಮ್ಮದ್ ಪೈಗಂಬರ್ ಅವರಿಗೆ ದುರೂದ್ ಮತ್ತು ಸಲಾಮ್ ಕಳಿಸುವುದು ಕಡ್ಡಾಯವಾಗಿದೆ. ದೇವನ ಅನುಗ್ರಹ ಮತ್ತು ಅವನ ಸಾಮೀಪ್ಯ ಪಡೆಯಲು ಪ್ರವಾದಿ ಅವರ ಅನುಕರಣೆ ಅತ್ಯುತ್ತಮ ಮತ್ತು ನೇರವಾದ ಏಕೈಕ ಮಾರ್ಗವಾಗಿದೆ ಎಂದು ಸ್ವಯಂ ಅಲ್ಲಾಹನೇ ಸ್ಪಷ್ಟಪಡಿಸಿದ್ದಾನೆ ಎಂದರು.

ಸಮಾಜದ ಜಿಲ್ಲಾಧ್ಯಕ್ಷ ಖುರೇಷಿ ಮುಹಮ್ಮದ್ ಅಬ್ದುಲ್ಲಾ, ಸೇವಕ ವಿಭಾಗದ ಮುಖ್ಯ ಸೇವಕ ಅಬ್ದುಲ್ ಖಾದಿರ ಸಜ್ಜಿ, ಅಹ್ಮದಿಯಾ ಮುಸ್ಲಿಮ್ ಸಮಾಜದ ಮಾಜಿ ಅಧ್ಯಕ್ಷ ಮುಹಮ್ಮದ್ ವಸೀಮ್ ಅಹ್ಮದ್ ನೂರ್ ಮಾತನಾಡಿ, ದೇವನ ನಡವಳಿಕೆ ಮತ್ತು ಇತಿಹಾಸದಿಂದ ತಿಳಿಯುವುದೇನೆಂದರೆ ಇಲ್ಲಿಯವರೆಗೂ ವಿಶ್ವದಲ್ಲಿ ಅವತರಿಸಿದ ಎಲ್ಲ ಪ್ರವಾದಿಗಳನ್ನು ಸುಳ್ಳುಗಾರನೆಂದು ಹಣೆಪಟ್ಟಿ ಕಟ್ಟದೇ ಜನ ಬಿಡಲಿಲ್ಲ. ಹಾಗೆಯೇ ಪ್ರವಾದಿಗಳ ಭವಿಷ್ಯವಾಣಿಯಂತೆ ಅವತರಿಸಿದ ವಾಗ್ದತ್ತ ಮಸೀಹರ ಅವತಾರವನ್ನು ನಿರಾಕರಿಸುವುದು ಸಹಜವಾದ ಪ್ರಕ್ರಿಯೆಯಾಗಿದೆ ಎಂದರು. ತಾರಿಖ್ ಅಹ್ಮದ್ ಅವರು, ಪವಿತ್ರ ಖುರ್‌ಆನ್ ಪಠಣ ಮಾಡಿದರು. ಡಾ. ಅಬ್ದುಲ್ಲ ಆಬಿದ್ ಸಜ್ಜಿ ಮತ್ತು ಕಾಮಿಲ್ ಅಹ್ಮದ್ ಲಾಡ್ಜಿ ಅವರು ಭಕ್ತಿಗೀತೆ ನಝ್ಮ್ ಹಾಡಿದರು.

**(ಸಂಯುಕ್ತ ಕರ್ನಾಟಕ 27–3–2019)**

---

# ಅಹ್ಮದಿಯಾ: ರೋಗಿಗಳಿಗೆ ಹಣ್ಣುಹಂಪಲು ವಿತರಣೆ

ಮಹಾನಗರ, ಮೇ 3: ಅಹ್ಮದಿಯಾ ಮುಸ್ಲಿಂ ಜಮಾಅತ್, ಮಂಗಳೂರು ಇದರ ಉಪ ಘಟಕಗಳಾದ ಮಜ್ಲಿಸ್ ಅನ್ಸಾರುಲ್ಲಾಹ್ ಮತ್ತು ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ವತಿಯಿಂದ ನಗರದ ಲೇಡಿಗೋಶನ್ ಆಸ್ಪತ್ರೆಯ ಸುಮಾರು 300 ಮಂದಿ ರೋಗಿಗಳಿಗೆ ಹಣ್ಣು ಹಂಪಲುಗಳನ್ನು ವಿತರಿಸಲಾಯಿತು.

ಸಂಘಟನೆಯ ಅಧ್ಯಕ್ಷ ಮುಹಮ್ಮದ್ ಯೂಸುಫ್, ಝಈಂ ಅನ್ಸಾರುಲ್ಲಾಹ್, ಬಿ.ಎಸ್. ಅಬ್ದುಲ್ ರಹೀಂ, ಖಾಇದ್ ಖುದ್ದಾಮುಲ್ ಅಹ್ಮದಿಯಾ ತನ್ವೀರ್ ಅಖ್ತರ್, ಉಪ ಖಾಇದ್ ವಿ.ಎ. ರಶೀದ್ ಮೊದಲಾದವರಿದ್ದರು.

ಅಹ್ಮದಿಯಾ ಮುಸ್ಲಿಂ ಜಮಾಅತ್ ಒಂದು ಅಂತಾರಾಷ್ಟ್ರೀಯ ಸಂಘಟನೆಯಾಗಿದ್ದು, ಜಗತ್ತಿನ ವಿವಿಧ ಭಾಗಗಳಲ್ಲಿ ಇಂತಹ ಸಮಾಜ ಸೇವಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರುತ್ತಿದೆ. ಆಧ್ಯಾತ್ಮಿಕ ನಾಯಕರ ನೆರಳಿನಲ್ಲಿ ಕಾರ್ಯ ನಿರ್ವಹಿಸುತ್ತಿದೆ. 'ಎಲ್ಲರೊಂದಿಗೂ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ' ಎಂಬ ಧ್ಯೇಯದೊಂದಿಗೆ ಕಾರ್ಯಾಚರಿಸುತ್ತಿದೆ ಎಂದು ಅಧ್ಯಕ್ಷ ಮುಹಮ್ಮದ್ ಯೂಸುಫ್ ಅವರು ತಮ್ಮ ಪತ್ರಿಕಾ ಪ್ರಕಟನೆಯಲ್ಲಿ ತಿಳಿಸಿದ್ದಾರೆ. **(ಉದಯವಾಣಿ 4–5–2019)**

---

# ಅಹ್ಮದಿಯಾ ಕಿರುಹೊತ್ತಗೆ ವಿತರಣೆ

**ಮಂಗಳೂರು:** ಮೇ 5ರಂದು ಮಂಗಳೂರು ಅಹ್ಮದಿಯಾ ಮುಸ್ಲಿಂ ಜಮಾಅತಿನ ಉಪಘಟಕಗಳಾದ ಮಜ್ಲಿಸ್ ಅನ್ಸಾರುಲ್ಲಾಹ್ ಮತ್ತು ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ವತಿಯಿಂದ ಅಹ್ಮದಿಯಾ ಕಿರುಹೊತ್ತಗೆಗಳನ್ನು ವಿತರಿಸಲಾಯಿತು.

ಆರಂಭದಲ್ಲಿ ಜಮಾಅತ್ ಅಧ್ಯಕ್ಷ ಮುಹಮ್ಮದ್ ಯೂಸುಫ್‌ರವರ ನೇತೃತ್ವದಲ್ಲಿ ತಹಜ್ಜುದ್ ಮತ್ತು ಫಜರ್ ನಮಾಝ್‌ಗಳನ್ನು ನಿರ್ವಹಿಸಲಾಯಿತು. ನಂತರ ಝಈಂ ಅನ್ಸಾರುಲ್ಲಾ ಬಿ.ಎಸ್. ಅಬ್ದುರ್‌ರಹೀಂ ಮತ್ತು ಖಾಇದ್ ಖುದ್ದಾಮುಲ್ ಅಹ್ಮದಿಯಾ ತನ್ವೀರ್ ಅಖ್ತರ್ ನಾಯಕತ್ವದಲ್ಲಿ ಎರಡು ತಂಡಗಳಾಗಿ ಪಾಂಡೇಶ್ವರ ಸುತ್ತಮುತ್ತಲಿನ ಸುಮಾರು 100 ಮನೆಗಳಿಗೆ ಅಹ್ಮದಿಯಾ ಶಾಂತಿ ಸಂದೇಶವನ್ನು ಹಂಚಲಾಯಿತು. ಈ ಕಾರ್ಯಕ್ರಮದಲ್ಲಿ ತಬ್ಲೀಗ್ ಸೆಕ್ರೆಟರಿ ವಿ.ಎ. ರಶೀದ್, ಝಫರ್ ಅಹ್ಮದ್, ತಾರೀಖ್ ಅಹ್ಮದ್, ಸಯ್ಯದ್ ಮಲಿಕ್, ತಸ್ಲೀಮ್ ಅಹ್ಮದ್, ಭಾರತ್ ಆರ್., ಅನ್ಸಾರ್ ಎಂಬಿವರು ಭಾಗವಹಿಸಿದ್ದರು.

## ಮೌಲಾನ ಖುರ್‌ಶೀದ್ ಅಹ್ಮದ್ ಅನ್ವರ್ ಸಾಹಿಬ್



ಮೌಲಾನ ಖುರ್‌ಶೀದ್ ಅಹ್ಮದ್ ಅನ್ವರ್ ಸಾಹಿಬ್ ವಕೀಲುಲ್ ಮಾಲ್ ತಹ್‌ರೀಕ್ ಜದೀದ್ ಖಾದಿಯಾನ್ ಅವರು ಮಾರ್ಚ್ ದಿನಾಂಕ 19ರಂದು 73ನೇ ವಯಸ್ಸು ಪ್ರಾಯದಲ್ಲಿ ನಿಧನ ಹೊಂದಿದರು. **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**. ಅವರು ಮೂಸೀ ಆಗಿದ್ದರು. ಬಹಳ ಕಾಲದಿಂದ ಅವರು ಕ್ಯಾನ್ಸರ್ ರೋಗಿಯಾಗಿದ್ದರು. ಬಹಳ ಸಹನೆಯಿಂದ ರೋಗವನ್ನು ಅನುಭವಿಸಿದರು. ಅವರು ರೋಗಬಾಧೆಯಲ್ಲೂ ತಮ್ಮ ಹೊಣೆಗಾರಿಕೆ ನಿರ್ವಹಿಸುವುದರಲ್ಲಿ ಕೊರತೆ ಮಾಡಿರಲಿಲ್ಲ. ಅವರು ಕೊನೆಯುಸಿರು ತನಕ ಉತ್ತಮ ರೀತಿಯಲ್ಲಿ ತಮ್ಮ ಕರ್ತವ್ಯ ನಿರ್ವಹಿಸಲು ಪ್ರಯತ್ನಿಸುತ್ತಿದ್ದರು. ತಮ್ಮ ಹೊಣೆಗಾರಿಕೆ ಉತ್ತಮವಾಗಿ ನಿರ್ವಹಿಸಿದರು. ರೋಗದ ಸ್ಥಿತಿಯಲ್ಲಿ ಯಾವಾಗಲಾದರೂ ವಿಶ್ರಾಂತಿ ಪಡೆಯಲು ಹೇಳಿದಾಗ ಅವರು ಹೇಳುತ್ತಿದ್ದರು – ಕೊನೆಯುಸಿರು ತನಕ ಸೇವೆ ಮಾಡುತ್ತಾ ಅಲ್ಲಾಹನ ಸನ್ನಿಧಿಯಲ್ಲಿ ಹಾಜರಾಗಲು ನಾನು ಇಚ್ಛಿಸುತ್ತೇನೆ. ಅವರು ಈ ಪ್ರತಿಜ್ಞೆ ಈಡೇರಿಸಿದರು. ಅವರು ಅತ್ಯಂತ ವಿಧೇಯರೂ ಶ್ರಮ ಜೀವಿಯೂ ಪ್ರಾಮಾಣಿಕರೂ ಆಗಿದ್ದರು. ಆರ್ಥಿಕ ವಿಷಯಗಳಿಗೆ ಸಂಬಂಧಿಸಿ ಆಳವಾದ ಜ್ಞಾನ ಹೊಂದಿದ್ದರು. ಅವರಿಗೆ ವಕೀಲುಲ್ ಮಾಲ್ ಹುದ್ದೆ ನೀಡಿದಾಗ ತಹ್‌ರೀಕ್ ಜದೀದ್ ಚಂದಾ ಕೆಲವು ಲಕ್ಷಗಳದ್ದಾಗಿತ್ತು. ಅಲ್ಲಾಹನ ಅನುಗ್ರಹದಿಂದ ಅದು ಕೋಟಿಗಳಿಗೆ ತಲಪಿದೆ.

ಮೌಲಾನ ಖುರ್‌ಶೀದ್ ಸಾಹಿಬರು ಯುಗರಶ್ಮಿಯ ಹಿತೈಷಿಯಾಗಿದ್ದರು. ಅವರು ಯುಗರಶ್ಮಿಗೆ ತಹ್‌ರೀಕ್ ಜದೀದ್ ವತಿಯಿಂದ ವಾರ್ಷಿಕ ಧನಸಹಾಯ ಮಾಡುತ್ತಿದ್ದರಲ್ಲದೆ ವಿಶೇಷ ಸಂಚಿಕೆಗಳಿಗೆ ದೀರ್ಘವಾದ ಸಂದೇಶಗಳನ್ನು ಕಳುಹಿಸಿ ಪ್ರೋತ್ಸಾಹ ನೀಡುತ್ತಿದ್ದರು. ಅಲ್ಲಾಹನು ಅವರ ಪದವಿಯನ್ನು ಉನ್ನತಗೊಳಿಸಲಿ. ಮಗ್ಫಿರತ್ ಮತ್ತು ಜನ್ನತನ್ನು ದಯಪಾಲಿಸಲಿ – ಆಮೀನ್.

## ಎಂ.ಸಿ. ಮುಹಮ್ಮದ್ ಸಾಹಿಬ್



ಕೊಡಿಯತ್ತೂರ್: ಕೊಡಿಯತ್ತೂರ್ ಅಹ್ಮದಿಯಾ ಮುಸ್ಲಿಂ ಜಮಾಅತಿನ ದೀರ್ಘಕಾಲ ಪ್ರೆಸಿಡೆಂಟ್ ಆಗಿದ್ದ ಎಂ.ಸಿ. ಮುಹಮ್ಮದ್ ಸಾಹಿಬ್ ತನ್ನ 98ನೇ ವಯಸ್ಸಿನಲ್ಲಿ 2–3–2019ರಂದು ನಿಧನರಾದರು. ("ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್".)

ಸತ್ಯಾನ್ವೇಷಿಯಾಗಿದ್ದ ಅವರು ಅಹ್ಮದಿಯಾ ಸಾಹಿತ್ಯಗಳನ್ನು ಅಧ್ಯಯನಮಾಡಿ 1950ರಲ್ಲಿ ಅಹ್ಮದಿಯಾ ಜಮಾಅತಿಗೆ ಸೇರಿದರು. ಅವರು ದಾನ ಮಾಡಿದ 10 ಸೆಂಟ್ಸ್ ಜಾಗದಲ್ಲಿ ಕೊಡಿಯತ್ತೂರ್ ಮಸೀದಿ ನಿರ್ಮಿಸಲ್ಪಟ್ಟಿದೆ. ನಿರ್ಮಾಣದ ಅಧಿಕಾಂಶ ಖರ್ಚನ್ನು ಅವರೇ ವಹಿಸಿದ್ದರು. ನಂತರ ಮಸ್‌ಜಿದ್ ಮಹ್‌ಮೂದ್ ಎಂಬ ಹೆಸರಿನಲ್ಲಿ ಮಸೀದಿ ಪುನರ್ ನಿರ್ಮಾಣವಾಯಿತು. 1989 ಮೇ 28ರಂದು ಕೊಡಿಯತ್ತೂರಿನಲ್ಲಿ ನಡೆದ ಮುಬಾಹಲದಲ್ಲಿ ಅವರು ಸಹ ಭಾಗವಹಿಸಿದ್ದರು.

ಅವರು ಒಬ್ಬ ಉತ್ತಮ ಸಮಾಜ ಸೇವಕರೂ ಆಗಿದ್ದರು. ಯಾತ್ರೆಯ ಸೌಕರ್ಯ ಇಲ್ಲದಿದ್ದ ಹಳೆಯ ಕಾಲದಲ್ಲಿ ಕೊಡಿಯತ್ತೂರಿನಿಂದ ಕೋಝಿಕ್ಕೋಡಿಗೆ ಪ್ರಯಾಣಿಸಲು ಅವರು ಒಂದು ಜೀಪ್ ಪಡಕೊಂಡಿದ್ದರು. LOVE FOR ALL HATRED FOR NONE ಎಂಬ ಸ್ಟಿಕ್ಕರ್ ಅಂಟಿಸಿದ್ದ ಆ ವಾಹನದಲ್ಲಿ ಕಣ್ಣಿಗೆ ಕಂಡ ಯಾತ್ರಿಕರನ್ನೆಲ್ಲ ಕುಳ್ಳಿರಿಸಿ ಅವರು ಪ್ರಯಾಣಿಸುತ್ತಿದ್ದರು.

ಅವರು ಒಬ್ಬ ಅತಿಥಿಸತ್ಕಾರ ಪ್ರಿಯನಾಗಿದ್ದರು. ಅವರ ಮನೆ ಒಂದು ಅತಿಥಿ ಸತ್ಕಾರ ಮಂದಿರ ಸಹ ಆಗಿತ್ತು.

1998ರಲ್ಲಿ ಅಹ್ಮದಿಯಾ ಚತುರ್ಥ ಖಲೀಫ ಶ್ರೀಲಂಕಾ ಸಂದರ್ಶಿಸಿದಾಗ, ಅವರನ್ನು ಭೇಟಿಯಾಗಲು ಅವರು ಅಲ್ಲಿಗೆ ಹೋಗಿದ್ದರು. 2011ರಲ್ಲಿ ಪಂಚಮ ಖಲೀಫರನ್ನು ಅವರು ಜರ್ಮನಿಯಲ್ಲಿ ಸಂದರ್ಶಿಸಿದರು.

ಪತ್ನಿ, ಒಂಬತ್ತು ಮಕ್ಕಳು ಮತ್ತು ಅನೇಕ ಬಂಧು ಬಾಂಧವರನ್ನು ಅವರು ಅಗಲಿದ್ದಾರೆ. ಅಲ್ಲಾಹು ಅವರಿಗೆ ಮಗ್ಫಿರತ್ ಮತ್ತು ಜನ್ನತ್ತನ್ನು ದಯಪಾಲಿಸಲಿ – ಅಮೀನ್.

**LOVE FOR ALL - HATRED FOR NONE**

**ಎಲ್ಲರೊಂದಿಗೆ ಪ್ರೀತಿ ಯಾರೊಂದಿಗೂ ದ್ವೇಷವಿಲ್ಲ**

# ಶ್ರೀಲಂಕಾದ ಹತ್ಯಾಕಾಂಡ

ಅಲ್ಪಕಾಲದ ವಿರಾಮದ ನಂತರ ತಥಾಕಥಿತ ಇಸ್ಲಾಮೀ ಭಯೋತ್ಪಾದಕರು ಶ್ರೀಲಂಕಾದಲ್ಲಿ ಪುನಃ ತಮ್ಮ ವಿಧ್ವಂಸಕ ಕೃತ್ಯದ ಹೊಡೆತ ನೀಡಿದ್ದಾರೆ. ಎಲ್.ಟಿ.ಟಿ.ಇ. ಉಗ್ರರ ವಿಧ್ವಂಸಕ ಕೃತ್ಯಗಳಿಂದ ತತ್ತರಿಸಿಹೋಗಿದ್ದ ಶ್ರೀಲಂಕಾ ಕಳೆದ ಒಂದು ದಶಕದಿಂದ ಶಾಂತಿಯನ್ನು ಅನುಭವಿಸುತ್ತಿದ್ದಾಗ ಈ ಭಯೋತ್ಪಾದಕರು ಈ ಬೀಭತ್ಸ ಹತ್ಯಾಕಾಂಡ ನಡೆಸಿದ್ದಾರೆ.

ಚರ್ಚ್‌ಗಳು, ಪಂಚತಾರಾ ಹೋಟೆಲುಗಳು ಮೊದಲಾದ ಏಳೆಂಟು ಸ್ಥಳಗಳಲ್ಲಿ ಒಂದೇ ಸಮಯದಲ್ಲಿ ಆತ್ಮಹತ್ಯಾ ಬಾಂಬ್ ದಾಳಿ ನಡೆಸಿ ನಿರಪರಾಧಿಗಳಾದ ನೂರಾರು ಜನರನ್ನು ಆ ಭಯೋತ್ಪಾದಕರು ಕಗ್ಗೊಲೆ ಮಾಡಿದರು. 'ತಪ್ಪಾದ ಸ್ಥಳ'ದಲ್ಲಿ 'ತಪ್ಪಾದ ಕಾಲ'ದಲ್ಲಿ ಉಪಸ್ಥಿತರಿದ್ದುದೇ ಆ ನಿಷ್ಕಳಂಕ ಜನರು ಮಾಡಿದ 'ಅಪರಾಧ'ವಾಗಿತ್ತು.

ಕ್ರೈಸ್ತ ಸಹೋದರ ಸಹೋದರಿಯರಿಗೆ ಅತ್ಯಂತ ಪವಿತ್ರವಾದ ದಿನಗಳಲ್ಲಿ ಒಂದಾದ ಈಸ್ಟರ್ ದಿನದಂದು ಈ ಬಾಂಬ್ ಸ್ಫೋಟಗಳನ್ನು ವ್ಯವಸ್ಥೆಗೊಳಿಸಿದುದು ಈ ಭಯೋತ್ಪಾದಕರ ನಿಂದನೀಯ ಅಸಹಿಷ್ಣುತೆಗೆ ಸಾಕ್ಷ್ಯವಾಗಿದೆ. ಈ ಹತ್ಯಾಕಾಂಡವು ನ್ಯೂಝಿಲೇಂಡಿನ ಕ್ರೈಸ್ಟ್‌ಚರ್ಚ್ ನಗರದ ಎರಡು ಮಸ್‌ಜಿದ್‌ಗಳಲ್ಲಿ 2019 ಮಾರ್ಚ್ 15ರಂದು ಗುಂಡು ಹಾರಿಸಿ ನಡೆಸಲಾದ ಸಾಮೂಹಿಕ ಹತ್ಯಾಕಾಂಡಕ್ಕೆ ಪ್ರತೀಕಾರ ರೂಪದಲ್ಲಿದೆ ಎಂದು ತೋರುತ್ತದೆ.

ನ್ಯೂಝಿಲೇಂಡ್ ದೇಶದ ರಾಜಕೀಯ ನಾಯಕರೂ ಅಲ್ಲಿನ ಶಾಂತಿಪ್ರಿಯ ಜನತೆಯೂ ತಮ್ಮ ಸಂತಾಪವನ್ನು ನೊಂದ ಕುಟುಂಬಗಳಿಗೆ ಧಾರಾಳವಾಗಿ ಪ್ರಕಟಿಸಿದರು. ದೂರದ ಕೆನಡ ದೇಶದ ಪ್ರಧಾನ ಜಸ್ಟಿನ್ ಟ್ರೂಡೋ ಸಹ ಕ್ರೈಸ್ಟ್‌ಚರ್ಚ್ ಹತ್ಯಾಕಾಂಡದ ಬಗ್ಗೆ ಸಂತಾಪ ಸೂಚಿಸಿ ನ್ಯೂಝಿಲೇಂಡಿನ ನಿಸ್ಸಹಾಯಕರಾದ ಮುಸ್ಲಿಮರಿಗೆ ಬೆಂಬಲ ನೀಡುವ ಖಾತರಿ ನೀಡಿದರು. ಇಂತಹ ಹಿಂಸಾಚಾರ ಮತ್ತು ದೌರ್ಜನ್ಯಗಳ ಬಗ್ಗೆ ಪ್ರತಿಭಟನೆಯನ್ನು ಬಹಿರಂಗವಾಗಿ ಲೋಕದ ಎಲ್ಲ ಜನರು ಕಡ್ಡಾಯವಾಗಿ ಸೂಚಿಸಬೇಕಾದುದು ಆವಶ್ಯಕತೆಯಾಗಿದೆ.

ಶ್ರೀಲಂಕಾದಂತಹ ಒಂದು ಶಾಂತಮಯ ದೇಶದಲ್ಲಿ ಈ ಹತ್ಯಾಕಾಂಡ ಸಂಭವಿಸಲು ಕಾರಣವೇನು? ಆ ದೇಶ ಸುಲಭವಾಗಿ ಆಕ್ರಮಿಸಬಹುದಾದ ದೇಶವಾಗಿತ್ತೆಂದೇ? ಅಥವಾ ಒಂದು ದಶಕದ ಕಾಲದಿಂದ ಅಲ್ಲಿ ಶಾಂತಿ ಮತ್ತು ನೆಮ್ಮದಿ ಸ್ಥಾಪಿತವಾಗಿದ್ದ ಕಾರಣದಿಂದ ಅಲ್ಲಿನ ಸರಕಾರ ದೇಶೀಯ ಭದ್ರತೆಯನ್ನು ನಿರ್ಲಕ್ಷಿಸಿದ್ದರಿಂದಲೇ? ಕಾರಣಗಳು ಏನೇ ಇರಲಿ. ಭಯೋತ್ಪಾದಕರ ಈ ಬರ್ಬರ ಕೃತ್ಯದಿಂದ ಶ್ರೀಲಂಕಾದ ಶಾಂತಿಪ್ರಿಯ ಮುಸ್ಲಿಮರು ತುಂಬಾ ಕಷ್ಟ ನಷ್ಟಗಳಿಗೆ ಗುರಿಯಾಗಿದ್ದಾರೆ. ಅದರ ದುಷ್ಪರಿಣಾಮಗಳು ಶ್ರೀಲಂಕಾದ ಕರಾವಳಿಯಿಂದ ಈಚೆಗೆ ಭಾರತಕ್ಕೂ ವ್ಯಾಪಿಸಿದೆ. ಗಾಂಧಿಜೀ ಹೇಳಿದ್ದರು: ಕಣ್ಣಿಗೆ ಕಣ್ಣು ಎಂದು ಪ್ರತೀಕಾರ ಮಾಡಲು ಪ್ರಾರಂಭಿಸಿದರೆ ಲೋಕದ ಜನರೆಲ್ಲರೂ ಅಂಧರಾಗುವರು ಎಂದು. ಇದು ಹಾಗೆಯೇ ಆಗಿದೆ.

ಶ್ರೀಲಂಕಾದ ಇನ್ನೂರೈವತ್ತಕ್ಕಿಂತಲೂ ಹೆಚ್ಚು ನಿರಪರಾಧಿ ಜನರನ್ನು ನಿರ್ದಯವಾಗಿ ಹತ್ಯೆ ಮಾಡಿದ ತಥಾಕಥಿತ ISIS ಭಯೋತ್ಪಾದಕರು ತಾವು ಇಸ್ಲಾಮ್ ಧರ್ಮಕ್ಕೆ ಬಹಳ ದೊಡ್ಡ ಸೇವೆ ಮಾಡಿದುದಾಗಿ ಭಾವಿಸುತ್ತಿರಬಹುದು. ಆದರೆ ಪವಿತ್ರ ಖುರ್‌ಆನ್ ಅಂತಹ ಹತ್ಯೆಗಳನ್ನು ಖಡಾಖಂಡಿತವಾಗಿ ವಿರೋಧಿಸುತ್ತದೆ. ಅದು ಹೀಗೆ ಹೇಳಿದೆ: **"ಯಾರಾದರೂ ನಿರಪರಾಧಿಯಾದ ಒಬ್ಬನನ್ನು ಕೊಂದರೆ ಅವನು ಮನುಷ್ಯ ವರ್ಗವನ್ನೆಲ್ಲ ಕೊಂದಂತಾಗುತ್ತದೆ"** (5:33).

ಈ ಕಗ್ಗೊಲೆಯ ಪರಿಣಾಮ ನೊಂದವರಿಗೆ ಮಾತ್ರವಲ್ಲ, ಈ ಕೃತ್ಯ ಯಾರ ಹೆಸರಲ್ಲಿ ನಡೆಸಲಾಯಿತೋ ಆ ಜನರಿಗೂ ಎಂದರೆ ಲೋಕದಾದ್ಯಂತವಿರುವ ಮುಸ್ಲಿಮರಿಗೂ ಹಾನಿಕರವಾಗಿದೆ. ಇಸ್ಲಾಮ್ ಭಯೋತ್ಪಾದನೆಯನ್ನು ಪ್ರತಿಪಾದಿಸುವ ಧರ್ಮವೆಂಬ ತಪ್ಪು ಗ್ರಹಿಕೆಗೆ ಈಡಾದವರ ತಪ್ಪು ಗ್ರಹಿಕೆ ಇನ್ನಷ್ಟು ಬಲವತ್ತಾಗುವಂತಾಯಿತು. ಮಾನವೀಯತೆಯಿಲ್ಲದ ಇಂತಹ ಭಯೋತ್ಪಾದಕರು, ತಮ್ಮ ಇಂತಹ ಚಟುವಟಿಕೆಗಳಿಂದ ಇಸ್ಲಾಮನ್ನು ಭಯೋತ್ಪಾದಕ ಧರ್ಮವೆಂದು ಪ್ರದರ್ಶಿಸುತ್ತಿರುವಾಗ, ನಾವು ಇಸ್ಲಾಮ್ ಎಂದರೆ ಶಾಂತಿಯ ಧರ್ಮ ಎಂದು ಜನರಿಗೆ ಮನವರಿಕೆ ಮಾಡಿಕೊಡಲು ಅಯ್ಯೋ! ಹೇಗೆ ತಾನೆ ಸಾಧ್ಯ?

ವಾಸ್ತವಿಕವಾಗಿ ಭಯೋತ್ಪಾದಕರಿಗೆ ಯಾವ ಧರ್ಮವೂ ಇಲ್ಲ. ಒಬ್ಬ ನೈಜ ಮುಸ್ಲಿಮ್ ಭಯೋತ್ಪಾದಕನಾಗಲಾರ. ಅದೇ ರೀತಿ ಒಬ್ಬ ಭಯೋತ್ಪಾದಕ ಖಂಡಿತವಾಗಿಯೂ ನೈಜ ಮುಸ್ಲಿಮನಾಗಲಾರ. ಅಹ್ಮದೀ ಮುಸ್ಲಿಮರು ಯುರೋಪಿನಲ್ಲಿಯೂ ಅಮೇರಿಕ ಭೂಖಂಡದಲ್ಲಿಯೂ

ಇಸ್ಲಾಮಿನ ಶಾಂತಿ ಸಂದೇಶ ಹರಡುತ್ತಿರುವ ಹಾಗೆ ನಾವು ಸಹ ಶಕ್ತಿಯುತವಾಗಿ ಇಂತಹ ಸಂದೇಶಗಳನ್ನು ಹರಡುವ ಆವಶ್ಯಕತೆ ಈಗ ಇದೆ. ಅಹ್ಮದಿಯಾ ಮುಸ್ಲಿಮರ ಖಲೀಫರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಇಸ್ಲಾಮಿನ ಶಾಂತಿ ಸಂದೇಶವನ್ನು ರಾತ್ರಿ ಹಗಲು ಎಡೆಬಿಡದೆ ಬಿತ್ತರಿಸುತ್ತಿದ್ದಾರೆ. ಆದರೆ ದುರದೃಷ್ಟಕರವಾಗಿ ಅವು ತಲಪುವ ಕಿವಿಗಳು ಕಿವುಡಾಗಿವೆ.

ಪ್ರತೀಕ್ಷಿಸಿದ ಹಾಗೆ ಶ್ರೀಲಂಕಾದ ಸರಕಾರ ಭಯೋತ್ಪಾದಕರ ವಿರುದ್ಧ ತೀವ್ರ ಕ್ರಮಗಳನ್ನು ಕೈಗೊಂಡಿದೆ. ಭಯೋತ್ಪಾದಕರೆಂದು ಆಪಾದಿಸಲ್ಪಟ್ಟವರ ಸಂಪೂರ್ಣ ಕುಟುಂಬವನ್ನು ಅಲ್ಲಿನ ಭದ್ರತಾಪಡೆಗಳು ಧ್ವಂಸಗೊಳಿಸಿವೆ. ಕೊಲ್ಲಲ್ಪಟ್ಟವರಲ್ಲಿ ನಿರಪರಾಧಿ ಮಹಿಳೆಯರೂ ಮಕ್ಕಳೂ ಸೇರಿದ್ದಾರೆ. ದುರದೃಷ್ಟಕರವಾಗಿ ತಮ್ಮ ಕುಟುಂಬದ ಪುರುಷರು ಮಾಡಿದ ದುಸ್ಸಾಹಸದ ಫಲವನ್ನು ದುರದೃಷ್ಟಕರವಾಗಿ ಅವರು ಉಣ್ಣಬೇಕಾಯಿತು. ಶ್ರೀಲಂಕಾ ಸರಕಾರ ಬುರ್ಖಾಧಾರಣೆಯನ್ನು ನಿಷಿದ್ಧಗೊಳಿಸಿ, ಮುಖಪರದೆಯ ಮರೆಯಲ್ಲಿ ಭಯೋತ್ಪಾದಕ ಕೃತ್ಯಗಳನ್ನು ಮಾಡಬಹುದಾದ ಸಾಧ್ಯತೆಗಳನ್ನು ತಡೆಗಟ್ಟಲು ಹೀಗೆ ಮಾಡಲಾಗಿದೆ ಎಂದು ಹೇಳಿಕೊಂಡಿದೆ.

ನಮ್ಮ ದೇಶದಲ್ಲಿ ಮುಂಬಯಿಯ ಬಲಪಂಥೀಯ ಪಕ್ಷವಾದ ಶಿವಸೇನೆ ಶ್ರೀಲಂಕಾದ ಕ್ರಮದಿಂದ ಸ್ಫೂರ್ತಿಗೊಂಡು ಮೋದಿ ಸರಕಾರ ಕೂಡ ಬುರ್ಖಾಧಾರಣೆಯನ್ನು ನಿಷಿದ್ಧಗೊಳಿಸಬೇಕೆಂದು ಅಪೇಕ್ಷಿಸಿದೆ. ಇಂದಿನ ಕೇಂದ್ರ ಸರಕಾರ ಚುನಾವಣೆಯ ನಂತರ ಪುನಃ ಅಧಿಕಾರ ಗಳಿಸಿದರೆ ಪ್ರಾಯಶಃ ಭಾರತದ ಮುಸ್ಲಿಮ್ ಮಹಿಳೆಯರ ವಿರುದ್ಧ ಇಂತಹ ಕ್ರಮಗಳನ್ನು ಕೈಗೊಳ್ಳುವ ಸಾಧ್ಯತೆಯಿದೆ. ಆಡಳಿತ ನಡೆಸುವ ಪಕ್ಷದಲ್ಲಿ ಸಂಕುಚಿತ ಮನೋಭಾವದ ನಾಯಕರಿಗೆ ಯಾವ ಕೊರತೆಯೂ ಇಲ್ಲ. ಅವರು ಅಲ್ಪಸಂಖ್ಯಾತರನ್ನು ದಮನಿಸಲು ದೊರಕುವ ಸುವರ್ಣಾವಕಾಶಗಳನ್ನು ಕಸಿದುಕೊಳ್ಳಲು ಕಾಯುತ್ತಿದ್ದಾರೆ. ಅವರಲ್ಲಿ ಕೆಲವರು ಮುಸ್ಲಿಮರ ಮತದಾನದ ಹಕ್ಕನ್ನು ಕಿತ್ತುಕೊಳ್ಳಲು ಕರೆ ನೀಡಿದ್ದಾರೆ. ತಥಾಕಥಿತ ಮುಸ್ಲಿಮ್ ಭಯೋತ್ಪಾದಕರ ಕೃತ್ಯಗಳನ್ನು ತಡೆಗಟ್ಟದಿದ್ದರೆ ಮತ್ತು ನಮ್ಮ ದೇಶದ ಬಲಪಂಥೀಯ ರಾಜಕಾರಣಿಗಳ ಕಾರಸ್ಥಾನಗಳನ್ನು ನಿಲ್ಲಿಸದಿದ್ದರೆ ಮುಸ್ಲಿಮರ ವಿರುದ್ಧ ಅನೇಕ ಕ್ರೌರ್ಯಭರಿತ ಕ್ರಮಗಳನ್ನು ಪ್ರತೀಕ್ಷಿಸಬಹುದಾಗಿದೆ.

ಮಂಗಳೂರಿನಂತಹ ಕೆಲವು ನಗರಗಳಲ್ಲಿ ಕಾಲೇಜುಗಳು ಬಿಗಿಯಾದ ವಸ್ತ್ರಧಾರಣೆ ನಿಯಮಗಳನ್ನು ಜಾರಿಗೊಳಿಸಿದ್ದು ಕಾಲೇಜಿನ ಕ್ಯಾಂಪಸ್ಸಿನಲ್ಲಿ ಮುಸ್ಲಿಮ್ ವಿದ್ಯಾರ್ಥಿನಿಯರು ಬುರ್ಖಾ ಧರಿಸುವುದನ್ನು ನಿಷಿದ್ಧಗೊಳಿಸಿವೆ. ಆಶ್ಚರ್ಯಕರವಾದ ವಿಷಯವೇನೆಂದರೆ ಮುಸ್ಲಿಮರ ಆಡಳಿತೆಯಲ್ಲಿರುವ ಒಂದು ವಿದ್ಯಾಭ್ಯಾಸ ಸಂಸ್ಥೆ ಕೂಡ ಈ ಕ್ರಮವನ್ನು ಕೈಗೊಳ್ಳಲು ಮುಂದಾಗಿದೆ. ಪ್ರಾಯಶಃ ತಮ್ಮ ಬಲಪಂಥೀಯ ಯಜಮಾನರನ್ನು ಮೆಚ್ಚಿಸಲು ಅದು ಅತ್ಯುತ್ಸಾಹಭರಿತವಾಗಿದೆ ಎಂದು ಕಾಣುತ್ತದೆ.

ಈ ಹತ್ಯಾಕಾಂಡದ ತಕ್ಷಣದ ಪರಿಣಾಮವಾಗಿ ಶ್ರೀಲಂಕಾದ ಮುಸ್ಲಿಮರು ಸಂಶಯದ ದೃಷ್ಟಿಯಿಂದ ವೀಕ್ಷಿಸಲ್ಪಡುತ್ತಿದ್ದಾರೆ. ಮುಸ್ಲಿಮೇತರ ಬಹುಸಂಖ್ಯಾತರಾದ ಅಲ್ಲಿನ ಜನರಿಂದ ಮುಸ್ಲಿಮರಿಗೆ ಬಾಡಿಗೆಗೆ ಮನೆಗಳು ದೊರಕದಂತಾಗಿದೆ. ಅಂತಹ ಮನೆಗಳಲ್ಲಿ ವಾಸಿಸುತ್ತಿದ್ದ ನೂರಾರು ಮುಸ್ಲಿಮರನ್ನು ಬಲಾತ್ಕಾರದಿಂದ ಹೊರಗಟ್ಟಲಾಗುತ್ತಿದೆ. ವಾಸ್ತವ್ಯರಹಿತರಾದ ಇಂತಹ ಮುಸ್ಲಿಮರು ಮಸೀದಿಗಳಲ್ಲಿ ಆಶ್ರಯ ಪಡೆಯುತ್ತಿದ್ದಾರೆ. ಹತ್ಯಾಕಾಂಡದ ಗಾಯ ಒಣಗಲು ದೀರ್ಘಕಾಲವೇ ಬೇಕಾಗಬಹುದು.

ಕೆಲವು ಅಹ್ಮದೀ ಮುಸ್ಲಿಮರು ಪಾಕಿಸ್ಥಾನದಿಂದ ಶ್ರೀಲಂಕಾಕ್ಕೆ ಉದ್ಯೋಗವನ್ನು ಅರಸಿಕೊಂಡು ಮತ್ತು ಅದಕ್ಕಿಂತಲೂ ಮುಖ್ಯವಾಗಿ ಪಾಕಿಸ್ಥಾನದಲ್ಲಿ ತಮ್ಮ ವಿರುದ್ಧ ಸರಕಾರ ಮತ್ತು ಜನರು ನಡೆಸುತ್ತಿರುವ ಹಿಂಸಾಚಾರದಿಂದ ತಪ್ಪಿಸಿಕೊಳ್ಳಲು ಶ್ರೀಲಂಕಾಕ್ಕೆ ಆಗಮಿಸಿದವರಾಗಿದ್ದಾರೆ. ಅವರ ಸ್ಥಿತಿ ಹುರಿಯುವ ಬಾಣಲೆಯಿಂದ ಬೆಂಕಿಗೆ ಬಿದ್ದ ಹಾಗಿದೆ. ಅವರಿಗೆ ಶ್ರೀಲಂಕಾದಲ್ಲಿ ವಾಸಿಸಲು ಅಥವಾ ಪಾಕಿಸ್ಥಾನಕ್ಕೆ ಮರಳಿ ಹೋಗಲು ಸಾಧ್ಯವಿಲ್ಲವಾಗಿದೆ.

ಶ್ರೀಲಂಕಾದಲ್ಲಿ ಶಾಂತಿಮಯ ಪರಿಸ್ಥಿತಿ ಸಂಪೂರ್ಣವಾಗಿ ಕೆಟ್ಟು ಹೋಗಿದೆ. ಅಲ್ಲಿ ಒಳ್ಳೆಯ ವಿಚಾರಗಳು ಜಯಗಳಿಸಲಿ ಎಂದೂ ಶಾಂತಿ ಮತ್ತು ನೆಮ್ಮದಿ ನೆಲೆಗೊಳ್ಳಲಿ ಎಂದೂ ಪ್ರಾರ್ಥಿಸಲು ಮಾತ್ರ ನಮಗೆ ಸಾಧ್ಯವಿದೆ.

ಅಹ್ಮದೀ ಮುಸ್ಲಿಮರಾದ ನಾವು ಹಝ್ರತ್ ವಾಗ್ದತ್ತ ಮಸೀಹರ ಉಪದೇಶಗಳನ್ನೂ ನಮ್ಮ ಪ್ರಿಯ ಖಲೀಫರ ನಿರ್ದೇಶಗಳನ್ನೂ ಅನುಸರಿಸಿ ಇಸ್ಲಾಮಿನ ನೈಜ ಶಾಂತಿ ಸಂದೇಶವನ್ನು ನಮ್ಮ ಮುಸ್ಲಿಮೇತರ ಸಹೋದರ ಸಹೋದರಿಯರಿಗೆ ತಲಪಿಸಲು ಮತ್ತು ಮುಸ್ಲಿಮ್ ಲೋಕದ ಯುವ ಜನರನ್ನು ಸುಧಾರಣೆ ಮಾಡಲು ಇನ್ನೂ ಮುತುವರ್ಜಿ ವಹಿಸಬೇಕಾದ ಆವಶ್ಯಕತೆಯಿದೆ.

**ಕೆ.ಕೆ. ಬದ್ರುದ್ದೀನ್**

**ಬೆಂಗಳೂರು.**

## ಝೂಕೀರ್ ನಾಯ್ಕ್‌ನ 16 ಕೋಟಿ ರೂ. ಆಸ್ತಿ ಜಪ್ತಿ

**ಹೊಸದಿಲ್ಲಿ,** ಜ. 19: ಹಣಕಾಸು ಅಕ್ರಮ ಆರೋಪ ಎದುರಿಸುತ್ತಿರುವ ವಿವಾದಾತ್ಮಕ ಇಸ್ಲಾಮಿಕ್ ವಿದ್ವಾಂಸ ಝೂಕೀರ್ ನಾಯ್ಕ್‌ಗೆ ಸೇರಿದ 16.40 ಕೋಟಿ ರೂ. ಮೌಲ್ಯದ ಆಸ್ತಿಯನ್ನು ಹೊಸದಾಗಿ ಜಾರಿ ನಿರ್ದೇಶನಾಲಯ ಮುಟ್ಟುಗೋಲು ಹಾಕಿಕೊಂಡಿದೆ. ಮುಂಬಯಿ ಮತ್ತು ಪುಣೆಯಲ್ಲಿ ನಾಯ್ಕ್ ಕುಟುಂಬ ಸದಸ್ಯರು ಹೊಂದಿರುವ ಆಸ್ತಿಪಾಸ್ತಿಗಳ ಜಪ್ತಿಗೆ ಆದೇಶ ಹೊರಡಿಸಲಾಗಿದೆ ಎಂದು ಇ.ಡಿ. ತಿಳಿಸಿದೆ. ಮುಂಬಯಿನ ಫಾತಿಮಾ ಹೈಟ್ಸ್, ಆಫಿಯಾ ಹೈಟ್ಸ್, ಪುಣೆಯಲ್ಲಿರುವ ಎನ್‌ಗ್ರೇಷಿಯಾ ಮತ್ತಿತರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಹಣಕಾಸು ಮೂಲದ ಬಗ್ಗೆ ಹಾಗೂ ನೈಜ ಮಾಲಕತ್ವದ ಬಗ್ಗೆ ಮಾಹಿತಿ ಬಚ್ಚಿಡುವ ಉದ್ದೇಶದಿಂದ, ನಾಯ್ಕ್ ಬ್ಯಾಂಕ್ ಖಾತೆಯಿಂದ ಮಾಡಲಾದ ಪಾವತಿಗಳನ್ನು ರೀಫಂಡ್ ಮಾಡಿ, ಆತನ ಪತ್ನಿ, ಮಗ ಮತ್ತು ಕುಟುಂಬದ ಇತರೆ ಸದಸ್ಯರ ಖಾತೆಗೆ ವರ್ಗಾಯಿಸಲಾಗಿದೆ. ತನಿಖೆ ವೇಳೆ ಈ ವಿಚಾರ ಬಹಿರಂಗವಾದ ಹಿನ್ನೆಲೆಯಲ್ಲಿ ಜಪ್ತಿ ಆದೇಶ ಹೊರಡಿಸಲಾಗಿದೆ. ಈ ಮೂಲಕ ಒಟ್ಟಾರೆ 50.49 ಕೋಟಿ ರೂ. ಮೌಲ್ಯದ ಆಸ್ತಿಗಳನ್ನು ಜಪ್ತಿ ಮಾಡಿದಂತಾಗಿದೆ. **(ಉದಯವಾಣಿ 20–1–2019)**

## 1500 ಮೀ. ಕೆಳಗೆ ಭಾರತೀಯರ ವಾಸ!

**ಕೋಲ್ಕತಾ,** ಜ. 21: ಭಾರತೀಯರು 6.5 ಕೋಟಿ ವರ್ಷಗಳ ಹಿಂದೆ ಭೂ ಮಟ್ಟಕ್ಕಿಂತ 1500 ಮೀ. ಕೆಳಗೆ ವಾಸಿಸುತ್ತಿದ್ದರು ಎಂದು ಐಐಟಿ ಖರಗ್‌ಪುರ ಸಂಶೋಧಕರು ಕಂಡುಕೊಂಡಿದ್ದಾರೆ. ವಿಜ್ಞಾನಿಗಳು ಇಷ್ಟು ಆಳದಲ್ಲಿ ಸೂಕ್ಷ್ಮಾಣು ಜೀವಿಗಳನ್ನು ಕಂಡುಕೊಂಡಿದ್ದಾರೆ. ದಕ್ಷಿಣ ಮತ್ತು ಪಶ್ಚಿಮ ಭಾರತದ ಡೆಕ್ಕನ್ ಟ್ರ್ಯಾಪ್‌ಗಳಲ್ಲಿ ಈ ಸೂಕ್ಷ್ಮಾಣು ಜೀವಿಗಳು ಕಂಡುಬಂದಿವೆ. ಸುಮಾರು 6.5 ಕೋಟಿ ವರ್ಷಗಳ ಹಿಂದೆ ಜ್ವಾಲಾಮುಖಿಯಿಂದಾಗಿ ಈ ಡೆಕ್ಕನ್ ಟ್ರ್ಯಾಪ್‌ಗಳು ನಿರ್ಮಾಣಗೊಂಡಿದ್ದು, ಇವು ನಮ್ಮ ಭೂಮಿಯ ಮೇಲೆ ಜೀವಿಗಳ ನಾಶಕ್ಕೆ ಕಾರಣವಾಗಿತ್ತು ಎಂದು ನಂಬಲಾಗಿದೆ. 1 ಕಿ.ಮೀ ಗಿಂತ ಆಳದಲ್ಲಿಯೂ ಬ್ಯಾಕ್ಟೀರಿಯಾಗಳು ಕಂಡುಬಂದಿರುವುದು ವಿಜ್ಞಾನಿಗಳಿಗೆ ಅಚ್ಚರಿ ಉಂಟುಮಾಡಿದೆ. ಇಲ್ಲಿ ಅತ್ಯಂತ ದುರ್ಗಮ ಕಲ್ಲುಗಳಿದ್ದು, ಬ್ಯಾಕ್ಟೀರಿಯಾಗಳು ಜೀವಿಸಲು ಸಾಕಷ್ಟು ಪೋಷಕಾಂಶಗಳು ಇರುವುದಿಲ್ಲ. ಹೀಗಾಗಿ ವಿಜ್ಞಾನಿಗಳು ಇನ್ನೂ ಹೆಚ್ಚಿನ ಅಧ್ಯಯನ ನಡೆಸಿ, ಈ ಭಾಗದಲ್ಲಿ ಹಿಂದೊಂದು ಕಾಲದಲ್ಲಿ ಜೀವಿಗಳಿದ್ದವು ಎಂದು ಕಂಡುಕೊಂಡಿದ್ದಾರೆ.

**(ಉದಯವಾಣಿ: 22–1–2019)**

## ಉಪವಾಸದಿಂದ ಆರೋಗ್ಯ ವೃದ್ಧಿ

ಉಪವಾಸ ಮನುಷ್ಯನ ವಯಸ್ಸಿಗೆ ಸಂಬಂಧಿಸಿದ ಕಾಯಿಲೆಗಳನ್ನು ನಿವಾರಿಸುತ್ತದೆ ಮತ್ತು ಆರೋಗ್ಯ ವೃದ್ಧಿಸುತ್ತದೆ ಎಂದು ಸಂಶೋಧನೆಯಿಂದ ತಿಳಿದುಬಂದಿದೆ. ಕ್ಯಾಲಿಫೋರ್ನಿಯಾ ಐರ್ವಿನ್ ವಿಶ್ವವಿದ್ಯಾನಿಲಯದ ಅಧ್ಯಯನದ ಪ್ರಕಾರ, ಉಪವಾಸ ಮಾಡುವುದರಿಂದ ಯಕೃತ್ ಮತ್ತು ಸ್ನಾಯುಗಳ ಮೇಲೆ ಪರಿಣಾಮ ಬೀರಿ ಚಯಾಪಚಯ ಕ್ರಿಯೆಯನ್ನು ಸಕ್ರಿಯಗೊಳಿಸುತ್ತವೆ. ಉಪವಾಸ ಮಾಡುವುದರಿಂದ ಆರೋಗ್ಯವಂತರನ್ನಾಗಿಸುತ್ತದೆ ಮತ್ತು ವಯಸ್ಸಾದಂತೆ ಬರುವ ಕಾಯಿಲೆಗಳನ್ನು ತಡೆಯುತ್ತದೆ ಎಂದು ತಿಳಿಸಿದೆ.

**(ಉದಯವಾಣಿ: 29–1–2019)**

## ಅವಿವಾಹಿತ ಪಾದ್ರಿ ಆಯ್ಕೆ ಕಷ್ಟ: ಪೋಪ್ ಫ್ರಾನ್ಸಿಸ್

**ವೆನಿಜುವೆಲಾ:** ಕ್ರೈಸ್ತ ಪಾದ್ರಿಗಳನ್ನು ನೇಮಿಸುವಾಗ ಅವರು ಅವಿವಾಹಿತರೇ ಆಗಿರಬೇಕು ಎಂಬ ನಿಯಮ ಕಡ್ಡಾಯಗೊಳಿಸುವುದು ಸಾಧ್ಯವಿಲ್ಲ ಎಂದು ಪೋಪ್ ಫ್ರಾನ್ಸಿಸ್ ಹೇಳಿದ್ದಾರೆ. ಈ ನಿಯಮ ಕಡ್ಡಾಯಗೊಳಿಸಿದರೆ ಕುಗ್ರಾಮಗಳಲ್ಲಿ ಪಾದ್ರಿಗಳ ನೇಮಕ ಕಷ್ಟಕರ ಎಂದು ಹೇಳಿದ್ದಾರೆ. ಅವಿವಾಹಿತವಾಗಿರುವುದು ಕ್ಯಾಥೊಲಿಕ್ ಚರ್ಚ್‌ಗಳಲ್ಲಿ ವಿಶಿಷ್ಟವಾಗಿದ್ದು, ಇದನ್ನು ಐಚ್ಛಿಕಗೊಳಿಸಬೇಕು ಎಂದಿದ್ದಾರೆ. ಕ್ರೈಸ್ತ ಸನ್ಯಾಸಿನಿಗಳ ಮೇಲೆ ಅತ್ಯಾಚಾರ ಪ್ರಕರಣಗಳು ಕೇಳಿಬರುತ್ತಿರುವ ಹಿನ್ನೆಲೆಯಲ್ಲಿ ಪೋಪ್ ಫ್ರಾನ್ಸಿಸ್ ನೀಡಿರುವ ಹೇಳಿಕೆ ಕ್ರೈಸ್ತರಲ್ಲಿ ಪಾದ್ರಿಗಳ ನೇಮಕಾತಿ ನಿಯಮದ ಬಗ್ಗೆ ಚರ್ಚೆ ಹುಟ್ಟುಹಾಕಲಿದೆ ಎನ್ನಲಾಗಿದೆ. **(ಉದಯವಾಣಿ: 29–1–2019)**

## ಕೆಲವು ಧರ್ಮಗುರು, ಬಿಷಪ್‌ರಿಂದ ಲೈಂಗಿಕ ಕಿರುಕುಳ: ಪೋಪ್

**ಅಬುಧಾಬಿ/ಕೊಚ್ಚಿ,** ಫೆ. 6: ಕ್ರೈಸ್ತ ಸನ್ಯಾಸಿನಿಯರಿಗೆ ಧರ್ಮ ಗುರುಗಳು, ಬಿಷಪ್‌ಗಳು ಲೈಂಗಿಕ ಕಿರುಕುಳ ನೀಡುತ್ತಿರುವುದು ಹೌದು ಎಂದು ಪೋಪ್ ಫ್ರಾನ್ಸಿಸ್ ಒಪ್ಪಿಕೊಂಡಿದ್ದಾರೆ. ವ್ಯಾಟಿಕನ್‌ನಿಂದ ಮಹಿಳೆಯರಿಗಾಗಿ ಪ್ರಕಟವಾಗುವ ನಿಯತಕಾಲಿಕದಲ್ಲಿ ಲೈಂಗಿಕ ಕಿರುಕುಳದ ಬಗ್ಗೆ ವರದಿ ಪ್ರಕಟವಾಗಿರುವಂತೆಯೇ ಅಬುಧಾಬಿ ಪ್ರವಾಸದಿಂದ ವ್ಯಾಟಿಕನ್‌ಗೆ ಹಿಂತಿರುಗುವ ವೇಳೆ ಮಾತನಾಡಿದ ಕ್ರಿಶ್ಚಿಯನ್ನರ ಪರಮೋಚ್ಚ ಧರ್ಮಗುರು ಅಂಥ ಬೆಳವಣಿಗೆಗಳ ಬಗ್ಗೆ ಒಪ್ಪಿಕೊಂಡಿದ್ದಾರೆ. 'ಕೆಲವು ಧರ್ಮ ಗುರುಗಳು ಮತ್ತು ಬಿಷಪ್ ಕ್ರೈಸ್ತ ಸನ್ಯಾಸಿನಿಯರಿಗೆ

ಕಿರುಕುಳ ನೀಡಿದ್ದಾರೆ ವಿಶ್ವದ ಕೆಲವು ಭಾಗಗಳಲ್ಲಿ ಇಂಥ ಪ್ರಕರಣಗಳು ನಡೆಯುತ್ತಿರುವುದು ಗಮನಕ್ಕೆ ಬಂದಿದೆ. ಅಂಥವುಗಳನ್ನು ತಡೆಯಲು ವ್ಯಾಟಿಕನ್ ಕ್ರಮಗಳನ್ನು ಕೈಗೊಳ್ಳುತ್ತಿದೆ. ಕೆಲವು ಧರ್ಮ ಗುರುಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಅವುಗಳ ವಿರುದ್ಧ ಕ್ರಮ ಕೈಗೊಂಡಿಲ್ಲ ಎಂಬ ಮಾತುಗಳನ್ನು ಕೇಳಲು ಬಯಸುವುದಿಲ್ಲ' ಎಂದು ಹೇಳಿದ್ದಾರೆ. ಫೆ 21ರಂದು ಕ್ರೈಸ್ತ ಧರ್ಮ ಗುರುಗಳ ಸಭೆ ಇದೇ ವಿಚಾರಕ್ಕೆ ಸಂಬಂಧಿಸಿದಂತೆ ವ್ಯಾಟಿಕನ್‌ನಲ್ಲಿ ನಡೆಯಲಿದೆ. ಇದೇ ವೇಳೆ ಕೇರಳ ಕ್ಯಾಥೊಲಿಕ್ ಬಿಷಪ್‌ರ ಕೌನ್ಸಿಲ್ ಚರ್ಚ್‌ಗಳಲ್ಲಿ ಲೈಂಗಿಕ ಕಿರುಕುಳ ತಡೆಯಲು ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ.

**(ಉದಯವಾಣಿ 7–2–2019)**

## ಶೌಚ ಕೆಲಸಕ್ಕೆ ಪದವೀಧರರ ಅರ್ಜಿ

**ಚೆನ್ನೈ,** ಫೆ. 6: ಶಿಕ್ಷಣದ ಬಳಿಕ ಉದ್ಯೋಗ ಸಿಗುವುದು ಎಷ್ಟು ಕಷ್ಟ ಎನ್ನುವುದು ಮತ್ತೊಮ್ಮೆ ಸಾಬೀತಾಗಿದೆ. ತಮಿಳುನಾಡು ವಿಧಾನಸಭೆಯಲ್ಲಿ ಕಸಗುಡಿಸುವವರ ಮತ್ತು ಸ್ವಚ್ಛತಾ ಕಾರ್ಯಕ್ಕೆ ಸಂಬಂಧಿಸಿದ 14 ಹುದ್ದೆಗಳಿಗೆ 4,600 ಮಂದಿ ಅರ್ಜಿ ಸಲ್ಲಿಸಿದ್ದಾರೆ. ಅದೂ ಎಂಥವರು ಗೊತ್ತೇ? ಎಂಬಿಎ, ಬಿ.ಇ, ಬಿ.ಟೆಕ್, ಎಂ.ಟೆಕ್ ಪದವಿಗಳನ್ನು ಪಡೆದವರೇ ಅದರಲ್ಲಿ ಹೆಚ್ಚಿನವರು. ಅವರ ಜತೆಗೆ ಇತರ ಸ್ನಾತಕೋತ್ತರ ಪದವೀಧರರು, ಪದವೀಧರರೂ ಸೇರಿದ್ದಾರೆ. ಹುದ್ದೆಗೆ ಅರ್ಜಿ ಸಲ್ಲಿಸಲು ಕನಿಷ್ಠ ವಯೋಮಿತಿ 18. ಗರಿಷ್ಠ ವಯೋಮಿತಿ ನಿಗದಿ ಮಾಡಲಾಗಿಲ್ಲ. ದೃಢಕಾಯರಾಗಿರಬೇಕು ಎಂಬ ನಿಯಮ ವಿಧಿಸಲಾಗಿತ್ತು. ಉದ್ಯೋಗ ಮಾಹಿತಿ ಕೇಂದ್ರಗಳ ಮೂಲಕವೂ ಹುದ್ದೆಗಳಿಗೆ ಅರ್ಜಿ ಸಲ್ಲಿಕೆಯಾಗಿತ್ತು. ಸಮರ್ಪಕವಾಗಿ ಸಲ್ಲಿಕೆಯಾಗಿರಲಿಲ್ಲ ಎಂಬ ಕಾರಣಕ್ಕೆ 677 ಅರ್ಜಿಗಳನ್ನು ತಿರಸ್ಕರಿಸಲಾಗಿದೆ.

**(ಉದಯವಾಣಿ: 7–2–2019)**

## ಹುಟ್ಟಿಸಿದ್ದಕ್ಕೆ ಪೋಷಕರ ವಿರುದ್ಧವೇ ದಾವೆ

ಆಸ್ತಿ ಕಾರಣಕ್ಕೋ ಅಥವಾ ಇನ್ಯಾವುದೋ ಕಾರಣಕ್ಕೋ ತಂದೆ ತಾಯಿ ವಿರುದ್ಧವೇ ಕೋರ್ಟ್‌ನಲ್ಲಿ ಕೇಸು ದಾಖಲಿಸುವ ಮಕ್ಕಳಿಗೇನೂ ಕೊರತೆಯಿಲ್ಲ. ಮುಂಬಯಿನಲ್ಲಿ 27 ವರ್ಷ ವಯಸ್ಸಿನ ವ್ಯಕ್ತಿ ರಾಫೆಲ್ ಸ್ಯಾಮ್ಯುಯೆಲ್ ಒಪ್ಪಿಗೆ ಪಡೆಯದೇ ತನ್ನನ್ನು ಹುಟ್ಟಿಸಿದ ಕಾರಣಕ್ಕಾಗಿ ತನ್ನ ಪೋಷಕರ ವಿರುದ್ಧ ದಾವೆ ಹೂಡಲು ಮುಂದಾಗಿದ್ದಾರೆ. ತಾನು ತನ್ನ ಪಾಲಕರ ವಿರುದ್ಧ ದಾವೆ ಹೂಡಲು ಕಾರಣವನ್ನು ಫೇಸ್ ಬುಕ್‌ನಲ್ಲಿ ಬರೆದಿರುವ ಸ್ಯಾಮ್ಯುಯೆಲ್, 'ನಾನು ನನ್ನ ತಂದೆ ತಾಯಿಯರನ್ನು ಪ್ರೀತಿಸುತ್ತೇನೆ. ಆದರೆ ಅವರು ನನ್ನನ್ನು ಹುಟ್ಟಿಸಿದ್ದು ಅವರ ಖುಷಿ, ಸಂತಸಕ್ಕಾಗಿ ಅಷ್ಟೇ. ಅವರು ಹುಟ್ಟಿಸಿದ್ದಕ್ಕಾಗಿ ನಾನು ಕಷ್ಟಪಡಬೇಕಿದೆ. ಉದ್ಯೋಗ ಮಾಡಬೇಕಿದೆ. ನನಗೆ ಇದು ಯಾವುದೂ ಬೇಕಿರಲಿಲ್ಲ' ಎಂದಿದ್ದಾರೆ. **(ಉದಯವಾಣಿ 7–2–2019)**

## ಕಾಶ್ಮೀರ: ಜಮಾತೆ ಇಸ್ಲಾಮಿಗೆ ದಿಗ್ಬಂಧನ

### ▪ ರಾತೋರಾತ್ರಿ ಕಾರ್ಯಾಚರಣೆ; 150 ಸದಸ್ಯರ ಬಂಧನ ▪ 10 ಸಾವಿರ ಅರೆಸೇನಾ ಪಡೆ ಸಿಬಂದಿ ಕಾಶ್ಮೀರಕ್ಕೆ

ಶ್ರೀನಗರ, ಫೆ, 23: ಪುಲ್ವಾಮಾ ದಾಳಿ ಅನಂತರ ಕಾಶ್ಮೀರ ಕಣಿವೆಯಲ್ಲಿ ಭದ್ರತಾ ಕ್ರಮ ತೀವ್ರಗೊಂಡಿರುವ ಮಧ್ಯೆ ಶುಕ್ರವಾರ ರಾತೋರಾತ್ರಿ ದಿಡೀರ್ ಕಾರ್ಯಾಚರಣೆಗಿಳಿದ ಭದ್ರತಾ ಪಡೆಗಳು ಜಮಾತ್–ಎ–ಇಸ್ಲಾಮಿಯ ಸುಮಾರು 150 ಸದಸ್ಯರನ್ನು ವಶಕ್ಕೆ ಪಡೆದಿವೆ. ಸಂಸ್ಥೆಯ ಮುಖ್ಯಸ್ಥ ಅಬ್ದುಲ್ ಹಮೀದ್ ಫಯಾಜ್‌ರನ್ನೂ ವಶಕ್ಕೆ ಪಡೆಯಲಾಗಿದೆ.

35ಎ ವಿಧಿಯ ಮಾನ್ಯತೆ ಸೋಮವಾರ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಬರುವ ಸಾಧ್ಯತೆಯ ಹಿನ್ನೆಲೆಯಲ್ಲಿ ಈ ಬೆಳವಣಿಗೆ ಮಹತ್ವದ್ದು. ಇದರ ಬೆನ್ನಿಗೆ ಕಣಿವೆಯಲ್ಲಿ ಪರಿಸ್ಥಿತಿ ಉದ್ವಿಗ್ನಗೊಂಡಿದ್ದು ಭದ್ರತೆ ಹೆಚ್ಚಿಸಲಾಗಿದೆ. ಸುಮಾರು 10 ಸಾವಿರ ಅರೆಸೇನಾ ಪಡೆ ಸಿಬಂದಿಯನ್ನು ಕಾಶ್ಮೀರಕ್ಕೆ ರವಾನಿಸಲಾಗಿದೆ.

ಪ್ರತ್ಯೇಕತಾವಾದಿ ನಾಯಕರನ್ನು ವಶಕ್ಕೆ ಪಡೆದಿರುವುದು ಸಾಮಾನ್ಯ ಪ್ರಕ್ರಿಯೆ ಎಂದು ಸೇನಾಪಡೆ ಹೇಳಿದೆ. ಆದರೆ ಇಷ್ಟು ನಾಯಕರನ್ನು ಒಂದೇಟಿಗೆ ವಶಕ್ಕೆ ಪಡೆದಿರುವುದು ಅಪರೂಪ ಎನ್ನಲಾಗಿದೆ.

ಜೆ.ಕೆ.ಎಲ್.ಎಫ್ ಮುಖ್ಯಸ್ಥ ಯಾಸಿನ್ ಮಲಿಕ್‌ರನ್ನೂ ವಶಕ್ಕೆ ಪಡೆದು ಕೋಥಿಬಾಘ ಪೊಲೀಸ್ ಠಾಣೆಯಲ್ಲಿ ಇರಿಸಲಾಗಿದೆ.

ಘಟನೆಯನ್ನು ಪಿಡಿಪಿ ಮುಖ್ಯಸ್ಥೆ ಮಹಬೂಬಾ ಮುಫ್ತಿ ಖಂಡಿಸಿದ್ದಾರೆ. ಯಾಸೀನ್ ಮಲಿಕ್ ವಶ ಅಕ್ರಮ, ಬಲವಂತದ ಕ್ರಮ ಎಂದು ಹುರಿಯತ್ ಕಾನ್ಫರೆನ್ಸ್‌ನ ಮುಖ್ಯಸ್ಥ ಮಿರ್ವೈಜ್ ಉಮರ್ ಫಾರೂಕ್ ಖಂಡಿಸಿದ್ದಾರೆ. **(ಉದಯವಾಣಿ 24–2–2019)**

## ಲೈಂಗಿಕ ಕಿರುಕುಳ ಆರೋಪ: ಪ್ರಮುಖ ಕಾರ್ಡಿನಲ್ ದೋಷಿ

**ಮೆಲ್ಬರ್ನ್:** ಆಸ್ಟ್ರೇಲಿಯಾದ ರೋಮನ್ ಕ್ಯಾಥಲಿಕ್ ಚರ್ಚ್‌ನ ಪ್ರಭಾವಶಾಲಿ ವ್ಯಕ್ತಿ ಕಾರ್ಡಿನಲ್ ಜಾರ್ಜ್ ಪೆಲ್ ಅವರು ಲೈಂಗಿಕ ಕಿರುಕುಳ ಪ್ರಕರಣವೊಂದರಲ್ಲಿ ದೋಷಿ ಎಂಬುದು ಸಾಬೀತಾಗಿದೆ. ಈ ತೀರ್ಪು ಹೊರಬೀಳುತ್ತಿದ್ದಂತೆ ವ್ಯಾಟಿಕನ್ ಸಿಟಿ ಹಾಗೂ ವಿಶ್ವದಾದ್ಯಂತ ಆಘಾತ ವ್ಯಕ್ತವಾಗಿದೆ. ಇವರ ವಿರುದ್ಧ 5 ಆರೋಪಗಳನ್ನು ಹೊರಿಸಲಾಗಿದ್ದು, ಗರಿಷ್ಠ 10 ವರ್ಷ ಜೈಲು ಶಿಕ್ಷೆಗೆ ಅರ್ಹವಾಗುವ ಆರೋಪಗಳಿವು. 77 ವರ್ಷದ ಕಾರ್ಡಿನಲ್ ಅವರು ವ್ಯಾಟಿಕನ್ ಖಜಾಂಚಿಯಾಗಿ ಪೋಪ್ ಅವರಿಗೆ ಆಪ್ತ ಸಲಹೆಗಾರರೂ ಆಗಿದ್ದಾರೆ. 22 ವರ್ಷಗಳ ಹಿಂದೆ ಚರ್ಚ್‌ನಲ್ಲಿದ್ದ ಹದಿಮೂರು ವರ್ಷದ ಬಾಲಕರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಕ್ಕೆ ಪೆಲ್ ಅವರು ಗುರಿಯಾಗಿದ್ದರು. **(ಉದಯವಾಣಿ 27–2–2019)**

## ನಾಯಕರ ಪಾದ ಚುಂಬಿಸಿದ ಪೋಪ್

**ವ್ಯಾಟಿಕನ್ ಸಿಟಿ,** ಎ. 12: ಈ ಹಿಂದೆ ಬದ್ಧ ವೈರಿಗಳಾಗಿದ್ದ ದಕ್ಷಿಣ ಸುಡಾನ್‌ನ ಇಬ್ಬರು ನಾಯಕರ ಪಾದಗಳನ್ನು ಪೋಪ್ ಫ್ರಾನ್ಸಿಸ್ ಶುಕ್ರವಾರ ಚುಂಬಿಸಿದ್ದಾರೆ. ಸಾಮಾನ್ಯವಾಗಿ ಗುರುವಾರದಂದು ಕೈದಿಗಳ ಪಾದ ತೊಳೆಯುತ್ತಿದ್ದ ಪೋಪ್ ಫ್ರಾನ್ಸಿಸ್ ಹಿಂದೆಂದೂ ಯಾವುದೇ ವ್ಯಕ್ತಿಯ ಪಾದ ಚುಂಬಿಸಿರಲಿಲ್ಲ, ಇದೇ ಮೊದಲ ಬಾರಿ ಶಾಂತಿ ಕಾಪಾಡುವಂತೆ ಕೋರಿ ಪೋಪ್ ಇಂಥದ್ದೊಂದು ವಿಶೇಷ ನಡೆ ತೋರಿದ್ದಾರೆ. ದಕ್ಷಿಣ ಸುಡಾನ್‌ನಲ್ಲಿ 2013ರಲ್ಲಿ ನಡೆದ ಹಿಂಸಾಚಾರದಿಂದಾಗಿ ಸುಮಾರು 4 ಲಕ್ಷ ಜನರು ಪ್ರಾಣ ಕಳೆದುಕೊಂಡಿದ್ದರು. ಅಧ್ಯಕ್ಷ ಸಾಲ್ವಾ ಕೀರ್ ಮತ್ತು ವಿಪಕ್ಷ ನಾಯಕ ರೀಕ್ ಮಚರ್ ನಡೆಸಿದ ದಂಗೆ ಇದಕ್ಕೆ ಕಾರಣವಾಗಿತ್ತು. ಅನಂತರದಲ್ಲಿ ಇಬ್ಬರೂ ನಾಯಕರು ಶಾಂತಿ ಕಾಪಾಡಲು ಒಪ್ಪಂದ ಮಾಡಿಕೊಂಡಿದ್ದರು. ಈ ಹಿನ್ನೆಲೆಯಲ್ಲಿ ಶಾಂತಿ ಕಾಪಾಡುವಂತೆ ಕೀರ್, ರೀಕ್ ಮಚರ್ ಮತ್ತು ಮೂವರು ಉಪಾಧ್ಯಕ್ಷರ ಪಾದವನ್ನು ಫ್ರಾನ್ಸಿಸ್ ಚುಂಬಿಸಿದ್ದಾರೆ.

**(ಉದಯವಾಣಿ 13–4–2019)**

### Statement about ownership and other particulars about the Newspaper Yugarashmi Quarterly (Form IV see Rule 8)

| | | |
|---|---|---|
| 1. Place of publication | : | Mangalore |
| 2. Period of its publication | : | Quarterly |
| 3. Printer's Name | : | Muhammad Yusuf |
| Whether citizen of india | : | Yes |
| Address | : | 10-23-1008/1, 1st Floor, Ansari Road, Bunder, Mangalore – 575001 |
| 4. Publisher's Name | : | Muhammad Yusuf |
| Whether citizen of india | : | Yes |
| Address | : | 10-23-1008/1, 1st Floor, Ansari Road, Bunder, Mangalore – 575001 |
| 5. Editor's Name | : | Muhammad Yusuf |
| Whether citizen of india | : | Yes |
| Address | : | 10-23-1008/1, 1st Floor, Ansari Road, Bunder, Mangalore - 575001 |
| 6. Name and address of individuals who own the newspaper and partners or shareholders holding more than one percent of the Capital | : | Jamath Ahmadiyya, "Darussalam", Near Railway Level Crossing, Pandeshwar, Mangalore – 575001 |

I, Muhammad Yusuf hereby declare that the particulars given above are true to the best of my knowledge and belief.

Sd/-

Date : 1-5-2019 Muhammad Yusuf

ಇತ್ತೀಚಿಗಿನ "ಯುಗರಶ್ಮಿ" ಓದಿದೆ. ವಿಚಾರಪ್ರದವಾದ ಲೇಖನದಿಂದ ಕೂಡಿದ ಏಕೈಕ ಧಾರ್ಮಿಕ ಪತ್ರಿಕೆ ಇದಾಗಿದೆ. ಕೇವಲ ಹೊಗಳಿಕೆಗಾಗಿ ಈ ಮಾತನ್ನಾಡುತ್ತಾ ಇಲ್ಲ. ಪತ್ರಿಕೆಯನ್ನು ಎರಡೆರಡು ಬಾರಿ ಕೂಲಂಕಷವಾಗಿ ಓದಿ ಈ ನಿರ್ಣಯ ಕೈಗೊಂಡಿದ್ದೇನೆ.

**ಮುಲ್ಕಿ.** **– ರಾಜ್ ಸುಜನ್ ಉಳ್ಳಾಲ್**

---

ತಮ್ಮ ಎಪ್ರಿಲ್ 81ರ ಸಂಚಿಕೆಯಲ್ಲಿ ಮೂಡಿ ಬಂದ "ದೇವನೊಡನೆ ಯಾಚಿಸಿರಿ" ಎಂಬ ಲೇಖನ ನಿಜಕ್ಕೂ ನಮ್ಮ ಮನಸ್ಸನ್ನೇ ಸೆರೆಹಿಡಿಯಿತು. ಇದನ್ನೋದುತ್ತಿದ್ದಂತೆಯೇ ದೇವನೊಡನೆ ಮಾನವರಾದ ನಾವು ಖಂಡಿತ ಯಾಚಿಸಬೇಕು ಎಂಬುದು ಗಮನಾರ್ಹ ಸಂಗತಿಯಾಗಿ ನಿಲ್ಲುತ್ತದೆ. ಅಲ್ಲದೆ 'ನೇರವಾಗಿ ದೇವನ ಸಮೀಪಕ್ಕೆ ತಲುಪುವ ಮಾರ್ಗವನ್ನು ಕೈಗೊಂಡು, ನನ್ನ ನಾಥಾ, ನಾನು ನಿನ್ನ ಪಾಪಿಯೂ ಪತಿತನೂ ಆದ ದಾಸ, ನೀನು ನನಗೆ ಮಾರ್ಗದರ್ಶನ ಮಾಡು' ಎಂದು ಪ್ರಾರ್ಥಿಸಿರಿ ಎಂಬ ವಾಕ್ಯ ಸದಾ ಜ್ಞಾನ ದೀವಿಗೆಯಾಗಿದೆ. ಇಂಥ ಲೇಖನಗಳು "ಯುಗರಶ್ಮಿ"ಯಲ್ಲಿ ನಿಜಕ್ಕೂ ಸ್ವಾಗತಾರ್ಹ, ಜೊತೆಗೆ ಗಮನಾರ್ಹ. ಮುಂದೆಯೂ ಇಂಥ ಲೇಖನಗಳು ಪ್ರಕಟವಾಗಿ ಈ ಪಾಪಿ ಮಾನವ ಕುಲಕೋಟಿಗೆ ದಾರಿ ದೀವಿಗೆಯಾಗಿ ಬಾಳು ಬೆಳಗಲೆಂದು ಶುಭ ಹಾರೈಸುತ್ತೇನೆ.

**ಇಂಡಿ.** **– ರಾಮನಾಥ್**

---

ನಾನು ಕೇಳಿರುವ ಪ್ರಶ್ನೆಗೆ ತಡಮಾಡದೆ ನಿಮ್ಮ ಪತ್ರಿಕೆಯಲ್ಲಿ ಉತ್ತರ ನೀಡಿದುದಕ್ಕೆ ನನ್ನ ಹೃತ್ಪೂರ್ವಕ ಧನ್ಯವಾದಗಳು. ನಾನು ತಿಳಿಸಿದ ಶರ್ತವನ್ನು ಪಾಲಿಸಿದುದರಲ್ಲಿ ನನಗುಂಟಾದ ಸಂತೋಷವನ್ನು ಈ ಪತ್ರ ಮೂಲಕ ವ್ಯಕ್ತಪಡಿಸುತ್ತಿದ್ದೇನೆ. ಬರೆದ ಲೇಖಕರಿಗೂ ಪ್ರಕಟಿಸಿದ "ಯುಗರಶ್ಮಿ"ಗೂ ಅಲ್ಲಾಹನು ತಕ್ಕ ಪ್ರತಿಫಲವನ್ನು ನೀಡಲಿಯೆಂದು ಪ್ರಾರ್ಥಿಸುತ್ತೇನೆ.

ಮುಸ್ಲಿಮರ ಆ ಅನಾಚಾರ ಕರ್ಮ (ಔಲಿಯಾಗಳೊಡನೆ ಅಭಯಾರ್ಥನೆ)ವನ್ನು ಪವಿತ್ರ ಖುರ್‌ಆನಿನ ವಾಕ್ಯಗಳಿಂದ ಖಂಡಿಸಿ ಸತ್ಯವನ್ನು ವ್ಯಕ್ತಪಡಿಸಿದ್ದು ಒಂದು ಧೀರ ಹೆಜ್ಜೆಯಾಗಿದೆ ಯುಗರಶ್ಮಿ ತನ್ನ 6ನೇ ಸಂಪುಟದ 4ನೇ ಸಂಚಿಕೆಯಲ್ಲಿ ಗೈಯ್ದಿರುವುದೆಂದು ಹೇಳಿದರೆ ಅದು ತಪ್ಪಾಗಲಾರದು. ಉರೂಸ್ ಸಮಾರಂಭಗಳನ್ನು ನಡೆಸುವ ಮುಸ್ಲಿಮರು ಇನ್ನು ಮುಂದೆ ಚಿಂತಿಸಿ ಕಾರ್ಯವೆಸಗಬೇಕಾಗಿದೆ. ಈ ದಿಸೆಯಲ್ಲಿಯೇ ಯುಗರಶ್ಮಿ ಚಲಿಸಿ ಲಕ್ಷಾಂತರ ಜನರು ಯಥಾರ್ಥವನ್ನು ತಿಳಿಯುವಂತೆ ಆ ಮೂಲಕ ಸಹಕಾರಿಯಾಗಲಿ ಎಂದು ಪ್ರಾರ್ಥಿಸುತ್ತಾ ಇನ್ನೊಮ್ಮೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

**– ಮುಹಮ್ಮದ್ ಅಲಿ**

---

ಯುಗರಶ್ಮಿ ಬಹು ಸತ್ಯವುಳ್ಳ ಪತ್ರಿಕೆ ಎಂದು ಅದನ್ನು ಆಳವಾಗಿ ಅಧ್ಯಯನ ಮಾಡಿದಲ್ಲಿ ಅರಿಯದಿರಲಾರದು. ಪ್ರತಿ ಸಂಚಿಕೆಯೂ ಮಾನವನನ್ನು ಸತ್ಯ ಶಾಂತಿಗಳ ಕಡೆಗೆ ಒಯ್ಯುವ ಲೇಖನಗಳಿಂದ ತುಂಬಿ ಬರುತ್ತಿದೆ. ಏಕದೇವನನ್ನೇ ಪ್ರತಿಪಾದಿಸುವ ಈ ಪತ್ರಿಕೆ ಮುಂದಾದರೂ ವಿಸ್ತಾರವಾಗಿ ಪ್ರಸಾರಗೊಳ್ಳುವುದೆಂದು ನಮ್ಮ ನಂಬಿಕೆ.

**ಬೆಣ್ಣೆಹಳ್ಳಿ.** **– ಡಾ. ಬಿ.ಪಿ. ಯಮನೂರ್**

---

ಯುಗರಶ್ಮಿ ಪತ್ರಿಕೆ ಧಾರ್ಮಿಕ ರಂಗದಲ್ಲಿ ಹೊಸ ಒಂದು ಕ್ರಾಂತಿಯನ್ನು ಮಾಡಿದೆ. ಹಿಂದು ಸಹೋದರರಿಗೆ ಇಸ್ಲಾಮಿನ ನೈಜ ರೂಪವನ್ನು ತಿಳಿಯುವರೆ ಅಸಾಧ್ಯವಾಗಿತ್ತು. ಯುಗರಶ್ಮಿಯ ಮೂಲಕ ಆ ಕೊರತೆ ನೀಗುತ್ತಿದೆ. ಅಲ್ಲಾಹನು ತಕ್ಕ ಪ್ರತಿಫಲ ನೀಡಲಿ.

**ಚಿಕ್ಕಮಗಳೂರು.** **– ಎಫ್. ಮುಹಮ್ಮದ್ ಅಲಿ**

---

"ದೇಶಪ್ರೇಮ (ಧಾರ್ಮಿಕ) ವಿಶ್ವಾಸದ ಅಂಶವಾಗಿದೆ."

**–ಹಝ್ರತ್ ಮುಹಮ್ಮದ್ ಪೈಗಂಬರ್(ಸ)**








ಮಂಗಳೂರು: ಮೇ 5ರಂದು ಮಂಗಳೂರಿನ ಅಹ್ಮದಿಯಾ ಮುಸ್ಲಿಂ ಜಮಾಅತ್ ವತಿಯಿಂದ ಲೇಡಿಗೋಶನ್ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು ಹಂಪಲುಗಳನ್ನು ವಿತರಿಸಲಾಯಿತು.



ಮಡಿಕೇರಿ: ಜಾಗತಿಕ ಅಹ್ಮದಿಯಾ ಮುಸ್ಲಿಂ ಜಮಾಅತಿನ ಹ್ಯುಮಾನಿಟಿ ಫಸ್ಟ್ ಸಂಸ್ಥೆಯಿಂದ ಎಪ್ರಿಲ್ 26ರಂದು ಕುಡಿಯುವ ನೀರಿನ ಕೊಡುಗೆ.

Registered with the Registrar of Newspapers for India No. R.N. 27354/75
**Yugarashmi** Kannada Quarterly, **May - 2019.** Price : **Rs. 15/-**

# Ahmadiyya Muslim Community

Apps for mobile devises

Download free apps developed by Ahmadiyya Muslim Community for your iphone, ipode, and Android




**Quran**
Read the Holy Quran in easy Yassarnal Quran Font




**Conditions of Bai'at**
A pocket reference of Shara't-e-Bai'at in 7 languages



**Sermons**
Huzoor's Friday Sermons In 15 languages





**MTA**
Watch MTA Live, view Schedule and much more



**Ahmadiyya News**
Stay up to date with the Latest jama'at news

View these apps at
alislam.org/apps
or scan the QR code below




Edited and Published by Muhammad Yusuf on behalf of Jamath Ahmadiyya at 10-23-1008/1,
Ist Floor, Ansari Road, Mangalore - 575 001. Typing by : U. Basheer Ahmad
Printed at 'Karavali Printers', Azizuddin Road, Mangalore on behalf of Jubilee Printing Press, Mangalore